# ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ

## ಶ್ರೀ ಕಡಿದಾಳ್ ಮಂಜಪ್ಪ


ಡಾ. ಎಸ್. ಎಚ್. ಕವಂಟೆ,

ಮತ್ತು

ಡಾ. ವಿ. ಜಿ. ಪೂಜಾರ್

ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ



ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001.

# ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆ

## ಶ್ರೀ ಕಡಿದಾಳ ಮಂಜಪ್ಪ

Eminent Parliamentarian Series

Sri. KADIDAL MANJAPPA

ಮುದ್ರಣದ ಹಕ್ಕನ್ನು ಕಾಯ್ದಿರಿಸಲಾಗಿದೆ.

ಮೊದಲ ಮುದ್ರಣ
ಡಿಸೆಂಬರ್,1999--1000 ಪ್ರತಿಗಳು

ಮುಖಪುಟ ವಿನ್ಯಾಸ:

ಸರ್ಕಾರಿ ಮುದ್ರಣಾಲಯ, ಬೆಂಗಳೂರು

ಪ್ರಕಟಣೆ

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ

ಕರ್ನಾಟಕ ವಿಧಾನ ಸಭೆ ಸಚಿವಾಲಯ
ವಿಧಾನ ಸೌಧ, ಬೆಂಗಳೂರು-560 001.

# ಪೀಠಿಕೆ

ದೇಶದ ಸ್ವಾತಂತ್ರ ಸುವರ್ಣ ಮಹೋತ್ಸವವನ್ನು ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದು ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿರುವ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಕಿರುಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರ ತಂದಿರುತ್ತಾರೆ. ಅವುಗಳಲ್ಲಿ ಡಾ: ರಾಂಮನೋಹರ ಲೋಹಿಯಾ ಶೇಕ್ ಮಹಮದ್ ಅಬ್ದುಲ್ ಮತ್ತು ಕೃಷ್ಣ ಮೆನನ್ ಮೊದಲಾದ ಗಣ್ಯರ ಬಗ್ಗೆ ಆಂಗ್ಲ ಭಾಷೆಯಲ್ಲಿ ಪ್ರಕಟವಾಗಿದ್ದ ಕಿರುಹೊತ್ತಿಗೆಗಳನ್ನು ನಾವು ಕನ್ನಡದಲ್ಲಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸ ಬಯಸುತ್ತೇನೆ.

ಹಾಗೆಯೇ ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರ ಕುರಿತ ಕಿರುಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು ಈ ಕಾರ್ಯವನ್ನು ವಿಧಾನ ಸಭೆಯ ಸದಸ್ಯರಾದ ಶ್ರೀ. ಬಿ.ಬಿ. ಶಿವಪ್ಪನವರ ಅಧ್ಯಕ್ಷತೆಯಲ್ಲಿ ರಚಿತವಾದ ವಿಧಾನ ಮಂಡಲದ ಗ್ರಂಥಾಲಯ ಉಪಸಮಿತಿಗೆ ವಹಿಸಲಾಗಿತ್ತು. ಈ ಉಪ ಸಮಿತಿಯು ಕಾರ್ಯ ಪ್ರವೃತ್ತವಾಗಿ ರಾಜ್ಯದ ವಿಶ್ವವಿದ್ಯಾನಿಲಯಗಳ ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಿತು.

ಈ ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿ ಗೋಪಾಲಗೌಡ ಮತ್ತು ಶ್ರೀ ಎಸ್. ನಿಜಲಿಂಗಪ್ಪನವರ ಬಗೆಗಿನ ಪ್ರತಿಗಳನ್ನು ಹೊರತಲಾಗಿದೆ.

ಈಗ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಾದ ಡಾ॥ ಎಸ್. ಹೆಚ್. ಕವಂತೆ ಮತ್ತು ಶ್ರೀ ವಿ.ಜಿ. ಪೂಜಾರ್ ಅವರುಗಳು ರಚಿಸಿರುವ ಶ್ರೀ ಕಡಿದಾಳ್ ಮಂಜಪ್ಪ ಅವರ ಬಗೆಗಿನ ಪುಸ್ತಕದ ಪ್ರತಿಯನ್ನು ತಮ್ಮ ಮುಂದಿಡಲು ಹೆಮ್ಮೆ ಎನಿಸುತ್ತದೆ. ಈ ಪುಸ್ತಕವನ್ನು ರಚಿಸಿದ್ದ ಈ ಲೇಖಕರುಗಳಿಗೆ ಹಾಗೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಉಪ ಸಮಿತಿಯ ಸದಸ್ಯರುಗಳಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಪ್ರತಿಬಾವಂತ ಸಂಸದೀಯ ಪಟುಗಳ ಬಗೆಗಿನ ಈ ಕಿರುಹೊತ್ತಿಗೆಗಳು ಮಾನ್ಯ ಸದಸ್ಯರುಗಳಿಗೆ ಮತ್ತು ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಅನುಭವ ನೀಡುತ್ತವೆ ಮತ್ತು ಉಪಯುಕ್ತವಾಗುತ್ತವೆಂದು ಭಾವಿಸುತ್ತೇನೆ.

ಡಿ.ಬಿ. ಕಲ್ಮಣಕರ್
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು

ಎಂ.ವಿ. ವೆಂಕಟಪ್ಪ,
ಸಭಾಧ್ಯಕ್ಷರು
ಕರ್ನಾಟಕ ವಿಧಾನ ಸಭೆ

## ನಮ್ಮ ಮಾತು

ಕರ್ನಾಟಕ ರಾಜ್ಯದ ವಿಧಾನ ಮಂಡಲದ ಸಚಿವಾಲಯವು ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳನ್ನು ಕುರಿತು ಬದುಕು ಬರಹ ಮಾಲಿಕೆಯಲ್ಲಿ ಪುಸ್ತಕಗಳನ್ನು ಪ್ರಕಟಿಸಲು ತೀರ್ಮಾನಿಸಿದ್ದು, ನಿಜಕ್ಕೂ, ಸ್ತುತ್ಯವಾದ ಕಾರ್ಯವಾಗಿದೆ. ಇದರಿಂದ ರಾಜಕೀಯ ಜ್ಞಾನ ಜನಸಾಮಾನ್ಯರಿಗೆ ಆಗುವುದಲ್ಲದೆ, ಸಂಸದೀಯ ಪಟುಗಳ ವಿಚಾರಗಳು ರಾಜಕಾರಣಿಗಳಿಗೆ ತಿಳಿದು ಒಳ್ಳೆಯ ಮಾರ್ಗದರ್ಶನ ಲಭಿಸುವುದು. ಈ ಯೋಜನೆಯಡಿಯಲ್ಲಿ ಈಗಾಗಲೇ ಕೆಂಗಲ್ ಹನುಮಂತಯ್ಯ, ಎಸ್. ನಿಜಲಿಂಗಪ್ಪ ಮುಂತಾದವರ ಕುರಿತು ಮೌಲಿಕ ಗ್ರಂಥಗಳು ಪ್ರಕಟಗೊಂಡಿವೆ. ಅಂಥ ಮಾಲಿಕೆಯಲ್ಲಿ "ಕಡಿದಾಳ ಮಂಜಪ್ಪ" ಗ್ರಂಥವೂ ಒಂದು.

ಶ್ರೀ ಕಡಿದಾಳ ಮಂಜಪ್ಪನವರು ಅತ್ಯಂತ ಪ್ರಾಮಾಣಿಕ ಹಾಗೂ ಸಮಾಜವಾದಿ ತತ್ವಗಳಿಂದ ಪ್ರೇರಣೆ ಪಡೆದ ಶ್ರೇಷ್ಠ ರಾಜಕಾರಣಿ. ಅವರು ಕಂದಾಯ ಮಂತ್ರಿಗಳಾಗಿ, ಕೆಲದಿನ ಮುಖ್ಯಮಂತ್ರಿಗಳಾಗಿ, ಸಲ್ಲಿಸಿದ ಸೇವೆ ಬೆಲೆಯುಳ್ಳದ್ದಾಗಿದೆ. ನಾವಿಲ್ಲಿ ಅವರ ವ್ಯಕ್ತಿತ್ವ ಹಾಗೂ ಅವರು ಶಾಸನ ಸಭೆಯಲ್ಲಿ ಮಾಡಿದ ಭಾಷಣಗಳನ್ನು ನಿರೂಪಿಸಿದ್ದೇವೆ. ಇಂಥ ಗುರುತರವಾದ ಜವಾಬ್ದಾರಿಯನ್ನು ನಮಗೆ ವಹಿಸಿಕೊಟ್ಟ ವಿಧಾನ ಮಂಡಲದ ಗ್ರಂಥಾಲಯದ ಉಪಸಮಿತಿಯ ಅಧ್ಯಕ್ಷರಿಗೂ, ಸದಸ್ಯರಿಗೂ ನಾವು ಕೃತಜ್ಞರಾಗಿದ್ದೇವೆ. ಇಂಥ ಕೆಲಸಕ್ಕೆ ನಮಗೆ ಪ್ರೋತ್ಸಾಹ ನೀಡಿ ಮುನ್ನಡೆಸಿದವರು ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ। ಎಂ.ವಿ. ನಾಡಕರ್ಣಿ ಅವರು, ಅವರಿಗೆ ನಾವು ಕೃತಜ್ಞರಾಗಿರುವೆವು. ಕಡಿದಾಳ ಮಂಜಪ್ಪನವರು ವಿಧಾನ ಸಭೆಯಲ್ಲಿ ಮಾಡಿದ ಭಾಷಣಗಳನ್ನು ಸಂಗ್ರಹಿಸಲು ವಿಧಾನ ಸೌಧಕ್ಕೆ ಹೋದಾಗ ವಿಧಾನಸಭೆ ಸಚಿವಾಲಯದ ಕಾರ್ಯದರ್ಶಿಯವರು ಹಾಗೂ ಅವರ ಸಿಬ್ಬಂದಿ ವರ್ಗದವರು ತುಂಬಾ ಸಹಕಾರ ನೀಡಿದ್ದಾರೆ. ಇವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ರಚಿಸಲು ಸಹಾಯ ಮಾಡಿದ ಶ್ರೀ. ಎಚ್. ಎಸ್. ಕವಂಟಿ ಹಾಗೂ ಈ ಕೃತಿಯನ್ನು ಬೆರಳಚ್ಚು ಮಾಡಿದ ರಾಜ್ಯಶಾಸ್ತ್ರ ವಿಭಾಗದ ಸಂಶೋಧನಾ ಮಿತ್ರರಾದ ಶ್ರೀ ಜಗದೀಶ್ ಆರ್. ಪಂಚಾಳ ಹಾಗೂ ಶ್ರೀ ಈರಣ್ಣಾ ಎನ್. ಇಟ್ಟಿಗಿ ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಡಾ.ಎಸ್.ಎಚ್. ಕವಂಟಿ
ರಾಜ್ಯಶಾಸ್ತ್ರ ಪ್ರಾಧ್ಯಾಪಕರು,

ಡಾ.ವಿ.ಜಿ. ಪೂಜಾರ್
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ

ಗುಲ್ಬರ್ಗಾ ವಿಶ್ವವಿದ್ಯಾಲಯ.
ದಿನಾಂಕ: 08-11-1999

## ಪರಿವಿಡಿ

ಅಧ್ಯಾಯಗಳು

ಪುಟಗಳು

### ಭಾಗ-1


ಶ್ರೀ ಕಡಿದಾಳ್ ಮಂಜಪ್ಪನವರ ವ್ಯಕ್ತಿತ್ವ 3


### ಭಾಗ-2


ಸಂಸದೀಯ ಪಟುವಾಗಿ 23

1 ನೂಗು ಪ್ರಾಜೆಕ್ಟನ್ನು ಪೂರ್ಣಗೊಳಿಸುವ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು. 1952, ಜುಲೈ 1. 23

2. ವಿಧಾನ ಸಭೆಯ ಹಾಲ್ ಅನ್ನು ಜೀರ್ಣೋದ್ಧಾರಗೊಳಿಸುವುದಕ್ಕಾಗಿ ಮಾಡಿದ ವೆಚ್ಚಗಳ ಕುರಿತು-ಪ್ರಶ್ನೋತ್ತರಗಳು. 1952, ಜುಲೈ 14. 25

3. ಹಾಸನ ಜಿಲ್ಲೆಯಲ್ಲಿ, ಕಂದಾಯ ಇಲಾಖೆಗೆ ಒಪ್ಪಿಸಿದ ಅಮೃತ ಮಹಲ್ ಕವಲಿನ ಭೂಮಿಯ ಇತ್ಯರ್ಥ ಕುರಿತು ಪ್ರಶ್ನೋತ್ತರಗಳು 1952, ಜುಲೈ 14. 26

4. ಬೆಂಗಳೂರು ಜಿಲ್ಲೆಯಲ್ಲಿನ ಕೆರೆಗಳ ಕುರಿತು ಪ್ರಶ್ನೋತ್ತರಗಳು 1952, ಜುಲೈ 14. 27

5. ಅರಣ್ಯ ಅಮೃತ ಮಹಲ್ ಮತ್ತು ಡೇಟ್ ರಿಸರ್ವ ಪ್ರದೇಶಗಳಿಂದ ಸಾಗುವಳಿಗಾಗಿ, ಭೂಮಿಯ ಬಿಡುಗಡೆ ಕುರಿತು ಪ್ರಶ್ನೋತ್ತರಗಳು. 1952, ಜುಲೈ 14. 28

6. ಗೋರೂರಿನ ಹೇಮಾವತಿ ನದಿಯ ಬಳಿಯಲ್ಲಿ ಡ್ಯಾಮಿನ ನಿರ್ಮಾಣ ಕುರಿತು ಪ್ರಶ್ನೋತ್ತರಗಳು. 1952, ಜುಲೈ 15. 31

7. ಭೂ ಸುಧಾರಣೆಯ ಸಮಿತಿಯ ಶಿಫಾರಸ್ಸುಗಳ ಕುರಿತು ಪ್ರಶ್ನೋತ್ತರಗಳು. 1952, ಜುಲೈ 15. 33

8. ಸಾಮುದಾಯಕ ಯೋಜನೆಗಳ ಕುರಿತು ಪ್ರಶ್ನೋತ್ತರಗಳು 1952 ಜುಲೈ 15. 34

9. ಕಾವೇರಿ ನೀರಿನ ಹಂಚಿಕೆಯ ಕುರಿತು ಮೈಸೂರು ಮತ್ತು ಮದ್ರಾಸ ಸರಕಾರಗಳ ಒಪ್ಪಂದದ ಕುರಿತು ಪ್ರಶ್ನೋತ್ತರಗಳು. 1952, ಜುಲೈ 15. 35

10. ರೈತರನ್ನು ಸಾಲದಿಂದ ಮುಕ್ತ ಗೊಳಿಸುವ ಕುರಿತು ಪ್ರಶ್ನೋತ್ತರಗಳು 1952 ಜುಲೈ 15. 36

11. ಭೀಮಪ್ಪ ನಾಯಕರು ಕ್ಷಾಮ ಪರಿಸ್ಥಿತಿ ಯ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಕೊಂಡು ಆ ಕಷ್ಟವನ್ನು ನಿವಾರಣೆ ಮಾಡಲು ನಿಪುಣರ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಕೇಳಿದಾಗ ಆ ನಿರ್ಣಯದ ಬಗ್ಗೆ ಹೇಳಿಕೆ 1952 ಅಕ್ಟೋಬರ್, 25 37

12. ಮಾರಾಟಕರ ಮೇಲಿನ ಸಮಿತಿಯ ಶಿಫಾರಸ್ಸುಗಳು 1953,ಮಾರ್ಚ್ 10 46

13. ಸಾಮುದಾಯಿಕ ಯೋಜನೆಗಳ ಕಾರ್ಯ ಯೋಜನೆ 1953,ಮಾರ್ಚ್ 26 47

14. ಟೆನೆನ್ಸಿ ಆ್ಯಕ್ಟ ಮೇಲಿನ ಚರ್ಚೆಗೆ ಸ್ಪಷ್ಟೀಕರಣ. 1953, ಮಾರ್ಚ್ 27. 51

15. ಮೈಸೂರು ಇನಾಮ್ ಪದ್ಧತಿಯ ಮಸೂದೆಯ ಮೇಲೆ ಜಂಟಿ ಸೆಲೆಕ್ಟ ಸಮಿತಿಯ ಒಪ್ಪಿಗೆ ಕುರಿತು ಸ್ಪಷ್ಟೀಕರಣ, 1953, ಎಪ್ರಿಲ್ 11. 54

16. Mysore sales tax (Amendment) Bill 1953 55

17. ಮೈಸೂರು ಕೃಷಿಕರ ಪರಿಹಾರ (ತಿದ್ದುಪಡಿ) ಮಸೂದೆ 1953. 57

18. ಆಂಧ್ರ ರಾಜ್ಯ ಮಸೂದೆ ಮಂಡಿಸಿದಾಗ ಹೇಳಿಕೆ 1953, ಜುಲೈ 27. 58

19. ಮೈಸೂರು ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಮಸೂದೆ (ತಿದ್ದುಪಡಿ) 1954. 1954, ಜನವರಿ 20. 59

## ಭಾಗ-3

## ರಾಜ್ಯದ ಮುಖ್ಯಮಂತ್ರಿಯಾಗಿ

1. ಶ್ರೀ ಕೆ.ಟಿ.ಭಾಷ್ಯಂ ಅವರ ನಿಧನದ ನಂತರ ಸಂತಾಪ ಸೂಚಕ ನಿರ್ಣಯದ ಮೇಲೆ ಭಾಷಣ 1956 ಸೆಪ್ಟಂಬರ್ 20. 68

2. ಮೈಸೂರು ರಿಜಿಸ್ಟ್ರಾರ್ ಜನರಲ್ -ಜನನ, ಮರಣ ಮತ್ತು ವಿವಾಹಗಳ ಮಸೂದೆ -1956 ನಿಲುವಳಿಯ ಮಂಡನೆಯ ಮೇಲಿನ ಸ್ಪಷ್ಟೀಕರಣ 1956, ಸೆಪ್ಟೆಂಬರ್ 26. 70

3. ಸಂವಿಧಾನ (7ನೇ ತಿದ್ದುಪಡಿ) ಮಸೂದೆ 1956 ರ ಕುರಿತು ಅಧಿಕೃತ ನಿರ್ಣಯದ ಬಗ್ಗೆ ಸ್ಪಷ್ಟೀಕರಣ 1956, ಸೆಪ್ಟಂಬರ್ 26. 71

4. ಸಂವಿಧಾನದ ಅನುಮೋದನೆ (7ನೇ ತಿದ್ದುಪಡಿ) ಮಸೂದೆ 1956 ಕುರಿತು ಸ್ಪಷ್ಟೀಕರಣ 1956, ಸೆಪ್ಟೆಂಬರ್ 27 75

5. ಜೋನಲ್ ವಿಭಾಗಗಳ ಕುರಿತು ಸ್ಪಷ್ಟೀಕರಣ. 1956 ಸೆಪ್ಟಂಬರ್ 27. 79

6. ರಾಜ್ಯಗಳ ಪುನರ್ ವಿಂಗಡಣೆ ಕುರಿತು ಸ್ಪಷ್ಟೀಕರಣ. 1956, ಸೆಪ್ಟಂಬರ್ 27 84

7. ಮೈಸೂರು ವಿಧಾನಸಭೆ-ನೂತನ ಮೈಸೂರು ರಾಜ್ಯ (ಸಿಬ್ಬಂದಿ ವರ್ಗದ ಆಸ್ತಿ ಮತ್ತು ಹೊಣೆಗಳ ಮರು ಹಂಚಿಕೆ) ಸ್ಪಷ್ಟೀಕರಣ. 1956, ಸೆಪ್ಟೆಂಬರ್ 28. 89

8. ಇತರ ಜಾತಿ ಹಿಂದುಗಳು, (ಸರಕಾರದ ಸೇವೆಯಲ್ಲಿ ನೇಮಕಾತಿಗಳು) ಕುರಿತು ಪ್ರಶ್ನೋತ್ತರಗಳು 1956 ಅಕ್ಟೋಬರ್ 01. 92

9. ಹಣಕಾಸು ವಿಚಾರಣಾ ಸಮಿತಿಯ ವರದಿಯ ಮೇಲಿನ ಚರ್ಚೆಗೆ ಸ್ಪಷ್ಟೀಕರಣ. 1956, ಅಕ್ಟೋಬರ್ 17.0 98

ಭಾಗ-4

ಕಡಿದಾಳ ಮಂಜಪ್ಪನವರು ತಮ್ಮ ಕ್ಷೇತ್ರದಲ್ಲಿ ಕೈಕೊಂಡ ಅಭಿವೃದ್ಧಿ ಕಾರ್ಯಗಳು. 105

# ಭಾಗ - 1

# ಶ್ರೀ ಕಡಿದಾಳ್ ಮಂಜಪ್ಪನವರ ವ್ಯಕ್ತಿತ್ವ

# ಭಾಗ-1

## ಶ್ರೀ ಕಡಿದಾಳ್ ಮಂಜಪ್ಪ-ವ್ಯಕ್ತಿತ್ವ

ಕಡಿದಾಳ್ ಮಂಜಪ್ಪನವರು ಕನ್ನಡ ನಾಡಿನಲ್ಲಿ ಅನ್ಯಾಯ, ಅತ್ಯಾಚಾರ, ದುರಾಚಾರಗಳ ವಿರುದ್ಧ ಹೋರಾಡಿ ರಾಜಕೀಯ ಚಿಂತಕರಲ್ಲಿ ಒಬ್ಬರಾಗಿ, ರಾಜ್ಯನೀತಿ ನಿಪುಣರಾಗಿ ಕೆಲಸ ಮಾಡಿದರು.ಇವರು ತಮ್ಮ ಜೀವಿತದಲ್ಲಿ ನ್ಯಾಯಕ್ಕಾಗಿ ಹೋರಾಡಿ ಸಂಘಟನೆಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುವುದರೊಂದಿಗೆ ಸೆರೆಮನೆ ವಾಸ ಕೂಡಾ ಅನುಭವಿಸಿದರು. ಜತ್ತಿ ಹಾಗೂ ಕೆಂಗಲ್ ಹನುಮಂತಯ್ಯನವರ ಸಚಿವ ಸಂಪುಟದಲ್ಲಿ ಸಚಿವರಾಗಿ ರಾಜ್ಯಕ್ಕೆ ಅಮೋಘ ಸೇವೆ ಸಲ್ಲಿಸಿರುವರು. ನ್ಯಾಯ ನೀತಿಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶ್ರೇಷ್ಠ ರಾಜಕಾರಣಿ ಕಡಿದಾಳ ಮಂಜಪ್ಪ.

### ಜನನ, ಬಾಲ್ಯ- ವಿದ್ಯಾಭ್ಯಾಸ

ಕಡಿದಾಳ್ ಮಂಜಪ್ಪನವರು 1910ನೇ ಜುಲೈ 10 ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹಾರೋಳ್ಳಿ ಎಂಬ ಗ್ರಾಮದಲ್ಲಿ ಮಧ್ಯಮ ರೈತ ಕುಟುಂಬದ ಶ್ರೀ ದುಗ್ಗಪ್ಪಗೌಡ ಮತ್ತು ಗಂಗಮ್ಮನವರ ಉದರದಲ್ಲಿ ಜನಿಸಿದರು. ಹಾರೋಳ್ಳಿ ಸಹ್ಯಾದ್ರಿಯ ತಪ್ಪಲಿನಲ್ಲಿರುವಂತಹ ಊರು. ರಮ್ಯವಾದಂತಹ ಸ್ಥಳ. ಇವರ ಮನೆತನದ ಹೆಸರು ಕಡಿದಾಳ. ಮಂಜಪ್ಪನವರ ಪೂರ್ವಜರು ಪಾಳೆಗಾರರ ಹತ್ತಿರ ಸೈನಿಕರಾಗಿರುವುದರೊಂದಿಗೆ ಜಗಜಟ್ಟಿ ಕಡಿದಾಳುಗಳಾಗಿದ್ದರಿಂದ ಇವರಿಗೆ ಕಡಿದಾಳು ಎಂದು ಕರೆಯುತ್ತಿದ್ದರು. ಇದರಿಂದಾಗಿ ಇವರಿಗೆ ಇದು ಮನೆತನದ ಹೆಸರಾಗಿ ಬಂತು. ಕಡಿದಾಳರು ತಮ್ಮ 12 ನೇ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ನತದೃಷ್ಟರು. ಇವರಿಗೆ ನಾಲ್ಕು ಜನ ತಮ್ಮಂದಿರು.ಮೂರು ಜನ ತಂಗಿಯರಿದ್ದರು. ತಂದೆ ತೀರಿಕೊಂಡ ನಂತರ ಮನೆಯ ಜವಾಬ್ದಾರಿಯೆಲ್ಲಾ ಕಡಿದಾಳರ ಮೇಲೆಯೇ ಬಿತ್ತು, ಹಲವಾರು ಕಷ್ಟನಷ್ಟಗಳನ್ನು ಅನುಭವಿಸುತ್ತಾ ಜೀವನ ಸಾಗಿಸುವುದರೊಂದಿಗೆ ತಮ್ಮ ಶೈಕ್ಷಣಿಕ ಜೀವನವನ್ನು ಅಷ್ಟೇ ವಿನಯಶೀಲತೆಯಿಂದ ಸಾಗಿಸಿದರು. 1927ರಲ್ಲಿ ಕಡಿದಾಳರಿಗೆ ಗಾಂಧೀಜಿಯವರ ದರ್ಶನವೂ ಆಯಿತು.

ತೀರ್ಥಹಳ್ಳಿ, ಶಿವಮೊಗ್ಗ, ಬೆಂಗಳೂರು, ಮೈಸೂರುಗಳಲ್ಲಿ ವಿದ್ಯಾರ್ಥಿಯಾಗಿ ಬಿ.ಎ.ಪದವಿಯನ್ನು ಪಡೆದರು, ಬಿ. ಎಲ್. ಪದವಿಗಾಗಿ 'ಪೂನಾ' ಕ್ಕೆ ಹೋದರು. ತೀರ್ಥಹಳ್ಳಿಯ ಕೂಲಿಮಠದಲ್ಲಿ ಮೂರು ವರ್ಷ ಅಭ್ಯಾಸ ಮಾಡಿದರು. ಮೂರು ವರ್ಷದಲ್ಲಿಯೇ ಕನ್ನಡವನ್ನು ವ್ಯಾಕರಣಬದ್ಧವಾಗಿ ಮಾತನಾಡುವುದನ್ನು ಬರೆಯುವುದನ್ನು ಕಲಿತರು. ದೇವಗಿರಾಮಣ್ಣಗೌಡ ಇವರು ಒಬ್ಬ ಅಡಿಕೆ ವ್ಯಾಪಾರಿ, ಇವರ ಹತ್ತಿರ ಹೋಗಿ ಪ್ರಾಥಮಿಕ ಶಿಕ್ಷಣ (ನಾಲ್ಕನೆಯ ತರಗತಿ)ವನ್ನು ಮುಗಿಸಿದರು. ನಂತರ ಇಂಗ್ಲೀಷ್ ಶಾಲೆಗೆ ಸೇರಿದರು. ಆದರೆ ಇವರಿಗೆ ಇಂಗ್ಲೀಷ್ ಬರುತ್ತಿರಲಿಲ್ಲ, ಎಷ್ಟೇ ಪ್ರಯತ್ನಪಟ್ಟರೂ ಇಂಗ್ಲಿಷ್ ಬರಲಿಲ್ಲ ಎಂಬ ಹಣೆಪಟ್ಟಿಯನ್ನು ಸುಬ್ಬರಾಯ ಶಿಕ್ಷಕರಿಂದ ಕಟ್ಟಿಸಿಕೊಂಡು ಊರು ಸೇರಿದರು. ಊರಿಗೆ ಬಂದ ನಂತರ ಎಲ್ಲಾ ಪಠ್ಯಪುಸ್ತಕಗಳನ್ನು ತಿರುವಿ ಹಾಕಿದರು. ಆಗ ಇವರಿಗೆ ಇಂಗ್ಲೀಷ್ ಬರುತ್ತದೆ ; ಎಂದು ಅನಿಸಿತು. ತಕ್ಷಣವೇ ಸುಬ್ಬರಾಯ ಶಿಕ್ಷಕರ ಹತ್ತಿರ ಹೋಗಿ ಇಂಗ್ಲೀಷ್ ಬರುತ್ತದೆ ಎಂಬುದನ್ನು ತೋರಿಸಿಕೊಟ್ಟರು.

ಪ್ರೌಢ ಶಿಕ್ಷಣಕ್ಕಾಗಿ ಬೆಂಗಳೂರಿನಲ್ಲಿ ಹೈಸ್ಕೂಲ ಸೇರಿಕೊಂಡರು, ಆದರೆ ಬೆಂಗಳೂರಿನ ವಾತಾವರಣ ಇವರಿಗೆ ಹಿಡಿಸಲಿಲ್ಲ, ಖಾಯಿಲೆ ಬಿದ್ದು, ತಮ್ಮ ಊರಿಗೆ ಮರಳಿ ಬಂದರು. ನಂತರ ಶಿವಮೊಗ್ಗದಲ್ಲಿ ಪ್ರೌಢ ಶಿಕ್ಷಣವನ್ನು ಕಲಿಯಲು ಪ್ರಾರಂಭಿಸಿದರು. ಪ್ರೌಢಶಾಲೆಯಲ್ಲಿ ಯಂಗ್ ಇಂಡಿಯಾ, ಆಳಸಿಂಗಾಚಾರ್ಯರ ರಾಮಾಯಣ, ಗಳಗನಾಥರ ಕಾದಂಬರಿ ವೆಂಕಟಾಚಾರ್ಯರ ಕಾದಂಬರಿ ಶೇಷಗಿರಿಯ ನಾಟಕಗಳು ಮುಂತಾದವುಗಳನ್ನು ಪ್ರೌಢಶಿಕ್ಷಣದ ಹಂತದಲ್ಲಿ ಕಲಿತರು. ಹೀಗಾಗಿ ಇವರಿಗೆ ಜ್ಞಾನದ ದಾಹ ಹೆಚ್ಚಾಯಿತು, ಕನ್ನಡ ಇಂಗ್ಲಿಷ್ ಎರಡರಲ್ಲೂ ಪ್ರಬುದ್ಧತೆ ಸಾಧಿಸಿಕೊಳ್ಳಹತ್ತಿದರು.

ಪ್ರೌಢ ಶಿಕ್ಷಣ ಮುಗಿಸಿಕೊಂಡು ಉನ್ನತ ವ್ಯಾಸಂಗದ ಸಲುವಾಗಿ ಎಂಟ್ರೆನ್ಸ್ ಸೇರಿದರು. ಈ ಸಮಯದಲ್ಲಿ ಇವರ ಆರೋಗ್ಯ ಸರಿಯಾಗಿ ಇರಲಿಲ್ಲ. ಎಂಟ್ರೆನ್ಸದಲ್ಲಿ ಎರಡು-ಮೂರು ಅಂಕಗಳು ಕಡಿಮೆ ಬಂದಿದ್ದವು, ಆದರೂ ಧೈರ್ಯಗುಂದದೆ ಕಾಲೇಜಿನ ಸುಪರಿಂಡೆಂಟರ ಹತ್ತಿರ ಹೋಗಿ ಪ್ರವೇಶಕ್ಕೆ ಕೇಳಿಕೊಂಡರು. ಅದೇ ಸಮಯದಲ್ಲಿ ಎಫ್. ಎ. ಕೋರ್ಸನ್ನು ತೆಗೆದುಹಾಕಿ ಇಂಟರಮಿಡಿಯಟ್‌ನ್ನು ತಂದಿದ್ದರು. ಇವರು ಎರಡು ವರ್ಷ ಅಲ್ಲೇ ಓದಬೇಕಾದ ಪ್ರಸಂಗ ಬಂತು. ಕಾಲೇಜಿನ ಸುಪರಿಂಡೆಂಟ ನಾಗೇಶರಾಯರು ಮಂಜಪ್ಪನವರನ್ನು ಕರೆದು ಏನಪ್ಪಾ ನಿನಗೆ ಎಷ್ಟು ಅಂಕಗಳು ಬಂದಿವೆ, ಎಂದು ಕೇಳಿದಾಗಿ ಎರಡು ಮೂರು ಅಂಕಗಳು ಕಡಿಮೆ ಬಂದಿವೆ ಸರ್ ಎಂದು ತಮ್ಮ ಮನದಳಲನ್ನು ತಿಳಿಸಿದರು. ಆಗ ಸುಬ್ಬರಾಯರು ಹುಡಗನಲ್ಲಿ ಅಡಗಿದ್ದ ಸುಪ್ತ ಪ್ರತಿಭೆಯನ್ನು ಗಮನಿಸಿ ಒಂದು ಪ್ರಶ್ನೆಪತ್ರಿಕೆಯನ್ನು ಇಂಗ್ಲೀಷಿನಲ್ಲಿ ತಯಾರಿಸಿದರು. ಅದನ್ನು ಮಂಜಪ್ಪನವರಿಗೆ ಕೊಟ್ಟು 20 ನಿಮಿಷ ಕಾಲಾವಕಾಶ ನೀಡಿದರು. 20 ನಿಮಿಷಗಳ ಕಾಲಾವಧಿಯಲ್ಲಿಯೇ ಪ್ರಶ್ನೆ ಪತ್ರಿಕೆಯನ್ನು ಬಿಡಿಸಿ ಸುಬ್ಬರಾಯರಿಗೆ ಒಪ್ಪಿಸಿದರು. ಆಗ ಸುಬ್ಬಾರಾಯರು ಅದನ್ನು ಮೌಲ್ಯಮಾಪನ ಮಾಡಿ ನೀನು ಉತ್ತೀರ್ಣನಾಗಿರುವಿ ಎಫ್. ಎ. ದಿಂದ ಬಿ.ಎ. ಸೇರಲು ನಿನಗೆ ಉತ್ತಮ ಅವಕಾಶವಿದೆ, ಎಂದು ಹೇಳಿ ಉತ್ತೀರ್ಣ ಪ್ರಮಾಣ ಪತ್ರ ನೀಡಿದರು. ಆಗ ಮಂಜಪ್ಪನವರಿಗೆ ಆದ ಸಂತೋಷಕ್ಕೆ ಮಿತಿಯೇ ಇಲ್ಲದಂತಾಯಿತು. ಉತ್ಸಾಹದಿಂದ ಪದವಿ ಶಿಕ್ಷಣ ಪಡೆಯಲು ಮಹಾರಾಜ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಂಡು ಪದವಿ ಶಿಕ್ಷಣವನ್ನು ಮುಗಿಸಿದರು. ಬಿ.ಎಲ್. ಪದವಿಯನ್ನು ಪೂನಾ ದಲ್ಲಿ ವ್ಯಾಸಂಗ ಮಾಡಿದರು.

1927 ರಲ್ಲಿಯೇ ಗಾಂಧೀಜಿಯವರ ದರ್ಶನ ಪಡೆದ ಇವರು ಅವರ ತತ್ವಗಳಿಗೆ ಮಾರು ಹೋದರು. ಹೀಗಾಗಿ ಇವರ ಮೇಲೆ ಗಾಂಧೀಜಿಯವರು ಗಾಢವಾದ ಪ್ರಭಾವ ಬೀರಿದರು.

## ವಕೀಲ ವೃತ್ತಿ

1935-36ರಲ್ಲಿ ಶಿವಮೊಗ್ಗದಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ನ್ಯಾಯವಾದ ಮಾರ್ಗದಲ್ಲಿ ಬಾಳಲು ಪಣತೊಟ್ಟರು. ವಕೀಲವೃತ್ತಿ ಪ್ರಾರಂಭಿಸಬೇಕಾದರೆ ಬೇರೆಯವರ ಹತ್ತಿರ 150 ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಖರ್ಚುಮಾಡುವುದರೊಳಗಾಗಿ ಗಿರಾಕಿ ಸಿಗಬೇಕು ಎನ್ನುವ ವಿಚಾರದಲ್ಲಿದ್ದ ಕಡಿದಾಳರು ಹಲವಾರು ರೀತಿಯ ಕಷ್ಟನಷ್ಟಗಳನ್ನು ಅನುಭವಿಸುತ್ತ, ಎರಡೇ ಹೊತ್ತು ಊಟ ಮಾಡುತ್ತ ಕಾಲ ಕಳೆಯಹತ್ತಿದರು. ಈ ಸಂದರ್ಭದಲ್ಲಿ ರೋಗಿ ಬಯಸಿದ್ದು ಹಾಲು ಅನ್ನ ವೈದ್ಯ ಹೇಳಿದ್ದೂ ಅದೇ ಅನ್ನುವಂತೆಯೇ ಕೇಸುಗಳು

ಬರತೊಡಗಿದವು. ವಕೀಲ ವೃತ್ತಿಯಿಂದ ನೆಮ್ಮದಿಯ ಜೀವನ ಸಾಗಿಸಬೇಕು ಎನ್ನುವ ವಿಚಾರದಲ್ಲಿ ತೊಡಗಿದ್ದರು. ಇದೇ ಸಮಯದಲ್ಲಿಯೇ ಅಂದರೆ 1938ರಲ್ಲಿ ಹಳೇ ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷ ಸ್ಥಾಪನೆಯಾಯಿತು. ಇವರು ಇದರ ಸದಸ್ಯರಾದರು. ಮದ್ದೂರಿನ ಬಳಿ ಇರುವ ಶಿವಪುರದಲ್ಲಿ ಉಪವಾಸ ಸತ್ಯಾಗ್ರಹ ನಡೆಯಿತು. ಇವರು ಒಬ್ಬ ಪ್ರತಿನಿಧಿಯಾಗಿ ಬಂದು ಭಾಗವಹಿಸಿದರು. 1938ರಲ್ಲಿ ಇಟ್ಟಂತಹ ಹೆಜ್ಜೆ ಅವರ ರಾಜಕೀಯ ಜೀವನದಲ್ಲಿ ಮಹತ್ತರವಾದದ್ದನ್ನೇ ಸಾಧಿಸಲು ಅನುವಾಯಿತು.

## ಸಾಧನೆ

ವಕೀಲ ವೃತ್ತಿ ಆರಂಭಿಸಿದ ಮೂರೇ ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗುವುದರೊಂದಿಗೆ ರಾಜಕೀಯ ಜೀವನದಲ್ಲಿ ಕಾಲಿಟ್ಟರು. ತಾವು ಗಳಿಸಿದ ಹಣವನ್ನೆಲ್ಲಾ ಪಕ್ಷಕ್ಕಾಗಿ ಖರ್ಚುಮಾಡಿದರು. 1939ರಲ್ಲಿ ಅರಣ್ಯ ಸತ್ಯಾಗ್ರಹವನ್ನು ಮಾಡಲು ಪ್ರಾರಂಭಿಸಿದ ಅದರ ನಾಯಕತ್ವವನ್ನು ತಾವೇ ವಹಿಸಿಕೊಂಡರು. 1941ರಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತರಾದರು. ನಂತರ 1942ರಲ್ಲಿ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಚಳುವಳಿಯಲ್ಲಿ ಭಾಗವಹಿಸಿದರು. ಸೆರೆಮನೆ ವಾಸ ಕೂಡಾ ಆಯಿತು. 1945ರಲ್ಲಿ ನ್ಯಾಯ ವಿಧಾಯಕರ ಸಭೆಗೆ ಅವಿರೋಧವಾಗಿ ಆಯ್ಕೆಯಾದರು. 1947ರಲ್ಲಿ ಮೈಸೂರು ರಾಜ್ಯದ ಜವಾಬ್ದಾರಿಯುತ ಸರ್ಕಾರವನ್ನು ರಚಿಸಬೇಕೆನ್ನುವ ಚಳುವಳಿಯಲ್ಲಿ ಮುಂದಾಳತ್ವವನ್ನು ವಹಿಸುವುದರೊಂದಿಗೆ ಸೆರೆಮನೆ ಸೇರಿದರು. ಒಂದಲ್ಲ ಎರಡಲ್ಲ ಹಲವಾರು ರೀತಿಯ ಚಳುವಳಿಗಳಲ್ಲಿ ಪಾಲ್ಗೊಂಡರು. ಮತ್ತು ಮುಂದಾಳುಗಳಾಗಿ ಭಾಗವಹಿಸಿದರು. 1952ರ ವಿಧಾನಸಭಾ ಚುನಾವಣೆಯಲ್ಲಿ ತೀರ್ಥಹಳ್ಳಿಯಿಂದ ಆಯ್ಕೆಯಾದರು. ಕೆಂಗಲ್ ಹನುಮಂತಯ್ಯನವರ ಸಚಿವ ಸಂಪುಟದಲ್ಲಿ ಕಂದಾಯ ಮತ್ತು ಲೋಕೋಪಯೋಗಿ ಇಲಾಖೆಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು.

ಅಸೆಂಬ್ಲಿಯ ಸದಸ್ಯರಾದ ಮೇಲೆ ಒಂದು ಪ್ರಸಂಗ ಜರುಗಿತು. ಆ ಪ್ರಸಂಗ ಎಲ್ಲರ ಮನಸ್ಸಿನ ಕದತಟ್ಟುವಂತಿದೆ. ಇವರು ಅಸೆಂಬ್ಲಿಯ ಸದಸ್ಯರಾದಾಗ ಎನ್. ಮಾಧವರಾಯರು ದಿವಾನರಾಗಿದ್ದರು. ಇವರ ಅಧ್ಯಕ್ಷತೆಯಲ್ಲಿ ಅಸೆಂಬ್ಲಿಯು ಯಶಸ್ವಿಯಾಯಿತು, ಸೆಷನ್ಸ್ ನಡೆಯುವಾಗ ಲಂಚ ನೀಡುವುದರ ವಿರುದ್ಧ, ಭ್ರಷ್ಟಾಚಾರದ ವಿರುದ್ಧವಾಗಿ ಮಸೂದೆಯನ್ನು ಮುಂದಿಟ್ಟ ಮಂಜಪ್ಪನವರು 'ಲಂಚ, ಭ್ರಷ್ಟಾಚಾರ, ಅರಾಜಕತೆ ತಾಂಡವವಾಡುತ್ತಿದೆ ಎಂಬುದರ ಕುರಿತು ವಿವರವಾದ ವಿವರಣೆಯನ್ನು ನೀಡಿದರು. ಆದರೆ ಯಾವ ರೀತಿಯಲ್ಲಿ ಇವುಗಳನ್ನು ನಿಯಂತ್ರಿಸಬೇಕು ಎಂಬುವುದನ್ನು ಹೇಳಿರಲಿಲ್ಲ. ಆಗ ದಿವಾನರು ಮಂಜಪ್ಪನವರೇ ಏನೆಲ್ಲಾ ಮಾತನಾಡಿದ್ದೀರಿ ಯಾವ ರೀತಿಯಿಂದ ತಪ್ಪಿಸಬೇಕು ಎಂಬುದನ್ನು ಹೇಳಲಿಲ್ಲವೆಂದು ಕೇಳಿದಾಗ 'ಅಧಿಕಾರ ಬಿಟ್ಟುಬಿಡಿ'ನಾನೆಲ್ಲ ಮಾಡಿ ತೋರಿಸುತ್ತೇನೆ. ಅಂದಾಗ ದಿವಾನರು ಈ ರೀತಿಯಾಗಿ ಹೇಳುತ್ತಾರೆ'ನಿನಗೂ ಅಧಿಕಾರ ಬರುತ್ತದೆ ಸ್ವಲ್ಪ ತಡಿಯಬೇಕು ಇಷ್ಟು ಬೇಗ ಸಿಗುವುದಿಲ್ಲ.' ಸ್ವಲ್ಪ ದಿವಸ ಆದ ಮೇಲೆ ಖಂಡಿತವಾಗಿ ನಿನಗೆ ಅಧಿಕಾರ ಸಿಗುತ್ತದೆ (ಹೋರಾಟ ಶ್ರೀ (ಸಂ) ಹೊ. ಶ್ರೀನಿವಾಸಯ್ಯ ಪುಟ-28-29) ಎಂದು ಹೇಳಿದರಂತೆ ಆದರೆ ಈ ಮಸೂದೆ ಮಂಡಿಸುವಲ್ಲಿ ಇವರೇ ಪ್ರಮುಖರು. ಆದರೂ ಲಂಚ ಭ್ರಷ್ಟಾಚಾರವನ್ನು ತಡೆಗಟ್ಟುವಲ್ಲಿ ಇವರು ವಿಫಲರಾದರು ಎಂದು ಮನನೊಂದು ಹೇಳುತ್ತಾರೆ.

ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಕಂದಾಯ ಮಂತ್ರಿಗಳಾಗಿ ಮೈಸೂರು ಗೇಣಿಶಾಸನ, ಮೈಸೂರ ಇನಾಂರದ್ದತಿ, ಮೈಸೂರ ಇನಾಂಪದ್ಧತಿ ಈ ಮೂರು ಶಾಸನಗಳನ್ನು ರಚಿಸುವಲ್ಲಿ ಯಶಸ್ವಿಯಾದರು. ಈ ಮೂರು ಮಸೂದೆಗಳು ಅಂದು ಎಲ್ಲರಿಗೂ ಕ್ರಾಂತಿಕಾರಿಯಾಗಿ ಕಂಡವು. ಈ ಶಾಸನಗಳು ಸಮಾಜಕ್ಕೆ ಪೂರಕವಾದವು. ಇದರಿಂದಾಗಿ ಮಂಜಪ್ಪನವರು ಶ್ರೀಮಂತರ ಟೀಕೆಗೆ ಗುರಿಯಾದರು.'ದೇವಾದಾಯ ಮತ್ತು ಧರ್ಮಾದಾಯ' ಇನಾಂಗಳನ್ನು ರದ್ದುಪಡಿಸುವ ವಿಚಾರ ಮಸೂದೆಯಲ್ಲಿ ಇದ್ದುದರಿಂದ ಅನೇಕ ಶ್ರೀಮಂತರು 'ದೈವ ದ್ವೇಷಿ' ಎಂದು ಟೀಕೆಗೆ ಗುರಿಮಾಡುತ್ತಾ ಅಪಪ್ರಚಾರವನ್ನು ಮಾಡಹತ್ತಿದರು. ಮಠ ದೇವಸ್ಥಾನಗಳಿಗೆ ಮಾನ್ಯವಾಗಿ ಕೊಟ್ಟಿದ್ದ ಭೂಮಿಯನ್ನು ಬೆವರು ಸುರಿಸಿ ಬೇಸಾಯ ಮಾಡುವ ರೈತರಿಗೆ ಕೊಡಬೇಕು ಎಂಬುದನ್ನು ಮೈಸೂರು ಗೇಣಿ ಶಾಸನವನ್ನು ಮಂಡಿಸುವಲ್ಲಿ ಇವರು ಮಹತ್ತರವಾದ ಪಾತ್ರವನ್ನು ವಹಿಸಿದರು. ಗೇಣಿದಾರರ ಪರವಾಗಿ ಮಾತನಾಡಿದವರು ಮೈಸೂರು ರಾಜ್ಯದಲ್ಲಿ ಇವರೊಬ್ಬರೇ ಎನ್ನುವ ಮಾತು ಕೂಡಾ ಕಡಿದಾಳರಿಗೆ ಬಂತು. ಹಂತಹಂತವಾಗಿ ಸಮಾಜದ ಜನತೆಗೆ ಒಳ್ಳೆಯ ಕಾರ್ಯಗಳನ್ನೇ ಮಾಡುತ್ತಾ ಇರುತ್ತಿರುವಾಗ 1956ರಲ್ಲಿ ಮುಖ್ಯಮಂತ್ರಿಯಾಗುವ ಅವಕಾಶವು ಸಿಕ್ಕಿತು. ಮುಖ್ಯ ಮಂತ್ರಿಯಾಗಿ 74 ದಿನಗಳ ಕಾಲ ನಮ್ಮ ರಾಜ್ಯಕ್ಕೆ ಸೇವೆ ಸಲ್ಲಿಸಿದರು. ಇವರ ಅವಧಿಯಲ್ಲಿಯೇ 'ವಿಧಾನ ಸೌಧ' ಉದ್ಘಾಟನೆಯಾಯಿತು.

1957ರಲ್ಲಿ ಶೃಂಗೇರಿ ಮತಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾದರು. 1958ರಲ್ಲಿ ಬಿ.ಡಿ.ಜತ್ತಿಯವರ ಸಚಿವ ಸಂಪುಟದಲ್ಲಿ ಮತ್ತೆ ಕಂದಾಯ ಮಂತ್ರಿಗಳಾಗಿಯೇ ಅಧಿಕಾರಕ್ಕೆ ಬಂದರು. ಈ ಸಮಯದಲ್ಲಿ ಹೈಕಮಾಂಡ ವೀಕ್ಷಕರಾಗಿ ಬಂದಿದ್ದ ಲಾಲ್‌ಬಹದ್ದೂರ ಶಾಸ್ತ್ರಿಗಳು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವಂತೆ ಮಂಜಪ್ಪನವರಿಗೆ ಹೇಳಿದರು. ಆದರೆ ಮಂಜಪ್ಪನವರು ಅಧಿಕಾರದಾಸೆಗೆ ಬೀಳದೇ ತಾತ್ವಿಕತೆಯಿಂದ -ನೈತಿಕತೆಯಿಂದಲೇ ನಿರಾಕರಿಸಿದ ಧೀರರು (ಹೋರಾಟ ಶ್ರೀ (ಸಂ) ಡಾ. ಹೊ.ಶ್ರೀನಿವಾಸಯ್ಯ ಪುಟ-4) ಕಂದಾಯ ಮಂತ್ರಿಯಾದಾಗ 1961ರಲ್ಲಿ ಕರ್ನಾಟಕ ಭೂಸುದಾರಣಾ ಕಾಯ್ದೆಯನ್ನು ಜಾರಿಗೆ ತಂದರು. ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದ ಮಧ್ಯಮ ವರ್ಗದ ಬಡರೈತರ ಕುಟುಂಬದಲ್ಲಿ ಜನಿಸಿದ ಮಂಜಪ್ಪನವರು ಗ್ರಾಮೀಣ ಮಟ್ಟದಲ್ಲಿ ನಾವು ನಮ್ಮವರು ಎಂಬ ಮನೋಭಾವದ ಸಮಾಜವಾದವನ್ನು ತರಲು ಪ್ರಯತ್ನಿಸಿ ಅದರಲ್ಲಿ ವಿಜಯಶಾಲಿಗಳಾದವರಲ್ಲಿ ಇವರೇ ಮೊಟ್ಟಮೊದಲಿಗರು.

ಕಡಿದಾಳ ಮಂಜಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಎಲ್ಲಾ ಊರಿಗೂ ಹೋಗುತ್ತಿದ್ದರು. ತಾಲ್ಲೂಕು ಮತ್ತು ಜಿಲ್ಲಾ ಸ್ಥಳದಲ್ಲಿ ಎಲ್ಲರೂ ಕೆಲಸಕ್ಕೆ ಸರಿಯಾಗಿ ಹಾಜರಾಗುವರೋ ಇಲ್ಲವೋ ಎಂಬುದನ್ನು ನೋಡುವುದು, ಸಸ್ಪೆನಶನ್ ನೀಡುವುದು, ದಾಖಲಾತಿಗಳನ್ನು ಸರಿಯಾಗಿ ವಿಲೇವಾರು ಮಾಡಿರುವರೋ ಇಲ್ಲವೋ ಎಂಬುದನ್ನು ನೋಡುವುದಕ್ಕಾಗಿ ಎಲ್ಲಾ ಕಾರ್ಯಾಲಯಗಳಿಗೆ ಬೆಟ್ಟಿಕೊಡುವುದು, ಪರಿಶೀಲಿಸುವ ಕಾರ್ಯನಿರಂತರವಾಗಿ ನಡೆದೇ ಇತ್ತು. ಇವರು ಈ ರೀತಿ ಮಾಡುವುದನ್ನು ಕಂಡ ಕೆಲವರು ಏನೇನೋ ಅಂದುಕೊಂಡರಂತೆ. ಒಳ್ಳೆಯ ಕಾರ್ಯಗಳನ್ನೇ ಮಾಡುತ್ತಾ ಇರುವರು ಎಂದವರು ಹಲವರುಂಟು. ಕೆಲವು ಆಡಳಿತ ಸಿಬ್ಬಂದಿಗಳು ಏನು ನಮ್ಮನ್ನು ಪೊಲೀಸರು ನೋಡಿದ ಹಾಗೆ ನೋಡುತ್ತಾ ಇದ್ದಾರೆ ಈ ಕಂದಾಯ ಮಂತ್ರಿಗಳು ಎಂದು ಹೀಯಾಳಿಸಿದ್ದು ಉಂಟು. ಇದೆಲ್ಲವನ್ನು ಗಮನಿಸಿದ ಪ್ರಧಾನ ಕಾರ್ಯದರ್ಶಿಯಾದ

ಟಿ.ವಿ. ಆಚಾರ್ ರವರು ಇಂಥದ್ದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಇಂಥದ್ದೆಲ್ಲಾ ಯಾಕೆ ಮಾಡಬೇಕು. ಮಂತ್ರಿಗಳು ಇದನ್ನು ಮಾಡತಕ್ಕದ್ದಲ್ಲ ಎಂದು ಆದೇಶ ಹೊರಡಿಸಿ ಆ ಆದೇಶವನ್ನು ಮಾನ್ಯ ಮುಖ್ಯ ಮಂತ್ರಿಗಳಾದ ಜತ್ತಿ ಯವರಿಗೆ ಕಳಿಸಿದರು. ಇದನ್ನು ನೋಡಿದ ಜತ್ತಿಯವರು ಕೂಡಲೇ ತಿರಸ್ಕರಿಸಿ ಕಡಿದಾಳರಿಗೆ ಬೆಂಬಲವೆಂಬಂತೆ ಸೂಚಿಸಿದರು. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ ಮಂಜಪ್ಪನವರು ದೊಡ್ಡಬಳ್ಳಾಪುರದ ಕಂದಾಯ ಕಛೇರಿಯ ತಪಾಸಣೆ ಮಾಡಿದರು. ಅಲ್ಲಿ ಹತ್ತು-ಹನ್ನೆರಡು ವರ್ಷಗಳ ಹಿಂದೆ ಎಲ್ಲಾ ಫೈಲುಗಳನ್ನು ತೆಗೆದುಕೊಂಡು ಪರಿಶೀಲಿಸಿ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳನ್ನು 'ಅಮಾನತ್ತಿನಲ್ಲಿ ಇರಿಸಿದರು'. ಪ್ರಧಾನ ಕಾರ್ಯದರ್ಶಿಯಾಗಿದ್ದ ಟಿ.ವಿ. ಆಚಾರ್‌ರವರಿಗೆ ತಪಾಸಣೆಗಳಿಂದ ಏನು ಪ್ರಯೋಜನ ಇಲ್ಲವೆಂದು ಆದೇಶ ಹೊರಡಿಸಿದ್ದೀರಲ್ಲ. ಇದಕ್ಕೆ ಏನು ಹೇಳುವಿರಿ ಎಂದು ಹೇಳಿ ಎಲ್ಲಾ ಕಡತಗಳನ್ನು ಅವರ ಮುಂದೆಯೇ ಎಸೆದುಬಿಟ್ಟರು. 10-15 ವರ್ಷಗಳಿಂದ ಆಗಬೇಕಾದ ಕೆಲಸ ಆಗದೇ ಇರುವುದನ್ನು ಯಾರು ತಾನೇ ಕೇಳಬೇಕು. ಯಾರು ಮಾಡಬೇಕೆಂದು ಕೇಳಿದಾಗ ಠೀವಿಯಿಂದ ಇರುತ್ತಿದ್ದ ಟಿ.ವಿ. ಆಚಾರ್ ಏನೂ ಮಾತನಾಡದೇ ತಪ್ಪಾಯಿತು ಎಂದು ಕ್ಷಮೆ ಕೇಳಿದರಂತೆ (ಹೋರಾಟ ಶ್ರೀ (ಸಂ) ಡಾ: ಹೊ. ಶ್ರೀನಿವಾಸಯ್ಯ ಪುಟ-35) ಈ ಎಲ್ಲಾ ಕೆಲಸಗಳನ್ನು ನೋಡಿದರೆ ಮಂಜಪ್ಪನವರು ಈ ರೀತಿಯಾಗಿ ಕೆಲಸ ನಿರ್ವಹಿಸಿದ್ದರಿಂದಲೇ ಒಬ್ಬ ಮೇಧಾವಿ ರಾಜಕಾರಣಿಯಾಗಿ, ಸಮಾಜಸೇವಕನಾಗಿ, ಖಂಡಿತವಾದಿಯಾಗಿ ಕಾಣಿಸಿಕೊಂಡಿದ್ದಾರೆ.

ಕಂದಾಯ ಮಂತ್ರಿಯಾದಾಗ ಮಾಡಿದ ಸಾಧನೆಯನ್ನು ನೋಡಿದರೆ ಎಲ್ಲರೂ ಇವರನ್ನು ಮಹಾಮಾನವತಾವಾದಿ ಎಂದು ಸಹ ಹೇಳಬಹುದು. ಹೇಗೆಂದರೆ ಬಡವರನ್ನು ಹುಡುಕಿ ಅವರಿಗೆ ಸಾಗುವಳಿ ಮಾಡಲು ಭೂಮಿಯನ್ನು ನೀಡಿದರು. ಭದ್ರಾ ಅಚ್ಚುಕಟ್ಟುಗಳಿಗೆ, ಅಂಗಾಪುರ, ಉಂಬಳೇಬೈಲು ಅಚ್ಚುಕಟ್ಟುಗಳನ್ನು ನಿರ್ಮಿಸಿ ಬಡರೈತರಿಗೆ ನೀರಾವರಿ ವ್ಯವಸ್ಥೆ ಕಲ್ಪಿಸಿದರು. ಇದರಿಂದಾಗಿ ಅಲ್ಲಿನ ಜನತೆ ಮಂಜಪ್ಪನವರ ಫೋಟೋ ಇಟ್ಟುಕೊಂಡು ಪೂಜಿಸುತ್ತಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಸಾಧನೆಯನ್ನು ನೋಡಿದರೆ ಇವರೊಬ್ಬ ಶ್ರೇಷ್ಠ ರಾಜಕೀಯ ಮುತ್ಸದ್ದಿಯಾಗಿದ್ದರು ಎಂಬುದರಲ್ಲಿ ಸಂಶಯವಿಲ್ಲ.

1956ರಲ್ಲಿ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ವಿಂಗಡಣೆ ಮಾಡಬೇಕು ಎಂಬ ವಿಚಾರ ಬಂದಾಗ ಅದು ಒಂದು ದೊಡ್ಡ ಸಮಸ್ಯೆಯಾಗಿ ತಲೆದೋರಿತು. ಆಗ ಪಂಡಿತ್ ನೆಹರೂರವರು ಕಡಿದಾಳ ಮಂಜಪ್ಪನವರನ್ನು ಕರೆಯಿಸಿ ಅವರ ಅಭಿಪ್ರಾಯವನ್ನು ಕೇಳಿದರು. ಆಗ ಮಂಜಪ್ಪನವರು ದೇಶಕ್ಕೆ ಒಳ್ಳೆಯದು ಆಗೋಲ್ಲ. ಇದರಿಂದ ಪ್ರಾಂತೀಯತೆ ಮತ್ತು ರಾಷ್ಟ್ರದ ಐಕ್ಯತೆಗೆ ತೊಂದರೆಯಾಗುತ್ತದೆ ಎಂದು ಖಡಾಖಂಡಿತವಾಗಿ ಹೇಳಿದರು ( ಹೋರಾಟ ಶ್ರೀ (ಸಂ) ಡಾ: ಹೊ. ಶ್ರೀಮಿವಾಸಯ್ಯ ಪುಟ-41).

### ಸಮಿತಿ ಮತ್ತು ಟ್ರಸ್ಟಿನ ಅಧ್ಯಕ್ಷರಾಗಿ ಮಂಜಪ್ಪನವರು

ದಕ್ಷ ಮತ್ತು ಪ್ರಾಮಾಣಿಕತೆಗೆ ಹೆಸರಾದ ಮಂಜಪ್ಪನವರು ಸ್ಕಾಲರ್‌ಶಿಪ್ ಮತ್ತು ಅಡ್ಮಿಷನ್ ಕಮಿಟಿಯ ಅಧ್ಯಕ್ಷರಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಒಂದು ಘಟನೆ ಜರುಗಿತು. ಈ ಘಟನೆಯಿಂದ ಮಂಜಪ್ಪನವರ ಮನಸ್ಸು ತುಂಬಾ ನೊಂದಿದೆ. ಪರಿಸ್ಥಿತಿಯ ಒತ್ತಡಕ್ಕೆ ಮಣಿದು ನಿಜವಾಗಿ ನ್ಯಾಯ ಸಿಗಬೇಕಾಗಿದ್ದವರಿಗೆ ಸಿಗಲಿಲ್ಲ ಎಂಬ ಒಂದೇ ಒಂದು ಕೊರಗಿನಿಂದ ರ್‍ಯಾಂಕ್ ಬಂದವರಿಗೆ ಉಚಿತ ಶಿಕ್ಷಣ ಹಾಗೂ ಶಿಷ್ಯವೇತನ ಕೊಡಬೇಕು ಎಂಬುದು ಇವರ ವಾದವಾದರೆ ಸದಸ್ಯರೆಲ್ಲರೂ ಇವರಿಗೆ ತಿರುಗಿ ಬಿದ್ದು ಈ ರೀತಿ ನಡೆಯಲು ಸಾಧ್ಯವಿಲ್ಲ ಎಂದು ವಾದಿಸಿದರು. ಇಲ್ಲಿ ನಡೆಯುವುದೆಲ್ಲಾ ಜಾತಿಯ ಆಧಾರದ ಮೇಲೆ ವಿನಾ ರ್‍ಯಾಂಕುಗಳಿಗಲ್ಲ ಎಂದು ವಾದಿಸಿದರಂತೆ ಮತ್ತು ನೀವು ಈ ರೀತಿಯಲ್ಲಿ ಮಾಡಬಾರದು ಎಂದು ಸಹ ಹೇಳಿದರಂತೆ ರ್‍ಯಾಂಕ್ ಬಂದವರಿಗೆ ಅನ್ಯಾಯ ಮಾಡಬಾರದು ಎಂಬ ಇವರ ನಿಲುವಿಗೆ ಯಾರು ಒಪ್ಪಲಿಲ್ಲ ಕೊನೆಗೆ ಇವರು ನಿರಾಶ ಮನೋಭಾವದಿಂದಲೇ ಅಲ್ಲಿ ಕಾರ್ಯನಿರ್ವಹಿಸಿದರು.

ಗಾಂಧೀವಾದಿಯಾಗಿ 1975ರಿಂದ 1985ರ ವರೆಗೆ ಕರ್ನಾಟಕ ಪ್ರದೇಶ ಗಾಂಧಿ ಸ್ಮಾರಕ ಸಂಸ್ಥೆಯ ಅಧ್ಯಕ್ಷರಾದರು. ಸಂಸದೀಯ ವ್ಯವಹಾರಗಳ ಸಂಸ್ಥೆಗೆ ಶಾಶ್ವತ ಆಶ್ರಯದಾತರಾಗಿ ನಿಂತುಕೊಂಡರು. ಬೆಂಗಳೂರಿನ ಬಿ. ಎಂ. ಎಸ್. ವಿದ್ಯಾ ಟ್ರಸ್ಟಿನ ಅಧ್ಯಕ್ಷರಾಗಿ ಶಿಕ್ಷಣ ರಂಗಕ್ಕೆ ಅಪಾರ ಸೇವೆ ಸಲ್ಲಿಸಿದರು. 1985ರಲ್ಲಿ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾವಲು ಸಮಿತಿಯ ಅಧ್ಯಕ್ಷರಾಗಿ ಚುನಾವಣೆಗಳಲ್ಲಿ ಯಾವುದೇ ಪಕ್ಷಗಳು ಸರ್ಕಾರದ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಂಡು ಹೋಗುವುದರ ಜೊತೆಗೆ ಎಲ್ಲರಿಂದ ಪ್ರಶಂಸನೀಯರಾದರು.

### ಪ್ರಜಾಪ್ರಭುತ್ವವಾದಿ-ಖಂಡಿತವಾದಿ-ನ್ಯಾಯ ನಿಷ್ಠುರಿ ಕಡಿದಾಳ್

ಪ್ರಜಾಪ್ರಬುತ್ವದ ತತ್ವಗಳ ತಳಹದಿಯ ಮೇಲೆ ನಮ್ಮ ದೇಶ ನಡೆಯಬೇಕು. ಎಲ್ಲರೂ ಸಮಾನರು, ಸಮಾನತೆ, ನ್ಯಾಯ, ನೀತಿ ಧರ್ಮಗಳಿಗಾಗಿ ಬದುಕಬೇಕು ಎಂದು ಹೇಳಿದರು. ತಮ್ಮ ಜೀವನದಲ್ಲಿ ನ್ಯಾಯಕ್ಕಾಗಿ, ಸಮಾಜದ ಒಳಿತಿಗಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟರು. ಹೋರಾಟದ ಪ್ರತಿಯೊಂದು ಭಾಗವನ್ನು ತೆಗೆದುಕೊಂಡರು. ಅದು ನ್ಯಾಯಯುತವಾಗಿರಬೇಕು ಮತ್ತು ನೈತಿಕ ತಳಹದಿಯ ಮೇಲೆ ಹೊಸ ತಿರುವನ್ನು ಪಡೆಯುವಂತೆ ಒಂದೊಂದು ಹಂತವನ್ನು ನಿರೂಪಿಸುತ್ತಿದ್ದರು. ಪ್ರಜಾಪ್ರಭುತ್ವ ಸರ್ಕಾರ್ ಪ್ರಜೆಗಳಿಗಾಗಿ ಇರಬೇಕು ಪ್ರಜೆಗಳಿಗೆ ಯಾವುದೇ ರೀತಿಯಲ್ಲೂ ತೊಂದರೆ ಕೊಡಬಾರದು ಎಂದು ಖಂಡಿತವಾಗಿ ನುಡಿಯುತ್ತಿದ್ದರು. ನ್ಯಾಯ ನೀತಿಗಳ ತಳಹದಿಯಲ್ಲಿಯೇ ನಮ್ಮ ಒಂದೊಂದು ನೈತಿಕ ಮತ್ತು ಸಾಮಾಜಿಕ ಮೌಲ್ಯಗಳು ರೂಪಗೊಳ್ಳಬೇಕು. ಅದು ಅನ್ಯಾಯ, ಅತ್ಯಾಚಾರದ ಮಾರ್ಗದಲ್ಲಿ ಅಲ್ಲ ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಹೇಳಿರುವರು. ಈ ಕೆಳಗಿನ ಒಂದೊಂದು ಪ್ರಸಂಗಗಳನ್ನು ನೋಡಿದರೆ ಇವರು ಎಂತಹವರು ಎಂಬುದು ಈ ಕೆಳಗಿನ ಅಂಶಗಳಿಂದ ನಮಗೆ ತಿಳಿದುಬರುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಯಾವುದೋ ಒಂದು ಸಮಾರಂಭ ನಡೆದಿತ್ತು, ಆ ಸಮಾರಂಭದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡುವಾಗ ಈ ನಾಡು ಒಂದೆರಡು ದಶಕಗಳ ಒಳಗಾಗಿ

ಸಮೃದ್ಧಿಯ ನಾಡು, ಸಂಪತ್ಭರಿತವಾದ ಬೀಡು ಆಗುತ್ತದೆ. ಸತ್ಯ ಮತ್ತು ಧರ್ಮ ದೇಶದ ಬೆಳವಣಿಗೆಯಲ್ಲಿ ಸಮಾನಾಂತರ ವಾದ ಪಾತ್ರವಹಿಸುತ್ತವೆ ಎಂದು ಹೇಳಿ ಭಾಷಣ ಮಾಡಿದ ಮಂಜಪ್ಪ ನವರು ಮೂರು ದಶಕದ ನಂತರ ಈ ನಾಡನ್ನು ಕಂಡು ತುಂಬಾ ನೊಂದುಕೊಂಡು ಹೇಳಿರುವ ಮಾತುಗಳು ತುಂಬಾ ಅರ್ಥಪೂರ್ಣವಾಗಿವೆ. ಓ ಎಂಥಾ ದೇಶ ನಾನು ಅನ್ಯಾಯವಾಗಿ ಸುಳ್ಳು ಮಾತನ್ನು ಹೇಳಿದ ಹಾಗೆ ಆಯಿತಲ್ಲಾ ಈ ದೇಶ ಇಷ್ಟು ಕೆಡುತ್ತೇ ಅಂತ ನಾನಂತು ಕನಸು-ಮನಸ್ಸಿನಲ್ಲೂ ಊಹಿಸಿರಲಿಲ್ಲ ಎಂದು ನುಡಿದರು. ಏನಪ್ಪಾ ಹಂದಿಗಳು ಅಮೇಧ್ಯ ಮೇಯುವ ಹಾಗೆ ಈ ಸರಕಾರಿ ಅಧಿಕಾರಿಗಳು, ಶಾಸಕರು. ಮಂತ್ರಿಗಳು ಲಂಚ ತಿನ್ನುವ ಅಮೇಧ್ಯವನ್ನು ಮೇಯುವುದರೊಂದಿಗೆ (ಹೋರಾಟ ಶ್ರೀ (ಸಂ) ಡಾ:ಹೊ.ಶ್ರೀನಿವಾಸಯ್ಯ ಪುಟ-29-30) ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಕೊಲೆ, ಸುಲಿಗೆಗಳಲ್ಲಿ ತೊಡಗಿರುವುದನ್ನು ಕುರಿತು ಈ ಸ್ವಾರ್ಥ ರಾಜಕಾರಣಗಳನ್ನು ನೋಡಿ ನಮ್ಮ ಸುಂದರವಾದ ನಾಡನ್ನು ಕಗ್ಗತ್ತಲೆಯ ನಾಡನ್ನಾಗಿ ಮಾಡುವಲ್ಲಿ ಈ ಸ್ವಾರ್ಥ ರಾಜಕಾರಣಿಗಳು ಮುಂದಾಗಿರುವುದನ್ನು ಕಂಡು ಮನದಲ್ಲಿಯೇ ನೊಂದುಕೊಂಡು ರಾಜಕೀಯ ಪುಢಾರಿಗಳಿಗೆ ನೇರವಾಗಿ(ಹೇಳಿರುವರು) ಟೀಕಿಸಿದರು.

ರಾಷ್ಟ್ರೀಯ ಜಾಗ್ರತ ಮಂಡಳಿಯ ನೇತಾರರಾದ ಕಡಿದಾಳ ಮಂಜಪ್ಪನವರು ಗಾಂಧೀಜಿಯವರು ರಾಷ್ಟ್ರದ ಬಗ್ಗೆ ಯಾವ ಕಲ್ಪನೆ ಇಟ್ಟುಕೊಂಡಿದ್ದರೋ ಅದೇ ಕಲ್ಪನೆಯನ್ನು ಸಹ ಕಡಿದಾಳರು ಇಟ್ಟುಕೊಂಡಿದ್ದರು. ಗಾಂಧೀಜಿಯವರ ದೃಷ್ಟಿಯಲ್ಲಿ ಒಂದು ರಾಷ್ಟ್ರವೆಂದರೆ ಒಂದು ಹಳ್ಳಿ ಅದೇ ತೆರನಾಗಿಯೇ ಕಡಿದಾಳರ ದೃಷ್ಟಿಯಲ್ಲಿಯೂ ಒಂದು ರಾಷ್ಟ್ರವೆಂದರೆ ಹಳ್ಳಿ ಹಳ್ಳಿಗಳ ಉದ್ಧಾರವಾದರೆ ಮಾತ್ರ ನಮ್ಮ ದೇಶದ ಉದ್ಧಾರ ಎಂಬುದನ್ನು ಮನಗಂಡಿದ್ದರು. ಮೊದಲು ನಾವು ಒಂದು ಹಳ್ಳಿಯ ಉದ್ಧಾರಕ್ಕಾಗಿ ಶ್ರಮಿಸಬೇಕು ಮತ್ತು ತ್ಯಾಗಮಾಡಬೇಕು, ಒಂದು ಹಳ್ಳಿಯಿಂದ ತಾಲ್ಲೂಕು, ಜಿಲ್ಲೆ, ರಾಷ್ಟ್ರಕ್ಕಾಗಿ, ನಿಷ್ಠೆ, ಪ್ರಾಮಾಣಿ ಕತೆಯಿಂದ, ತ್ಯಾಗದ ಮನೋಭಾವದಿಂದ ದುಡಿಯಬೇಕು ಎಂಬುದು ಈ ರಾಷ್ಟ್ರೀಯ ಜಾಗೃತ ಮಂಡಳಿಯ ಮೂಲ ಧ್ಯೇಯವಾಗಿತ್ತು. ಈ ತತ್ವಕ್ಕಾಗಿಯೇ ಕಡಿದಾಳರು ಹಗಲಿರುಳೆನ್ನದೇ ದುಡಿದು ಈ ತತ್ವಗಳನ್ನೇ ಪ್ರಚಾರ ಮಾಡತೊಡಗಿದರು. ರಾಷ್ಟ್ರೀಯ ಜಾಗೃತಮಂಡಳಿಯ ಮೂಲಧ್ಯೇಯದ ಸಲುವಾಗಿಯೇ ಹೋರಾಟ ಮಾಡಿದ ಮಹಾನ್ ನಾಯಕರಿವರು.

ಪ್ರಜಾಪ್ರಭುತ್ವದ ಆದರ್ಶಮೌಲ್ಯಗಳಿಗೆ ಗೌರವ ನೀಡುತ್ತ ನಮ್ಮ ಸಾಮಾಜಿಕ ಬದುಕನ್ನೇ ಎತ್ತಿಹಿಡಿಯುತ್ತಿದ್ದರು. ಆದರೆ ಅನ್ಯಾಯ, ಅತ್ಯಾಚಾರಗಳೇ ಇಂದು ಪ್ರಜಾಪ್ರಭುತ್ವದಲ್ಲಿ ಮನೆ ಮಾಡಿಕೊಂಡಿವೆ ಎಂಬುದನ್ನು ನೋಡಿದ ಮಂಜಪ್ಪನವರಿಗೆ ತುಂಬಾ ಬೇಸರವಾಯಿತು. ಇವರು ಪ್ರಜಾಪ್ರಭುತ್ವದಲ್ಲಿ ಅಚಲವಾದ ನಂಬಿಕೆಯಿಟ್ಟಿದ್ದರು. 1950ರಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಿದೆ. ಈ ದೇಶದಲ್ಲಿ ಪ್ರಜಾಪ್ರಭುತ್ವ ಬೆಳವಣಿಗೆ ಆಗಬೇಕೆನ್ನುವುದು ಅವರ ವಿಚಾರವಾಗಿತ್ತಾದರೂ ಅದು ತದ್ವಿರುದ್ಧವಾಗಿ ಬೆಳೆಯುತ್ತಿರುವುದನ್ನು ಕಂಡು ಬಹಳ ಮರುಕಪಟ್ಟುಕೊಂಡರು. ಮುಂದೆ ಮೈಸೂರಿನಲ್ಲಿ ಭಾರತದ ಸಂವಿಧಾನವನ್ನು ರಕ್ಷಣೆ ಮಾಡಬೇಕು ಎಂದು ಹೇಳುವ ಪ್ರಸಂಗವು ಬಂದೊದಗಿತು. ಇದು ದುರ್ದೈವದ ಸಂಗತಿ ಭಾರತದ ಸಂವಿಧಾನವನ್ನು ರಕ್ಷಣೆ ಮಾಡಬೇಕು ಎಂಬ ವಿಷಯದಲ್ಲಿ ಉಪನ್ಯಾಸ ಕೂಡಾ ನೀಡಿದರು. ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಯಲ್ಲಿ ಪ್ರಜಾಶಕ್ತಿಯ ಬೆಳವಣಿಗೆಯನ್ನು ನೋಡಿ ಸಂಕಟ ದಿಂದ ನೊಂದುಕೊಳ್ಳುಹತ್ತಿದರು.

ಪ್ರಜಾಪ್ರಭುತ್ವದ ತತ್ವಗಳ ತಳಹದಿಯ ಮೇಲೆ ರಾಜಕೀಯವು ಮತ್ತು ಸಮಾಜವು ನಡೆಯಬೇಕು ಎಂಬ ಅಂಶಗಳಿಂದ ಪ್ರಭುತ್ವ ಆಳುತ್ತಿದೆ. ಆದರೆ ಇಂದು ಪ್ರಜಾಪ್ರಭುತ್ವದ ತತ್ವಗಳು ಗಾಳಿಗೆ ತೂರಿ ಹೋಗಹತ್ತಿವೆ. ಸಮಾನತೆ ಸ್ವಾತಂತ್ರ್ಯ ಸಾಮಾಜಿಕ ನ್ಯಾಯ ಎನ್ನುವಂತಹ ತತ್ವಗಳಿಗೆ ಬೆಲೆ ಇಲ್ಲದಂತಾಗಿದೆ. ಈ ತತ್ವಗಳನ್ನು ಯಾರೂ ಪರಿಗಣಿಸಲಾರದಂತಹ ಪ್ರಸಂಗ ಬಂದೊದಗಿದೆ. ಇದರಿಂದಾಗಿ ಪ್ರಜಾಪ್ರಭುತ್ವ ಬಿರುಗಾಳಿಗೆ ಸಿಕ್ಕುನಲುಗತೊಡಗಿದೆ ಎಂದು ತಮ್ಮ ಉಪನ್ಯಾಸದಲ್ಲಿ ತಿಳಿಸಿದರು. ಆದಕ್ಕಾಗಿ ನಮ್ಮ ಮುಂದಿನ ಯುವ ಪೀಳಿಗೆಯು ಎಚ್ಚರಗೊಂಡು ಪ್ರಜಾಪ್ರಭುತ್ವದ ತತ್ವಗಳಿಗೆ ಬೆಲೆ ಸಿಗುವಂತೆ, ಅವುಗಳಿಗಾಗಿ ದುಡಿಯುವದು ನಮ್ಮ ಕರ್ತವ್ಯವೆಂದು ತಿಳಿಸಿದರು. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು. ಭೇದಭಾವ ಬಡವ-ಬಲ್ಲಿದ ಎನ್ನುವ ತಾರತಮ್ಯ ಇಲ್ಲದೆ ಪ್ರಜಾಪ್ರಭುತ್ವದ ತತ್ವಗಳಿಗಾಗಿ ಹೋರಾಡಲು ಕರೆ ನೀಡಿದರು. ಎಲ್ಲಿ ನೋಡಿದರಲ್ಲೂ ಬಡತನ-ಸಿರಿತನ ವ್ಯತ್ಯಾಸದಿಂದ ಘರ್ಷಣೆ ಮತ್ತು ಹಿಂಸೆ ಆಗುತ್ತಾ ಇದೆ, ಎಲ್ಲಾದರಲ್ಲೂ ನೈತಿಕತೆಯ ಮಟ್ಟ ಕುಸಿಯತೊಡಗಿದೆ. ಇದರಿಂದಾಗಿ ಐಕ್ಯತೆ ಮತ್ತು ಪ್ರಜಾಪ್ರಭುತ್ವದ ಉಳುವಿಗಾಗಿ ಭವಿಷ್ಯವಿದೆಯೋ ಇಲ್ಲವೋ ಎಂಬುದು ಕಾಯ್ದುನೋಡಬೇಕಾಗಿದೆ ಇವೆಲ್ಲವನ್ನು ನೋಡಿದರೆ ಕಡಿದಾಳರು ತಮ್ಮ ಜೀವನದಲ್ಲಿ ಪ್ರಜಾಪ್ರಭುತ್ವದ ಒಂದೊಂದು ಅಂಶಗಳು ಇವರ ಅಂತರಾಳದಲ್ಲಿ ಮನೆಮಾಡಿಕೊಂಡಿದ್ದವು ಎಂಬುದು ನಮಗೆ ತಿಳಿದು ಬರುತ್ತದೆ.

ಅಂದಿನ ರಾಜಕೀಯ ಪರಿಸ್ಥಿತಿಯ ಕುರಿತು ಕಡಿದಾಳ ಮಂಜಪ್ಪನವರು ಬರೆದಂತಹ ಭಾಗದವನ್ನು ಕೆ.ಎಚ್. ಚೆಲುವರಾಜುರವರು 'ಕಡಿದಾಳ ಮಂಜಪ್ಪನವರ ರಾಜಕೀಯ ಹಾಗೂ ಸಾಮಾಜಿಕ ಧೋರಣೆ'ಎಂಬ ಲೇಖನದಲ್ಲಿ ಬಳಸಿಕೊಂಡಿರುವುದನ್ನೇ ನಾವು ಇಲ್ಲಿ ಉಲ್ಲೇಖಿಸಿರುವೆವು. 'ಈ ದೇಶದ ಇಂದಿನ ರಾಜಕೀಯ ದೃಶ್ಯ, ಬೇಟೆಗಾಗಿ ಅಲೆದಾಡುತ್ತಿರುವ ಹಸಿದ ತೋಳಗಳಿಂದ ತುಂಬಿರುವ ಬೆಂಗಾಡಿನಲ್ಲಿ ರಾಜಕಾರಣಿಗಳು, ರಾಷ್ಟ್ರಭಕ್ತಿ, ಸತ್ಯಸಂಧತೆ, ಸಭ್ಯತೆ, ಶೀಲ ಮುಂತಾದ ಗುಣಗಳಿಗೆ ಸಂಪೂರ್ಣ ತಿಲಾಂಜಲಿ ಕೊಟ್ಟಂತೆ ತೋರುತ್ತದೆ. ಕೆಲವರಂತೂ ಅಧಿಕಾರ ಲಾಲಸೆಯ ಅಮಲಿನಲ್ಲಿ ತಮಗೆ ಇದ್ದ, ಅಲ್ಪಸ್ವಲ್ಪ ಗೌರವವನ್ನು ಕಳೆದುಕೊಂಡಿದ್ದಾರಲ್ಲದೆ ರಾಷ್ಟ್ರದ ಪ್ರತಿಷ್ಠೆ ಗೌರವಾದರಗಳಿಗೆ ಧಕ್ಕೆ ಉಂಟಾಗುವಂತೆ ಮಾಡುತ್ತಿದ್ದಾರೆ. ಆಗಾಗ್ಗೆ ಗಾಂಧೀಜಿಯ ವಿಚಾರಗಳನ್ನು ಪ್ರತಿಪಾದಿಸಿದವರು ದೇಶದ ಹಿತದೃಷ್ಟಿಯಿಂದ ತಮ್ಮ ಮಿತಿ ಮೀರಿದ ಆಸೆ-ಆಕಾಂಕ್ಷೆಗಳನ್ನು ಬದಿಗೊತ್ತಲು ಅಸಮರ್ಥರೆನಿಸಿಕೊಂಡಿದ್ದಾರೆ, ಇಂದಿರುವ ಅನಿಶ್ಚಯದ ಅಭದ್ರ ಪರಿಸ್ಥಿತಿ ಮುಂದುವರಿದರೆ ಅರಾಜಕತೆಯುಂಟಾಗಿ ಅಂತಿಮದಲ್ಲಿ ಯಾವುದಾದರೂ ಒಂದು ವಿಧವಾದ ಸರ್ವಾಧಿಕಾರೀ ಪ್ರಭುತ್ವ ಅಸ್ತಿತ್ವಕ್ಕೆ ಬರುವುದೆಂಬ ವಿಷಯ ವಿಚಾರವಂತರನ್ನು ಬಾಧಿಸುತ್ತಾ ಇದೆ ', ಅಂದಿನ ರಾಜಕೀಯ ವಾತಾವರಣ ಕುರಿತು ಬರೆದಿರುವುದು ಇಂದಿಗೂ ಸಹ ಔಚಿತ್ಯ ಪೂರ್ಣವಾದುದಾಗಿದೆ ಎಂಬುದು ತಿಳಿದು ಬರುತ್ತದೆ.

ಬಡವರ ಬಗ್ಗೆ ದೀನದಲಿತರ ಬಗ್ಗೆ ಸದಾ ಕಾಳಜಿ ಹೊಂದಿರುವ ವ್ಯಕ್ತಿಯೆಂದರೆ ಮಂಜಪ್ಪನವರು' ಎಂದು ಹೇಳುವಂತಹ ಒಂದು ಕಾಲ ಅಂದು ಇತ್ತು, ಏಕೆಂದರೆ ಇವರು ಸಹ ಬಡತನದಲ್ಲಿ ಬೆಂದವರು ನೋವನ್ನು ಉಂಡವರಾಗಿದ್ದರು. ಅಂತಹ ಪರಿಸ್ಥಿತಿಯಲ್ಲಿ ಬೆಳೆದುದರಿಂದಲೇ ಇವರು ಸದಾ ಬಡವರ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅಂದು ಭೂ ಮಾಲೀಕರೆಲ್ಲರೂ ಗೇಣಿದಾರರಿಗೆ ಒಂದಿಲ್ಲ ಒಂದು ರೀತಿಯಲ್ಲಿ ತೊಂದರೆ ಕೊಡುತ್ತಿರುವುದನ್ನು

ಗಮನಿಸಿದ ಮಂಜಪ್ಪನವರು ಗೇಣಿದಾರರನ್ನು ಸಂಘಟಿಸುವಲ್ಲಿ ಮುಂದಾದರು, ಗೇಣಿದಾರರನ್ನು ಸಂಘಟಿಸಿ ಈ ಸಂಘಟನೆಯ ಅಧ್ಯಕ್ಷರಾದರು. ಸಾಹುಕಾರರು ಅಥವಾ ಭೂ ಮಾಲೀಕರು ಗೇಣಿದಾರರಿಗೆ ಕಾನೂನಿನ ನಿಯಮಗಳನ್ನು ಮೀರಿ ಅವರಿಗೆ ವಿವಿಧ ರೀತಿಯ ಕಿರುಕುಳಗಳನ್ನು ನೀಡಹತ್ತಿದ್ದರು, ಅಡಿಕೆ ಬೆಳೆ ಮತ್ತು ಇನ್ನಾವುದೇ ಬೆಳೆಗಳನ್ನು ಅಥವಾ ವಸ್ತುಗಳನ್ನು ತೆಗೆದುಕೊಳ್ಳುವಾಗ ತೂಕದಲ್ಲಿ ಮೋಸಮಾಡುವುದು ಹಲವಾರು ಬಗೆಗಳಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಗೇಣಿದಾರರ ಶೋಷಣೆಗಳು ನಡದೇ ಇದ್ದವು. ಇದೆಲ್ಲವನ್ನು ಗಮನಿಸಿದ ಮಂಜಪ್ಪನವರು ಗೇಣಿದಾರರಿಗೆ ಸಹಾಯ ಮಾಡಲು ಕಂಕಣ ಕಟ್ಟಿ ನಿಂತರು. ಭೂ ಮಾಲೀಕರನ್ನೆಲ್ಲಾ ಜಾಗೃತಮಾಡಿ ಅವರಿಗೆ ತಿಳಿಸಿ ನೋಡಿದರು. ಆದರೆ ಅವರೆಲ್ಲರೂ ಇವರ ಮಾತಿಗೆ ಬೆಲೆಕೊಡುವಂತೆ 'ಹೂಂ' ಎಂದರು. ನಂತರ ಪಟ್ಟಭದ್ರ ಹಿತಾಶಕ್ತಿಗಳಾಗಿದ್ದ ಆ ಮಂತ್ರಿಗಳು ಇದಕ್ಕೆ ಬೆಂಬಲಿಸಲಿಲ್ಲ, ಎಲ್ಲಾ ಮಂತ್ರಿಗಳು ಹಳ್ಳಿಗಳಲ್ಲಿ ಅಧಿಕ ಜಮೀನು ಹೊಂದಿದವರಾಗಿದ್ದರು. ಆದ್ದರಿಂದಲೇ ಇವರೆಲ್ಲರೂ ಗೇಣಿದಾರರಿಗೆ ಮೋಸಗೊಳಿಸುತ್ತಿದ್ದರೂ ಯಾವುದೇ ರೀತಿಯಲ್ಲಿ ನ್ಯಾಯಯುತವಾಗಿ ಸಿಗಬೇಕಾದ ಸವಲತ್ತುಗಳು ಸಿಗದೇ ಗೇಣಿದಾರರು ಕಂಗಾಲಾಗಿರಲು ಪಟ್ಟಭದ್ರ ಮಂತ್ರಿಗಳೇ ಕಾರಣವಾಗಿದ್ದರು. ಈ ಎಲ್ಲಾ ವಿಷಯಗಳನ್ನು ಗಮನಿಸಿದ ಮಂಜಪ್ಪನವರು ಬಡವರ ನೋವು ನಲಿವುಗಳನ್ನು ನೋಡುತ್ತಾ ಮನದಲ್ಲಿಯೇ ಮರುಕಪಟ್ಟುಕೊಳ್ಳಹತ್ತಿದರು.

ಗೇಣಿದಾರರ ಪರವಾಗಿ ಯಾರೂ ನಿಲ್ಲದಂತಹ ಪರಿಸ್ಥಿತಿಯು ಬಂದೊದಗಿರುವುದನ್ನು ಕಂಡ ಮಂಜಪ್ಪನವರು ಸಿಡಿಮಿಡಿಗೊಂಡು ಒಂದು ಚಳುವಳಿ ಆರಂಭಿಸಿದರು. ಆದರೆ ಚಳುವಳಿಯು ಯಶಸ್ವಿಯಾಗಲಿಲ್ಲ. ಏಕೆಂದರೆ ಪಟ್ಟಭದ್ರರೇ ಆಡಳಿತದ ಚುಕ್ಕಾಣಿ ಹಿಡಿದಿರುವುದು. ಯಾರನ್ನಾದರೂ ಈ ಚಳವಳಿಯಲ್ಲಿ ಭಾಗವಹಿಸಲು ಕೇಳಿದರೂ ಎಲ್ಲರೂ ಮಂಜಪ್ಪನವರ ಮಾತಿಗೆ ಬೆಲೆಕೊಟ್ಟು ಸಮ್ಮತಿ ಸೂಚಿಸುತ್ತಿದ್ದರೆ ಹೊರತು ಯಾರೂ ಈ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಲಿಲ್ಲ. ಇದೆಲ್ಲವನ್ನು ತಿಳಿದ ಮಂಜಪ್ಪನವರು 1942ರಲ್ಲಿ ಟಿ.ಜಿ. ಒಡೆಯರ ಹತ್ತಿರ ಹೋದರು. ಇವರು ಒಬ್ಬ ವಕೀಲರು, ಇವರೂ ಸಹ ಭೂಮಾಲೀಕರಾಗಿದ್ದರು ಮತ್ತು ಒಳ್ಳೆಯ ಮಾನವೀಯತೆಯ ಮನುಷ್ಯರಾಗಿದ್ದರು. ಇವರ ಹತ್ತಿರಹೋಗಿ ಗೇಣಿದಾರರಿಗೆ ಏನೆಲ್ಲಾ ಅನ್ಯಾಯ ನಡೆಯುತ್ತಿದೆ. ಅದಕ್ಕಾಗಿ ಅವರ ಪರವಾಗಿ ವಾದಮಾಡಬೇಕು. ಅವರಿಗೆ ನ್ಯಾಯ ಸಿಗುವಂತೆ ಮಾಡಬೇಕು. ಎಂದು ಅವರಿಗೆ ತಿಳಿಸಿದರು. ಆಗ ಆ ವಕೀಲರು ವಿಚಾರಣೆ ಮಾಡೋಣಾ ಅಂತ ಹೇಳಿಕಳಿಸಿದರು. ಇದೆಲ್ಲವನ್ನು ದೂರದ ತೆರೆಯಮರೆಯಲ್ಲಿ ನಿಂತು ವೀಕ್ಷಿಸುತ್ತಿದ್ದ ಭೂ ಮಾಲೀಕರೆಲ್ಲಾ ಒಂದುಗೂಡಿಕೊಂಡು ಆ ವಕೀಲರ ಹತ್ತಿರ ಬಂದು ಇದಕ್ಕೇನಾದರೂ ನೀವು ಸೋತರೆ ನಮ್ಮದೆಲ್ಲಾ ಹೊರಟು ಹೋಗುತ್ತದೆ, ಆದ್ದರಿಂದ ಇದರಲ್ಲಿ ನೀವು ಸೋಲಲೇ ಕೂಡದು ಎಷ್ಟೇ ಹಣ ಖರ್ಚಾದರೂ ಚಿಂತೆಯಿಲ್ಲ (ಹೋರಾಟ ಶ್ರೀ (ಸಂ) ಡಾ: ಹೊ.ಶ್ರೀನಿವಾಸಯ್ಯ ಪು.31) ಈ ಕೇಸು ಮಾತ್ರ ಭೂಮಾಲೀಕರ ಪರವಾಗಿಯೇ ಆಗಬೇಕು ಎಂದು ವಕೀಲರಿಗೆ ತಿಳಿಸಿದರು. ಟಿ.ಜಿ. ಒಡೆಯರ ಎಂಬ ಚಾಣಾಕ್ಷನುರಿತ ನ್ಯಾಯವಾದಿಗಳು ಆಗಿದ್ದರು. ಇವರು ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ತಾವು ಒಬ್ಬ ಭೂ ಮಾಲೀಕರು ಎಂದು ಸಹ ತಿಳಿದುಕೊಂಡು ಭೂಮಾಲೀಕರ ಪರವಾಗಿ ನ್ಯಾಯ ಸಿಗುವಂತೆವಾದ ಮಾಡಿದರು. ಆದರೆ ಕೊನೆಗೂ ಈ ಚಳುವಳಿಯಲ್ಲಿ ಭೂಮಾಲೀಕರಿಗೇ ಜಯಲಭಿಸಿತು. ಈ ಪರಿಸ್ಥಿತಿಯಲ್ಲಿ ಎಲ್ಲಾ ಮಂತ್ರಿಗಳೂ ಭೂಮಾಲೀಕರೇ

ಆಗಿದ್ದರು. ಎಲ್ಲರೂ ಕೂಡಿಕೊಂಡು ಈ ರೀತಿ ಮಾಡಿರುವುದರಿಂದ ಮಂಜಪ್ಪನವರಿಗೆ ಜಯ ಲಭಿಸಲಿಲ್ಲ. ಇದರಿಂದ ಧೃತಿಗೆಡದೆ ಎಲ್ಲಾ ಗೇಣಿದಾರರನ್ನು ಒಂದುಗೂಡಿಸುವ ಪ್ರಯತ್ನವನ್ನಾದರೂ ಮಾಡಿರುವೆನೆಂಬ ಒಂದೇ ಒಂದು ಕಾರಣದಿಂದ ಸಂತೋಷಪಟ್ಟುಕೊಂಡರು. ಎಲ್ಲಾ ಗೇಣಿದಾರರು ಒಂದು ಕಾಡು ಜನಾಂಗದಿಂದ ಬಂದವರು, ಸಂಸ್ಕೃತಿಯನ್ನು ಕಾಣದೇ ಇರುವಂಥ ಜನ, ಕಡುಬಡತನದ ಬೆಂದ ಬೇಗುದಿಯಲ್ಲಿ ಬಾಳುತ್ತಿರುವ ಜನತೆ, ಭೂಮಾಲೀಕರಲ್ಲಿ ಕೂಲಿಯಾಳಾಗಿದ್ದ ಜನತೆಯನ್ನು ಒಂದುಗೂಡಿಸುವಲ್ಲಿ ಮತ್ತು ಅವರಲ್ಲಿ ಜಾಗೃತಿಯನ್ನುಂಟು ಮಾಡುವಂತಹ ಕೆಲಸವನ್ನು ಮಂಜಪ್ಪನವರು ಮಾಡಿದರು.

ಕಡಿದಾಳರು ದಕ್ಷ ಪ್ರಾಮಾಣಿಕ ನಾಯಕರು ಎಂಬುದಕ್ಕೆ ಈ ಕೆಳಗಿನ ಉದಾಹರಣೆ ನೋಡಬಹುದು :ಜೆ.ಪಿ.ಯವರ ಕಾರಣಕ್ಕಾಗಿ (ಸ್ಮಾರಕ ನಿಧಿಗಾಗಿ) ಕಡಿದಾಳ ಮತ್ತು ಜಯಪ್ರಕಾಶ್ ನಾರಾಯಣರು ಕೂಡಿಕೊಂಡು ವರ್ತಕರಲ್ಲಿ ಹೋಗಿ ನಿಧಿಯನ್ನು ಕೇಳುತ್ತಿರುವಾಗ ಅವರು ಹಣವನ್ನು ನೀಡುತ್ತಿರುವುದನ್ನು ಕಂಡು ನೋಡಿ ನೀವು ಹಣವನ್ನು ಕೊಡಬೇಡಿ ನೀವು ಕೊಡುತ್ತಿರುವ ಹಣ ಚೆಕ್ಕ್ ರೂಪದಲ್ಲಿರಬೇಕು. ನೀವು ನನಗೆ ಬ್ಲ್ಯಾಕ್ ಮನಿ(ಹಣ) ಕೊಡಬೇಡಿ ನೀವು ಕೊಡುತ್ತಿರುವ ಹಣ ಚೆಕ್ಕ್ ರೂಪದಲ್ಲಿರಬೇಕು. ನೀವು ಹಣವನ್ನು ಕೊಟ್ಟರೆ ಅವೆಲ್ಲಾ ಖರ್ಚಾಗಿ ಹೋಗಬಹುದು. ಇಲ್ಲವೇ ತಮ್ಮ ವೈಯುಕ್ತಿಕ ಕೆಲಸಗಳಿಗಾಗಿ ಯಾರಾದರೂ ಬಳಸಿಕೊಳ್ಳಬಹುದು ಆದರೆ ನಾವು ಮಾಡುತ್ತಾ ಇರುವುದು ಜೆ.ಪಿ. ಯವರ ಕಾರಣಕ್ಕಾಗಿ ಅದಕ್ಕಾಗಿ ತಾವುಗಳು ಚೆಕ್ಕುಗಳ ಮೂಲಕ ಹಣವನ್ನು ಕೊಡಬೇಕೆಂದು ವರ್ತಕರಲ್ಲಿ ವಿನಂತಿಸಿಕೊಂಡರು. ಇನ್ನೂ ಕೆಲವು ವರ್ತಕರು ಮಂಜಪ್ಪ ನವರನ್ನು ಕಂಡು ನೋಡಿ ಸರ್ ತಾವು ಯಾವತ್ತು ನಮ್ಮ ಹತ್ತಿರ ಬಂದು ಜೆ.ಪಿ.ಯವರ ಕಾರಣಕ್ಕಾಗಿ ಇಷ್ಟು ಹಣವನ್ನು ಕೊಡಿ ಅಷ್ಟು ಕೊಡಿ ಎಂದು ಹೇಳಿಲ್ಲ, ಆದರೆ ಹಲವಾರು ಮಂತ್ರಿಗಳು ಫೋನ್ ಮಾಡಿ ಅಷ್ಟುಹಣ ಕೊಡಿ, ಇಷ್ಟು ಹಣ ಕೊಡಿ ಎಂದು ಹೇಳುವರು, ಅದಕ್ಕಾಗಿಯೇ ಇಂದು ನಾವು ತಮಗೆ ಖಾಲಿ ಚೆಕ್ಕ್ ಕೊಡುತ್ತಿರುವೆ ಅದರಲ್ಲಿ ಎಷ್ಟು ಬೇಕಾದರೂ ಬರೆದುಕೊಳ್ಳಿ ಎಂದು ಹೇಳಿ ಸಹಿ ಮಾಡಿ ಚೆಕ್ಕನ್ನು ಕೊಟ್ಟರು. (ಹೋರಾಟ ಶ್ರೀ (ಸಂ) ಡಾ :ಹೊ.ಶ್ರೀನಿವಾಸಯ್ಯ ಪುಟ-37) ಇವೆಲ್ಲವನ್ನು ಗಮನಿಸಿದರೆ ಇವರು ಎಷ್ಟು ಪ್ರಾಮಾಣಿಕರಾಗಿದ್ದರು ಎಂಬುದು ಗೊತ್ತಾಗುತ್ತದೆ.

ಈ ಮೇಲಿನ ಅಂಶಗಳನ್ನಲ್ಲದೇ ಇನ್ನೂ ಹಲವಾರು ಅಂಶಗಳು ಇವರ ನ್ಯಾಯಯುತವಾದ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಇವರ ಪ್ರತಿಯೊಂದು ಕೆಲಸಕಾರ್ಯಗಳು ನ್ಯಾಯಯುತವಾಗಿ ನಡೆಯುವಂಥವು. ಇವರು ಯಾವಾಗಲೂ ನ್ಯಾಯಕ್ಕಾಗಿ, ನೀತಿ ಧರ್ಮಕ್ಕಾಗಿ, ಪ್ರಜಾಪ್ರಭುತ್ವದ ತತ್ವಗಳಿಗೆ ಮನ್ನಣೆ ನೀಡಿದವರು. ಇವರು ಯಾವುದೇ ಕೆಲಸ ಕಾರ್ಯಕೈಗೊಳ್ಳಲಿ ಅವೆಲ್ಲ ನ್ಯಾಯಯುತವಾದ ಮಾರ್ಗದಲ್ಲಿ ಎಂಬುದು ಈ ಎಲ್ಲಾ ಅಂಶಗಳಿಂದ ತಿಳಿದುಬರುತ್ತದೆ.

### ರಾಜ್ಯಪಾಲರಾಗಲು ಬಂದ ಆಹ್ವಾನವನ್ನು ತಿರಸ್ಕರಿಸಿದ್ದು

ಕಡಿದಾಳ ಮಂಜಪ್ಪನವರ ವ್ಯಕ್ತಿತ್ವವನ್ನು ಕಂಡು ಹಲವಾರು ರಾಜಕೀಯ ಧುರೀಣರು ಆಡಳಿತ ಪಕ್ಷದ ನೇತಾರರೆಲ್ಲರೂ ಕೂಡಿಕೊಂಡು ಕರ್ನಾಟಕದಲ್ಲಿ ರಾಜ್ಯಪಾಲರನ್ನಾಗಿ ಯಾರನ್ನು ನೇಮಿಸಬೇಕೆಂಬ ವಿಚಾರ ಬಂದಾಗ ಎಲ್ಲ ಮುಖಂಡರು ಇವರ ಹೆಸರನ್ನು ಸೂಚಿಸುತ್ತಾರೆ. ಆಗ

ಆಯ್ಕೆ ಮಾಡಿ ಕಡಿದಾಳ ಮಂಜಪ್ಪನವರಿಗೆ ರಾಜ್ಯಪಾಲರಾಗಿ ಅಧಿಕಾರಸ್ವೀಕರಿಸಿಲು ಆಹ್ವಾನ ಬಂತು. ಆಗ ಕಡಿದಾಳರು ಬಂದ ಆಹ್ವಾನವನ್ನು ಸ್ವೀಕರಿಸದೇ 'ಇಂದಿರಾಗಾಂಧಿಯವರ ಕೈ ಕೆಳಗೆ ನಾನು ಗುಲಾಮನಾಗಲಾರೆ ' ಎಂದು ತಿರಸ್ಕರಿಸಿಯೇ ಬಿಟ್ಟರು. (ಹೋರಾಟ ಶ್ರೀ (ಸಂ) ಡಾ : ಹೊ.ಶ್ರೀನಿವಾಸಯ್ಯ ಪುಟ-6)

ಯಾರು ತಾನೇ 'ಬಯಸದೇ ಬಂದ ಭಾಗ್ಯ' ವನ್ನು ಬಿಡುವರೆ? ಎಲ್ಲರೂ ಸ್ವೀಕರಿಸುವವರೆ, ಆದರೆ ಕಡಿದಾಳ ಮಂಜಪ್ಪನವರು ಇದಕ್ಕೆ ಆಸೆ ಪಡದೆ ಅಂದಿನ ಪರಿಸ್ಥಿತಿಯನ್ನು ನೋಡಿಕೊಂಡು ಈ ಆಹ್ವಾನವನ್ನು ತಿರಸ್ಕ ರಿಸಿ ಬಿಟ್ಟರು.

**ಕಡಿದಾಳ ಮಂಜಪ್ಪನವರ ಕ್ರಾಂತಿಕಾರಿ ಬದಲಾವಣೆಯ ಕನಸು**

ಕಡಿದಾಳ ಮಂಜಪ್ಪನವರು ಈ ಭವ್ಯಭಾರತಕ್ಕೆ ಹಲವಾರು ಸಾಂಕ್ರಾಮಿಕ ರೋಗಗಳು ತಗಲಿಕೊಂಡಿವೆ, ಭ್ರಷ್ಟಾಚಾರ, ದುರಾಚಾರ, ಅತ್ಯಾಚಾರ, ಅನಾಚಾರ ಹಿಂಸಾಚಾರಗಳ ಸೋಂಕು ತಗಲಿದೆ; ಎನ್ನುವ ಮಾತಿನಲ್ಲಿ ಸತ್ಯಾಂಶ ಅಡಗಿದೆ. ಈ ಮಹಾನ್‌ರಾಷ್ಟ್ರ ಭ್ರಷ್ಟಾಚಾರ ಮುಕ್ತ ಶೋಷಣೆ ಮುಕ್ತ ಶಾಂತಿ ಪ್ರಗತಿ ಪ್ರಧಾನ ರಾಷ್ಟ್ರವಾಗಬೇಕೆಂಬ ಹಂಬಲದಿಂದ ಕ್ರಾಂತಿಕಾರಿ ಬದಲಾವಣೆಯ ಕನಸು ಕಾಣಹತ್ತಿದರು. ಎಲ್ಲೆಡೆಯಲ್ಲಿಯೂ ನಿರಾಶೆಯ ಮತ್ತು ಅತೃಪ್ತಿಯ ಹೊಗೆಯಾಡಹತ್ತಿದೆ. ಕಾನೂನಿನ ದಿವಾಳಿತನ ತೋರಹತ್ತಿದೆ, ಸಾಮಾನ್ಯ ಜನರ ಜೀವನ ಕಷ್ಟದಲ್ಲಿ ಸಾಗುವಂತಾಯಿತು. ಭ್ರಷ್ಟಾಚಾರದಿಂದ ಕಪ್ಪು ಹಣದ ಭೀತಿ ಹೆಚ್ಚಾಯಿತು, ಲಂಚ ಕುತಂತ್ರಗಳು ಸ್ವಾರ್ಥಸಾಧನೆಗಳು, ಅನ್ಯಾಯ, ಅತ್ಯಾಚಾರ, ನಾವು-ನಮ್ಮವರು ಗಂಡು-ಹೆಣ್ಣು ಎಂಬ ಎಲ್ಲಾ ಭೇದಗಳನ್ನು ಮರೆತು ರಾಕ್ಷಸ ಕೃತ್ಯ ಕೈಮುಂದಾಗುತ್ತಿರುವುದನ್ನು ನೋಡಿದರು. ಉನ್ನತ ಸ್ಥಾನದಲ್ಲಿರುವ ಶ್ರೇಷ್ಠ ಅಧಿಕಾರಿಗಳು ರಾಜಕಾರಣಿಗಳು ಈ ಎಲ್ಲಾ ಕೃತ್ಯಗಳನ್ನು ನೋಡುತ್ತಾ ಕೈಕಟ್ಟಿ ಕುಳಿತುಕೊಂಡರು. ಇವುಗಳನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ತಿಳಿದುಕೊಂಡರು. ಈ ನಾಡಿನಲ್ಲಿ ಈ ರೀತಿಯಾಗಿ ರಾಜಕೀಯ ಮುಂದಾಳುಗಳಿಗೆ, ಭ್ರಷ್ಟ ಅಧಿಕಾರಿಗಳಿಗ, ಶ್ರೀಮಂತರಿಗೆ ಎದುರಾದರೆ ತಮ್ಮ ಜೀವಕ್ಕೆ ಅಪಾಯ ಎಂದು ಹಲವಾರು ಜನತೆ ಸುಮ್ಮನೇ ಕುಳುತಿರುವರು. ಇದೆಲ್ಲವನ್ನು ನೋಡಿದ ಮಂಜಪ್ಪ ನವರು ಇದೆಲ್ಲಾ ಕ್ರಾಂತಿಕಾರಿ ಬದಲಾವಣೆಯಿಂದಲೇ ಸಾಧ್ಯ ಎಂಬ ಕನಸು ಕಾಣಹತ್ತಿದರು. ಸಾಮಾಜಿಕ ವಿಷಯದಲ್ಲಂತೂ ಜಾತಿ ಪದ್ಧತಿಯನ್ನು ತೊಲಗಿಸಬೇಕು ಎಂಬ ವಿಚಾರದಲ್ಲಿ ಕಠಿಣವಾದ ನಿಲುವನ್ನು ತಾಳಿದಂಥವರು. ಧಾರ್ಮಿಕ ವಿಚಾರದಲ್ಲಂತೂ ವಿಚಾರವಾದಿಯಾಗಿ ಶ್ರೇಷ್ಠಜೀವನ ಸಾಗಿಸಿದ ಕ್ರಾಂತಿ ಪುರುಷರಿವರು. ವಿಗ್ರಹ ಪೂಜೆಯನ್ನು ತೀವ್ರವಾಗಿ ವಿರೋಧಿಸಿದರು. 'ದೇವರ ಹೆಸರಿನಲ್ಲಿ ದೇವಸ್ಥಾನ ಕಟ್ಟಿಬಿಟ್ಟು'ನಾವು ಇವನ್ನೆಲ್ಲಾ ಒಂದು ರೀತಿಯಲ್ಲಿ ಶೋಷಣೆಯ ಸಾಧನೆ ಮಾಡಿಕೊಂಡಿದ್ದೇವೆಯೇ ಹೊರತು ದೇವರುಗಳಿಂದ, ದೇವಸ್ಥಾನಗಳಿಂದ ಸಮಾಜಕ್ಕೆ ನಮಗೆ ಒಳ್ಳೆಯದಾಗಿಲ್ಲ (ಹೋರಾಟ ಶ್ರೀ (ಸಂ) ಡಾ:ಹೊ. ಶ್ರೀನಿವಾಸಯ್ಯ ಪುಟ-42) ಎಂಬ ಅಂಶವನ್ನು ವ್ಯಕ್ತಪಡಿಸಿದರು. ಈ ಎಲ್ಲಾ ಅಂಶಗಳನ್ನು ನೋಡಿದರೆ ಕಡಿದಾಳರು ಅಂದು ಸುಮ್ಮನೇ ಕುಳಿತುಕೊಳ್ಳದೇ ಹೋರಾಟದ ದಿಕ್ಕಿನಲ್ಲಿ ಮುಂದಿದ್ದು ಕ್ರಾಂತಿಕಾರಿ ಬದಲಾವಣೆ ಆದಾಗ ಮಾತ್ರ ಒಂದು ಒಳ್ಳೆಯ ಸಾಮಾಜಿಕ ವ್ಯವಸ್ಥೆ ರಾಜಕೀಯ ವ್ಯವಸ್ಥೆ ರೂಪಗೊಳ್ಳುತ್ತದೆ ಎಂಬ ಅವರ ಕನಸು ಕನಸಾಗಿಯೇ ಉಳಿಯಿತು, ಆದರೆ

ಕ್ರಾಂತಿಕಾರಕವಾದ ಬದಲಾವಣೆ ಆಗಲಿಲ್ಲ, ಇದರಿಂದಾಗಿ ಭ್ರಷ್ಟಾಚಾರ, ಅನಾಚಾರ, ಹಿಂಸಾಚಾರಗಳೆಲ್ಲವೂ ತಾಂಡವ ನೃತ್ಯ ಮಾಡುತ್ತಲಿರುವುದನ್ನು ನಾವು ಇಂದೂ ಸಹ ನೋಡಬಹುದಾಗಿದೆ.

## ರಾಜಕೀಯ ಪಕ್ಷಗಳಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ

ಕಡಿದಾಳ ಮಂಜಪ್ಪನವರು ಹೇಳಿರುವ ಈ ಮಾತು ಸತ್ಯವಾದದ್ದು ಅಷ್ಟೇ ನಿಖರವಾದುದಾಗಿದೆ. ಹೇಗೆಂದರೆ ಪ್ರಚಲಿತದಲ್ಲಿ ರಾಜಕೀಯ ಪಕ್ಷಗಳು ನ್ಯಾಯ, ನೀತಿ ಮಾನವೀಯತೆ, ಸಮಾನತೆ ಎಂಬ ತತ್ವಗಳನ್ನು ಗಾಳಿಗೆ ತೂರಿ, ಜಾತಿ ಮತ ಪಂಥಗಳನ್ನು ಲೆಕ್ಕಿಸದೇ ಹಣ ಇದ್ದವರೇ ರಾಜಕೀಯ ಪಕ್ಷದ ನೇತಾರರಾದರು. ರಾಜಕೀಯ ಪಕ್ಷದ ಮುಖಂಡರಾಗಿರುವುದು ಯಾರ ಕೋಮಿನವರು ಬಲಿಷ್ಠರಾಗಿರುವರೋ, ಯಾವ ಕೋಮಿನವರು ರಾಜಕೀಯ ಪಕ್ಷದ ಮುಂಚೂಣಿಯಲ್ಲಿರುವರೋ ಅದೇ ಕೋಮಿನವರೇ ಎಲ್ಲಾ ಕಡೆಗೆ ಅಂದರೆ ತಾಲ್ಲೂಕು, ಜಿಲ್ಲೆಗಳಲ್ಲಿಯೂ ಕೂಡಾ ರಾಜಕೀಯ ಪಕ್ಷಗಳಿಗೆ ತನ್ನ ಸಂಬಂಧಿಕರಿಗೆ ಉನ್ನತವಾದ ಹುದ್ದೆಗಳನ್ನೇ ನೀಡಿರುವರು. ಚುನಾವಣೆಯ ಸಮಯದಲ್ಲಿ ತಮ್ಮ ತಮ್ಮ ಜಾತಿಯವರಿಗೆ ಹೆಚ್ಚಿನ ಸೀಟುಗಳನ್ನು ಕೊಟ್ಟಂತಹ ಉದಾಹರಣೆಗಳು ಇಂದು ನಮ್ಮ ಮುಂದೆ ಸುಳಿದಾಡುತ್ತಿವೆ. ಮುಂದಿನ ಪರಿಸ್ಥಿತಿಯನ್ನು ಗಮನಿಸಿಯೇ ಈ ಮಾತು ಹೇಳಿರುವುದು ಔಚಿತ್ಯಪೂರ್ಣವಾಗಿದೆ. ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ಜನತೆಗೆ ಅನ್ಯಾಯ ಮಾಡುವಲ್ಲಿ ಮುಂದೆ ಬರುತ್ತಿರುವುದನ್ನು ಮನಗಂಡಿದ್ದರು. ಪಕ್ಷಗಳು ಹಣವನ್ನು ಸಂಪಾದನೆ ಮಾಡುವಂತಹ ಆಲೋಚನೆಗಳನ್ನು ರೂಢಿಮಾಡಿಕೊಂಡಿವೆ. ಪಕ್ಷದ ಹೆಸರಿನಲ್ಲಿ ಹಣ ಸಂಪಾದನೆ ಮಾಡುತ್ತಿರುವುದನ್ನು ಮಂಜಪ್ಪನವರು ಸ್ವತಃ ನೋಡಿರುವರು. ಮೌಲ್ಯಾಧಾರಿತ ಮತ್ತು ನೈತಿಕತೆಯ ತಳಹದಿಯ ಮೇಲೆ ರಾಜಕೀಯ ಬೆಳೆಯಬೇಕು ಎಂಬ ರಾಜಕೀಯ ಪಕ್ಷಗಳ ಸಿದ್ಧಾಂತವನ್ನು ಮುರಿದ ಪಟ್ಟಭದ್ರರು ತಮ್ಮ ಸ್ವಾರ್ಥಕ್ಕಾಗಿ ಪಕ್ಷವನ್ನೇ ಕೆಟ್ಟದಾರಿಗೆ ಕೊಂಡೊಯ್ಯುತ್ತಿರುವುದನ್ನು ಮತ್ತು ಅನೈತಿಕತೆ, ಮೌಲ್ಯಾಧಾರಿತ ತತ್ವಗಳನ್ನು ಅಳವಡಿಸಿಕೊಂಡು ಪಕ್ಷದ ಹೆಸರಿನಲ್ಲಿ ಲೆಕ್ಕವಿಲ್ಲದಷ್ಟು ಹಣಸಂಪಾದನೆ ಮಾಡುತ್ತಿರುವವರೇ, ಆಡಳಿತ ಪಕ್ಷದ ಚುಕ್ಕಾಣಿಯನ್ನು ಹಿಡಿದಿರುವವರೇ, ಈ ರೀತಿ ಮಾಡುವುದರಿಂದ ಈ ಎಲ್ಲಾ ಕಛೇರಿಗಳಲ್ಲೂ ಕೂಡಾ. ಎಲ್ಲಾ ರಾಜಕಾರಣಿಗಳೂ ಕೂಡಾ ಭ್ರಷ್ಟಾಚಾರವಿಲ್ಲದೇ ರಾಜಕೀಯ ಸಾಧ್ಯವಿಲ್ಲ ; ಎನ್ನುತ್ತಿರುವುದು ಇದೀಗ ಬಯಲಾಗುತ್ತಿದೆ. ಜಾತಿ, ಮತ, ಪಂಥ, ಬಡತನ-ಸಿರಿತನ ಕೊಲೆ-ಸುಲಿಗೆ ಮೇಲು-ಕೀಳು ಈ ಎಲ್ಲಾ ಅಂಶಗಳು ಎಲ್ಲಾ ಪಕ್ಷಗಳಲ್ಲಿ ಮನೆಮಾಡಿಕೊಂಡಿವೆ. ಇಂದು ತುಂಬಿ ತುಳುಕಾಡುತ್ತಿವೆ ಇಂತಹ ಪಕ್ಷಗಳಿಂದಲೇ ನಮ್ಮ ಪ್ರಜಾಪ್ರಭುತ್ವಕ್ಕೆ ಖಂಡಿತವಾಗಿಯೂ ಅಪಾಯವಾಗುತ್ತದೆ ಎಂದು ದೇಶವನ್ನು ಅಧೋಗತಿಗೆ ತಳ್ಳುತ್ತಿರುವುದನ್ನು ಕಂಡೇ ಕಡಿದಾಳರು ಹೇಳಿರುವ ಮಾತು ಔಚಿತ್ಯಪೂರ್ಣವಾದುದಾಗಿದೆ.

## ಮೈಸೂರಿನ ಗಾಂಧಿಯಾಗಿ ಕಡಿದಾಳ ಮಂಜಪ್ಪ

1927ರಲ್ಲಿಯೇ ಕಡಿದಾಳ ಮಂಜಪ್ಪನವರಿಗೆ ಗಾಂಧೀಜಿಯವರ ದರ್ಶನವಾಗಿತ್ತು. ಅಂದಿನಿಂದಲೇ ಗಾಂಧೀಜಿಯವರ ಗಾಢವಾದ ಪ್ರಭಾವ ಇವರ ಮೇಲೆ ಬಿತ್ತು. ಕಡಿದಾಳ ಮಂಜಪ್ಪನವರನ್ನು ಮತ್ತು ಗಾಂಧೀಜಿಯವರನ್ನು ಯಾವ ಕಾಲಕ್ಕೂ ಬೇರ್ಪಡಿಸಲು ಸಾಧ್ಯವಿಲ್ಲ.

ಏಕೆಂದರೆ ಗಾಂಧೀಜಿಯವರ ತತ್ವಗಳನ್ನು ಕಡಿದಾಳರು ಒಪ್ಪಿದರು. ಸತ್ಯ ಅಹಿಂಸೆ, ಸತ್ಯಾಗ್ರಹ ಎಂಬ ಮಂತ್ರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಾವು ಗಾಂಧೀ ಮಾರ್ಗದಲ್ಲಿಯೇ ನಡೆದು ಸಮಾಜಕ್ಕೆ ಅಂಟಿದ ದಾಸ್ಯ ಸಂಕೋಲೆಗಳನ್ನು ಕಿತ್ತೊಗೆಯುವ ಸಲುವಾಗಿ ಅವರ ಮೌಲ್ಯಗಳನ್ನು ತಮ್ಮ ಜೀವಿತದ ಕೊನೆಯವರೆಗೂ ಅಳವಡಿಸಿಕೊಂಡು ಬಂದರು. ಅವರ ಜೀವನದಲ್ಲಿ ಎಷ್ಟೇ ಕಷ್ಟನಷ್ಟಗಳು ಬಂದರೂ ಘರ್ಷಣೆಗಳು ನಡೆದರೂ ಸಹ ಅಂಜದೇ ಧೈರ್ಯದಿಂದ ಎದುರಿಸಿ ಮಹಾನ್ ಆದರ್ಶ ತತ್ವಗಳ ಮಾದರಿಯಲ್ಲಿಯೇ ಜೀವನ ಮಾಡಿದ ವ್ಯಕ್ತಿ ಎಂದರೆ ಕಡಿದಾಳ ಮಂಜಪ್ಪ.

1950 ರಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾದ ಮೇಲೆ ಗಾಂಧೀಜಿಯವರ ಆದರ್ಶಗಳನ್ನು ಪಾಲಿಸಿಕೊಂಡು ಬರಬೇಕಾಗಿದ್ದ ದೇಶದ ಜನತೆಯನ್ನು ಕಂಡು ರಾಜಕೀಯ ನೀಚರನ್ನು ನೋಡಿ ಗಾಂಧೀಜಿಯವರ ತತ್ವಗಳನ್ನು ಗಾಳಿಗೆ ತೂರುತ್ತಿರುವರಲ್ಲ ಎಂದು ಮನದಲ್ಲಿ ಮರಗಿಕೊಳ್ಳುತ್ತಾ ಹೀಗೆ ಹೇಳುತ್ತಾರೆ. ಈ ದೇಶದ ಇಂದಿನ ರಾಜಕೀಯ ದೃಶ್ಯ, ಬೇಟೆಗಾಗಿ ಅಲೆದಾಡುತ್ತಿರುವ ಹಸಿದ ತೋಳಗಳಿಂದ ತುಂಬಿರುವ ಬೆಂಗಾಡಿನಲ್ಲಿ ರಾಜಕಾರಣಿಗಳು ರಾಷ್ಟ್ರಭಕ್ತಿ, ಸತ್ಯಸಂಧತೆ, ಸಭ್ಯತೆ, ಶೀಲ ಮುಂತಾದ ಗುಣಗಳಿಗೆ ಸಂಪೂರ್ಣ ತಿಲಾಂಜಲಿ ಕೊಟ್ಟಂತೆ ತೋರುತ್ತದೆ. ಕೆಲವರಂತೂ ಅಧಿಕಾರ ಲಾಲಸೆಯ ಅಮಲಿನಲ್ಲಿ ತಮಗೆ ಇದ್ದ ಅಲ್ಪ ಸ್ವಲ್ಪ ಗೌರವವನ್ನು ಕಳೆದುಕೊಂಡಿದ್ದಾರಲ್ಲದೇ, ರಾಷ್ಟ್ರದ ಪ್ರತಿಷ್ಠೆ ಗೌರವಗಳಿಗೆ ಧಕ್ಕೆ ಉಂಟಾಗುವಂತೆ ಮಾಡುತ್ತಿದ್ದಾರೆ. ಆಗಾಗ್ಗೆ ಗಾಂಧೀಜಿಯ ವಿಚಾರಗಳನ್ನು ಪ್ರತಿಪಾದಿಸಿದವರು ದೇಶದ ಹಿತದೃಷ್ಟಿಯಿಂದ ತಮ್ಮ ಮಿತಿ ಮೀರಿದ ಆಶೆ-ಆಕಾಂಕ್ಷೆಗಳನ್ನು ಬದಿಗೊತ್ತಲು ಅಸಮರ್ಥರೆನಿಸಿಕೊಂಡಿದ್ದಾರೆ. ಇಂದಿರುವ ಅನಿಶ್ಚಯದ ಅಭದ್ರ ಪರಿಸ್ಥಿತಿ ಮುಂದುವರಿದರೆ ಅರಾಜಕತೆಯುಂಟಾಗಿ ಯಾವುದಾದರೂ ಒಂದು ವಿಧವಾದ ಸರ್ವಾಧಿಕಾರೀ ಪ್ರಭುತ್ವ ಅಸ್ತಿತ್ವಕ್ಕೆ ಬರುವುದೆಂಬ ವಿಷಯ ವಿಚಾರವಂತರನ್ನು ಬಾಧಿಸುತ್ತಾ ಇದೆ. (ಹೋರಾಟ ಶ್ರೀ (ಸಂ) ಡಾ.ಹೊ.ಶ್ರೀನಿವಾಸಯ್ಯ ಪುಟ 45) ಎಂದು ಮನನೊಂದು ಹೇಳಿರುವ ಮಾತು ಸಾರ್ವಕಾಲಿಕ ಸತ್ಯವಾದುದಾಗಿದೆ.

ಗೋಪಾಲಕೃಷ್ಣ ಗೋಖಲೆ ಮತ್ತು ಗಾಂಧೀಜಿಯವರ ಪರಂಪರೆಯಲ್ಲಿ ನಡೆದು ಬಂದವರು ಮಂಜಪ್ಪನವರು. ಈ ತ್ರಿಮೂರ್ತಿಗಳು ಮೌಲ್ಯಾಧಾರಿತ ಮತ್ತು ನೈತಿಕ ತಳಹದಿಯ ಮೇಲೆ ರಾಜಕೀಯವನ್ನು ಬೆಳೆಸಬೇಕೆಂಬ ಮನೋಭಾವ ಹೊಂದಿದವರು ಅದಕ್ಕಾಗಿ ಗಾಂಧಿ ಮತ್ತು ಮಂಜಪ್ಪನವರನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹೇಗೆಂದರೆ ಯಾವ ತತ್ವಗಳಿಂದ ರಾಜಕೀಯವನ್ನು ಮಾಡಬೇಕೆಂದು ಗಾಂಧೀಜಿಯವರು ಹೇಳುತ್ತಿದ್ದರೋ ಅದೇ ತತ್ವಗಳ ಅಡಿಯಲ್ಲೇ ತಮ್ಮ ತಮ್ಮ ರಾಜಕೀಯ ಜೀವನ ಸಾಗಿಸಿದರು. ಅದರಂತೆ ಕೆಲಸಕಾರ್ಯಗಳನ್ನು ನಿರ್ವಹಿಸಿದರು. ಅದಕ್ಕಾಗಿಯೇ ಇವರನ್ನು 'ಮೈಸೂರಿನ ಗಾಂಧಿ' ಯೆಂದು ಕರೆಯುತ್ತಿದ್ದರು. ಎಂದು ಎಚ್. ವಿ. ದಾಸಪ್ಪ ನವರು ಹೇಳಿರುವರು ಯಾವುದೇ ಒಂದು ಸಮಾರಂಭದಲ್ಲಿ ಗೋಪಾಲಕೃಷ್ಣ ಗೋಖಲೆಯವರು ಕಡಿದಾಳ ಮಂಜಪ್ಪ ನವರನ್ನು 'ಕರ್ನಾಟಕದ ಗಾಂಧಿ' ಎಂದು ಕರೆದಿರುವರು. (ಹೋರಾಟ ಶ್ರೀ:(ಸಂ) ಡಾ:ಹೊ.ಶ್ರೀನಿವಾಸಯ್ಯ ಪುಟ-42)

## ಇತರೇ ರಾಜಕೀಯ ವ್ಯಕ್ತಿಗಳೊಂದಿಗಿನ ಸಂಬಂಧ

ಕಡಿದಾಳ ಮಂಜಪ್ಪನವರು 1927ರಲ್ಲಿಯೇ ಗಾಂಧೀಜಿಯುವರ ದರ್ಶನ ಪಡೆದರು. ಇವರ ತತ್ವಗಳನ್ನು ಜೀವನಪರ್ಯಂತ ಅನುಸರಿಸಿದರು. ಗಾಂಧೀಜಿಯವರಿಂದ ಪ್ರಭಾವಿತರಾದ ಇವರ ಮೇಲೆ ಸುಭಾಷಚಂದ್ರಭೋಸ್, ಸರ್ದಾರ ವಲ್ಲಭಬಾಯಿ ಪಟೇಲ ರವರ ಪ್ರಭಾವ ಕೂಡ ಆಯಿತು. ರಾಷ್ಟ್ರಶಿಲ್ಪಿ ಭಾರತರತ್ನ ಸರ್. ಎಂ. ವಿಶ್ವೇಶ್ವರಯ್ಯ , ನೆಹರೂ, ಶಾಸ್ತ್ರೀ, ಬಾಬು ರಾಜೇಂದ್ರಪ್ರಸಾದ್, ರಾಜಗೋಪಾಲಾಚಾರಿ, ಜಯಪ್ರಕಾಶ್ ನಾರಾಯಣ್, ಗುಲ್ಜಾರಿಲಾಲ ನಂದಾ ಈ ಎಲ್ಲಾ ಪ್ರಮುಖ ನಾಯಕರೊಂದಿಗೆ ನೇರ ಮತ್ತು ನಿಕಟ ಸಂಪರ್ಕ ಹೊಂದಿದ್ದರು. ಇವರೆಲ್ಲರೂ ಸಹ ಕಡಿದಾಳ ಮಂಜಪ್ಪನವರನ್ನು ಆತ್ಮೀಯತೆಯಿಂದ ಬರಮಾಡಿಕೊಳ್ಳುತ್ತಿದ್ದರು. ಇಂತಹ ಎಲ್ಲಾ ಶ್ರೇಷ್ಠ ವ್ಯಕ್ತಿಗಳ ಸಾಲಿನಲ್ಲಿ ಕಡಿದಾಳರು ಸಹ ವಿರಾಜಮಾನರಾಗಿ ಕಾಣಿಸಿಕೊಳ್ಳುವುದರೊಂದಿಗೆ ಸುಮಧುರ ಬಾಂಧವ್ಯ ಹೊಂದಿದ್ದರು.

## ರಾಜಕೀಯ ನಿವೃತ್ತಿ

1927 ರಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗುವುದರೊಂದಿಗೆ ರಾಜಕೀಯ ಪ್ರವೇಶಿಸಿದ ಕಡಿದಾಳರು 1941ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಯಾದರು. ನ್ಯಾಯ ವಿಧಾಯಕರ ಸಭೆಗೆ ಅವಿರೋಧವಾಗಿ 1952ರಲ್ಲಿ ತೀರ್ಥಹಳ್ಳಿಯಿಂದ ವಿಧಾನಸಭೆಗೆ ಚುನಾಯಿತರಾಗಿ ಕಂದಾಯ ಮತ್ತು ಲೋಕೋಪಯೋಗಿ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. 1956ರಲ್ಲಿ 74ದಿನಗಳ ಕಾಲ ಮುಖ್ಯಮಂತ್ರಿಯಾಗಿ ಕರ್ನಾಟಕದ ಸೇವೆ ಮಾಡಿದ್ದಾರೆ.1952ರಲ್ಲಿ ಮತ್ತೆ ಶೃಂಗೇರಿ ಮತಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿ ಜತ್ತಿಯುವರ ಸಂಪುಟದಲ್ಲಿ ಕಂದಾಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದರು. ಈ ರೀತಿಯಲ್ಲಿ ರಾಜಕೀಯಜೀವನ ನಡೆಸುತ್ತಿರುವಾಗ ಭ್ರಷ್ಟಾಚಾರ, ದುರಾಚಾರ ಅನಾಚಾರ, ಹಿಂಸಾಚಾರ ಹಾಗೂ ಅರಾಜಕತೆಗಳು ತಾಂಡವವಾಡಹತ್ತಿದವು, ಎಲ್ಲಾ ರಾಜಕೀಯ ನಾಯಕರುಗಳಿಗೆ ಈ ರೋಗಗಳು ತಗಲಿದವು. ಇದನ್ನು ನೋಡಿದ ಕಡಿದಾಳರ ಮನಸ್ಸಿಗೆ ನೋವನ್ನುಂಟುಮಾಡಿತು. ಕೂಡಲೇ 1962ರಲ್ಲಿ ರಾಜಕೀಯದಿಂದ ನಿವೃತ್ತಿ ಹೊಂದಬೇಕು ಎಂದು ತೀರ್ಮಾನಿಸಿ ಅಂದಿನ ಕಾಂಗ್ರೆಸ್ ಅಧ್ಯಕ್ಷರಾದ ಕಾಮರಾಜ ನಾಡಾರ್ ಇವರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿ ರಾಜಕೀಯ ದಿಂದ ನಿವೃತ್ತಿ ಹೊಂದುವುದಾಗಿ ಘೋಷಿಸಿದರು.

## ರಾಜಕೀಯ ನಿವೃತ್ತಿಯ ನಂತರ ಅವರ ಸಾರ್ವಜನಿಕ ಬದುಕು

ರಾಜಕೀಯದಿಂದ ನಿವೃತ್ತಿ ಹೊಂದಿದ ನಂತರ ಕಡಿದಾಳ ಮಂಜಪ್ಪನವರು ತಮ್ಮ ಜೀವನವನ್ನು ತುಂಬಾ ಕಷ್ಟದಿಂದ ಸಾಗಿಸಹತ್ತಿದರು. ಆದರೆ ಇವರು ನಿವೃತ್ತಿಯ ನಂತರ ಸುಮ್ಮನೇ ಏಕೆ ಕೂಡಬೇಕು ಪುನಃ ವಕೀಲ ವೃತ್ತಿ ಆರಂಭಿಸಬೇಕೆನ್ನುವಂತಹ ವಿಚಾರದಲ್ಲಿದ್ದರು. ಆ ಸಮಯದಲ್ಲಿಯೇ ಅವರ ಆತ್ಮೀಯರೊಬ್ಬರು ಫೋನ್ ಮಾಡಿ ಇಂದು ಒಂದು ಕೇಸು ಕಳಿಸುತ್ತಿರುವೆ. ಅವನು ರೂ:1,000-00 ಕೊಡುವನು, ಎಂದು ಹೇಳಿದರು. ಈ ವಿಷಯ ಕೇಳಿ ತುಂಬಾ ಸಂತೋಷವಾಯಿತು. ಆದರೆ ಆ ವ್ಯಕ್ತಿ ಯಾರು ಈ ಕೇಸು ಯಾವ ವಿಷಯಕ್ಕೆ ಸಂಬಂಧಿಸಿದ್ದು ಎಂಬುದನ್ನು ತಿಳಿದುಕೊಳ್ಳದೆ ಸಂತೋಷಪಟ್ಟುಕೊಂಡಿದ್ದರು. ಆದರೆ ಬಂದ ವ್ಯಕ್ತಿ ತನ್ನ ಅಳಲನ್ನು

ತೋಡಿಕೊಂಡು ಹೇಳಿರುವುದನ್ನು ಎಚ್. ಎಸ್. ದೊರೆಸ್ವಾಮಿಯವರು 'ಕಡಿದಾಳ ಮಂಜಪ್ಪ' ನವರ ಜೀವನ ಮತ್ತು ಹೋರಾಟ ಎಂಬ ಲೇಖನದಲ್ಲಿ ಹೇಳಿರುವ ಮಾತುಗಳನ್ನೇ ಈ ಮುಂದಿನ ಸಾಲುಗಳಲ್ಲಿ ಹೇಳಲಾಗಿದೆ:ಕಾಂಟ್ರಾ ಕ್ಟರ್ ನಾಗಪ್ಪ ಎನ್ನುವವ ಬಂದವನೇ 'ನೋಡಿಸ್ವಾಮಿ, ಕಾಂಟ್ರಾಕ್ಟರ್ ಕೆಲಸ ಮಾಡುತ್ತಿರುವೆ, ನನಗೆ ಕಬ್ಬಿಣದ ಅಗತ್ಯ ಇದೆ. ಈಗ ಇದು ಎಲ್ಲಾ ಕಂಟ್ರೋಲರವರ ಕೈಯಲ್ಲಿದೆ. ಅದಕ್ಕಾಗಿ ತಾವು ಒಂದು ಕಾಗದ ಕೊಟ್ಟರೆ ಭದ್ರಾವತಿ ಕಬ್ಬಿಣದ ಕಾರ್ಖಾನೆಯಿಂದ ಕಬ್ಬಿಣವನ್ನು ಕೊಡುತ್ತಾರೆ. ಅದಕ್ಕಾಗಿ ಈ ಸಾವಿರ ರೂಪಾಯಿಗಳನ್ನು ನಿಮಗೆ ಕೊಡುತ್ತೇನೆಂದು ಹೇಳಿದಾಗ ಮಂಜಪ್ಪನವರು 'ಅಯ್ಯೋ ಇಂತಹ ಕೆಲಸಕ್ಕೋಸ್ಕರವಾಗಿ ಈ ಸಾವಿರ ರೂಪಾಯಿ, ಈ ಸಾವಿರ ರೂಪಾಯಿಗೋಸ್ಕರ ಈ ಕೆಲಸ ಮಾಡಬೇಕೆ ಎಂದು ತುಂಬಾ ಬೇಸರದಿಂದ 'ಇಲ್ಲಪ್ಪ ಇದು ಸಾಧ್ಯವಿಲ್ಲ ನಾನು ಸಂಬಂಧಪಟ್ಟವರಿಗೆ ಒಂದು ಕಾಗದ ಕೊಡುತ್ತೇನೆ. ಬೇಕಾದರೆ ನೀನು ಹೋಗಿ ಅವರನ್ನು ನೋಡುನಿನಗೆ ನ್ಯಾಯವಾಗಿ ಸಿಗುವ ಹಾಗಿದ್ದರೆ ಎಷ್ಟು ಬರಬೇಕೋ ಅಷ್ಟನ್ನು ಅವರು ಕೊಟ್ಟರೆ ನೀನು ತೆಗೆದುಕೋ' ಅಂತ ಕಾಗದ ಬರೆದುಕೊಟ್ಟರು. ಇವರ ಕಾಗದ ತೆಗೆದುಕೊಂಡು ಹೋದ ವ್ಯಕ್ತಿ ಕಬ್ಬಿಣ ತೆಗೆದುಕೊಂಡು ಹೋದರು. ಇದನ್ನು ನೋಡಿದರೆ ಇವರು ಎಷ್ಟು ಪ್ರಾಮಾಣಿಕ ವ್ಯಕ್ತಿ ಎಂಬುದು ಈ ಮೇಲಿನ ಸಾಲುಗಳಿಂದ ತಿಳಿದುಬರುತ್ತದೆ.

ಸಾಹಿತಿಯಾಗಿ ಮಂಜಪ್ಪನವರು

ಕಡಿದಾಳ ಮಂಜಪ್ಪನವರು ಒಬ್ಬ ಶ್ರೇಷ್ಠ ದಕ್ಷರಾಜಕಾರಣಿಯಾದರೂ ಸಹ ಶ್ರೇಷ್ಠ ಸಾಹಿತಿಯಾಗಿ ನಮ್ಮ ಕಣ್ಣ ಮುಂದೆ ಕಾಣಿಸಿಕೊಂಡಿದ್ದಾರೆ. ಇವರು ಮೂರು ಕಾದಂಬರಿ ಒಂದು ಆತ್ಮಕಥನವನ್ನು ಬರೆದಿದ್ದಾರೆ. 1962ರಲ್ಲಿ ಹೊರಬಂದ 'ಪಂಜರವಳ್ಳಿಯ ಪಂಜು' ಮೊದಲ ಕಾದಂಬರಿಗೆ ಬೇಂದ್ರೆಯವರು ಮುನ್ನುಡಿ ಬರೆದರೆ, ಮೂರನೆಯ ಕಾದಂಬರಿ 'ಕ್ರಾಂತಿ ಕೂಟ'1975ರಲ್ಲಿ ಹೊರಬಂದಿದೆ. ಇದಕ್ಕೆ ಶ್ರೀರಂಗರು ಮುನ್ನುಡಿ ಬರೆದಿರುವರು. ಎರಡನೇ ಕಾದಂಬರಿ 'ನಾಳೆಯ ನೆಳಲು'1966ರಲ್ಲಿ ಪ್ರಕಟವಾಯಿತು. 1990 ರಲ್ಲಿ 'ನನಸಾಗದ ಕನಸು' ಎಂಬ ಆತ್ಮಕಥನವನ್ನು ಬರೆದು ಪ್ರಕಟಿಸಿದರು. ಮೊದಲನೇ ಕಾದಂಬರಿಯಲ್ಲಿ ಮೂರು ಹಳೆಯ ತಲೆಮಾರಿನ ಕಥೆಯನ್ನು ಹಂತ ಹಂತವಾಗಿ ಬಿಚ್ಚುತ್ತಾ ಸಾಗಿರುವುದನ್ನು ಬಹು ಸುಂದರವಾಗಿ ಚಿತ್ರಿಸಿದರೆ, ಎರಡನೇ ಕಾದಂಬರಿ 'ನಾಳೆಯ ನೆಳಲು'ಅವರ ರಾಜಕೀಯ ಬದುಕಿನ ವೈರಾಗ್ಯ ಸ್ಥಿತಿಯನ್ನು ಕುರಿತು ವಿವರಗಳನ್ನೊಳಗೊಂಡಿದೆ. ಮೂರನೆಯ ಕಾದಂಬರಿಯಾದ 'ಕ್ರಾಂತಿಕೂಟದಲ್ಲಿ' ರಾಜಕೀಯ ಮತ್ತು ಸಾಮಾಜಿಕ ವಾಸ್ತವ ಸಂಗತಿಗಳನ್ನೇ ಆಯ್ಕೆಮಾಡಿಕೊಂಡು ಬಹು ಸುಂದರವಾಗಿ ಕಥೆಯನ್ನು ಚಿತ್ರಿಸಿರುವರು. ಇವರ ಅತ್ಯಂತ ಶ್ರೇಷ್ಠ ಅಮೋಘ, ಮೇರು ಕೃತಿಯಾದ 'ನನಸಾಗದ ಕನಸು'ಕನ್ನಡದ ಆತ್ಮಕಥನಗಳಲ್ಲಿಯೇ ಅತ್ಯಂತ ಪ್ರಾಮಾಣಿಕ ಕೃತಿ. ಇವರ ಎಲ್ಲಾ ಕೃತಿಗಳಲ್ಲಿ ಶ್ರೀಮಂತಿಕೆ ದಾರಿದ್ರ್ಯ ಮಾನವೀಯ ಸಾತ್ವಿಕತೆ, ತಾಮಸಿಕ ರಾಜಕೀಯತೆ ಎಲ್ಲೆಲ್ಲಿ ತುಂಬಿಕೊಂಡಿರುವುದನ್ನು ಮತ್ತು ಬದುಕಿನ ವೈರಾಗ್ಯ ಸ್ಥಿತಿಯೊಂದಿಗೆ ರಾಜಕೀಯ. ಮತ್ತು ಸಾಮಾಜಿಕ ವಸ್ತುಗಳೊಂದಿಗೆ ತಮ್ಮ ಜೀವಿತದಲ್ಲಿ ನಡೆದ ಎಲ್ಲಾ ಘಟನೆಗಳನ್ನು ನೇರವಾಗಿ ಖಡಾಖಂಡಿತವಾಗಿ ತಮ್ಮೆಲ್ಲಾ ಸಿಟ್ಟು ರೋಷವನ್ನು ತಮ್ಮ ಕೃತಿಗಳಲ್ಲಿ ತೋರಿಸಿರುವರು. ಒಟ್ಟಾರೆಯಾಗಿ ಇವರು ಒಬ್ಬ ಶ್ರೇಷ್ಠ ರಾಜಕಾರಣಿಯಾಗಿ, ಶ್ರೇಷ್ಠ ಸಾಹಿತಿಯಾಗಿ ಆಧುನಿಕ ಗಳಗನಾಥರಾಗಿ ನಮ್ಮೆಲ್ಲರಿಗೂ ಕಾಣಿಸಿಕೊಂಡಿದ್ದಾರೆ.

### ಕಡಿದಾಳ ಮಂಜಪ್ಪನವರ ಕೊನೆಯ ದಿನಗಳು

ಕಡಿದಾಳ ಮಂಜಪ್ಪನವರಿಗೆ ಹೊಟ್ಟೆ ಹುಣ್ಣು ಆದ ಕಾರಣ ಬಹಳ ತೊಂದರೆ ಅನುಭವಿಸಿದರು. ತಮ್ಮ ಜೀವನದಲ್ಲಿ ಅನ್ಯಾಯ, ಅತ್ಯಾಚಾರ, ಅನಾಚಾರ ನಡೆಯುತ್ತಿರುವುದನ್ನು ನೋಡಿಕೊಂಡಿರುವುದು ಅವರಿಂದ ಸಾಧ್ಯವಾಗುತ್ತಿರಲಿಲ್ಲ ಇದಕ್ಕೆ ಪ್ರತಿಯಾಗಿ ಜನರನ್ನು ಸಂಘಟನೆ ಮಾಡಬೇಕು ಜನತೆಗೆ ತಿಳಿಹೇಳಬೇಕು ಎಂದು ಅವರ ಮನಸ್ಸು ಹೇಳುತ್ತಿತ್ತು. ಆದರೆ ಹೊಟ್ಟೆನೋವಿನ ಅನಾರೋಗ್ಯದಿಂದ ಬಳಲುತ್ತಿದ್ದು ಸಂಚರಿಸಲು ಸಾಧ್ಯವಾಗದೆ ಚೈತನ್ಯವನ್ನೇ ಕಳೆದುಕೊಂಡಂತಾಗಿ 1992 ಮಾರ್ಚ್ 8 ರಂದು ಇಹಲೋಕದ ಯಾತ್ರೆಯನ್ನು ಮುಗಿಸಿದರು.

### ವ್ಯಕ್ತಿತ್ವ

ಕೋಟು, ಬಿಳಿಯ ಪೈಜಾಮದ ಉಡುಪೇ ಅವರ ಸರಳತೆಗೆ ಸಾಕ್ಷಿ. ಕೊನೆಯವರೆಗೂ ವಕೀಲ ವೃತ್ತಿಯಿಂದ ದುಡಿದು ತಿನ್ನುವ ಬದುಕು ಸಾಗಿಸಿದರು ಶುದ್ಧಚಾರಿತ್ರ್ಯ, ನೇರ ನಡುವಳಿಕೆಗೆ ಹೆಚ್ಚು ಪ್ರಾತಿನಿಧ್ಯ ನೀಡಿದರು. ಭ್ರಷ್ಟಾಚಾರದ ಬಗ್ಗೆ ಸದಾನೊಂದು ಟೀಕಿಸುತ್ತಿದ್ದರು. ಅವರು ನುಡಿದಂತೆ ನಡೆದ ರಾಜಕಾರಣಿ ಪದವಿಯ ಮೋಹಕ್ಕೆ ಎಂದೂ ಅಂಟಿಕೊಳ್ಳಲಿಲ್ಲ. ಬಾಡಿಗೆ ಮನೆಯಲ್ಲೇ ವಾಸ. ನಿರ್ಭೀತ. ನಿಷ್ಠರಾಜಕಾರಣಿ ಅನ್ನಿಸಿಕೊಂಡರು. (ಹೋರಾಟ ಶ್ರೀ (ಸಂ) ಡಾ:ಹೊ.ಶ್ರೀನಿವಾಸಯ್ಯ ಪುಟ-7) ಸ್ವಾತಂತ್ರ್ಯಸಂಗ್ರಾಮದಲ್ಲಿ ಅನ್ಯಾಯದ ವಿರುದ್ಧ ಹೋರಾಡಿದ ಧೀಮಂತ ವ್ಯಕ್ತಿತ್ವ ಇವರದು. ಸಾರ್ವಜನಿಕ ಜೀವನದ ಪರಿಶುದ್ಧತೆಗಾಗಿ ಒಬ್ಬ ಗಾಂಧೀವಾದಿಯಾಗಿ, ಒಬ್ಬ ಶ್ರೇಷ್ಠ ನಾಯಕರಾಗಿ, ನ್ಯಾಯಯುತವಾದ ತತ್ವಗಳಿಗೆ ಹೊಂದಿಕೊಂಡು ಅವುಗಳಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ವ್ಯಕ್ತಿತ್ವ ಇವರದಾಗಿದೆ. ದಕ್ಷತೆ ಚಾಣಾಕ್ಷತೆ, ಸಮಾನತೆ ಈ ಮೂರು ಗುಣಗಳನ್ನು ಹೊಂದಿದ ಅಪರೂಪದ ವ್ಯಕ್ತಿತ್ವ ಇವರದಾಗಿತ್ತು. ತಾನು ಕೆಡಬಾರದು ಗಾಂಧಿ ತತ್ವ ಬಿಡಬಾರದು. ತಾವು ಅನ್ಯಾಯದ ಮಾರ್ಗದಲ್ಲಿ ನಡೆಯಬಾರದು. ತಾವು ಭ್ರಷ್ಟಾಚಾರಿಯಾಗಬಾರದು. ತಾವು ಬಡತನದ ಜೀವನದೊಂದಿಗೆ ಕಷ್ಟನಷ್ಟಗಳನ್ನು ಅನುಭವಿಸಿದರೂ ಪರವಾಗಿಲ್ಲ. ತಾವು ಮಾತ್ರ ಮರ್ಯಾದೆ ಯಿಂದ ಬಾಳಬೇಕು. ಗೌರವದಿಂದ ಉನ್ನತ ಜೀವನ ಸಾಗಿಸಬೇಕು. ಅನ್ನುವಂತಹ ಸಾಮಾಜಿಕ ಮೌಲ್ಯದಿಂದೊಡಗೂಡಿದ ವ್ಯಕ್ತಿತ್ವ ತಮ್ಮದಾಗಿರಬೇಕೆಂಬುದು ಇವರ ಕನಸಾಗಿತ್ತು. ಇದು ಕೂಡಾ ಇವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಇವರು ಒಬ್ಬ ಚಿಂತನಶೀಲರು. ನಿಜವಾಗಿ ಇವರು ಒಬ್ಬ ರಾಜಕೀಯ ಚಿಂತಕರಾಗಿ ಇಂದು ನಮ್ಮ ಕಣ್ಣ ಮುಂದೆ ಬಂದು ನಿಂತಿರುವುದು ಇವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಭಾ ಗ - 2

# ಸಂಸದೀಯ ಪಟುವಾಗಿ ಶ್ರೀ ಕಡಿದಾಳ್ ಮಂಜಪ್ಪನವರು

## ಭಾಗ-2

## ಸಂಸದೀಯ ಪಟುವಾಗಿ

1. 1952 (ಜುಲೈ 1) ಕಂದಾಯ ಸಚಿವರಾಗಿ,

   ವಿಷಯ: ನೂಗು ಪ್ರಾಜೆಕ್ಟನ್ನು ಪೂರ್ಣಗೊಳಿಸುವ ಬಗ್ಗೆ ಕೇಳಲಾದ ಪ್ರಶ್ನೆಗಳಿಗೆ ನೀಡಿದ ಉತ್ತರಗಳು.

2. 1952 (ಜುಲೈ 14) ಕಂದಾಯ ಸಚಿವರಾಗಿ,

   ವಿಷಯ: ವಿಧಾನಸಭೆಯ ಹಾಲ್‌ನ್ನು ಜೀರ್ಣೋದ್ಧಾರಗೊಳಿಸುವುದಕ್ಕಾಗಿ ಮಾಡಿದ ಖರ್ಚುಗಳ ಕುರಿತು-ಪ್ರಶ್ನೋತ್ತರಗಳು.

3. 1952 (ಜುಲೈ 14) ಕಂದಾಯ ಸಚಿವರಾಗಿ,

   ವಿಷಯ: ಹಾಸನ ಜಿಲ್ಲೆಯಲ್ಲಿ ಕಂದಾಯ ಇಲಾಖೆಗೆ ಒಪ್ಪಿಸಿದ ಅಮೃತ್ ಮಹಲ್ ಭೂಮಿಯ ಇತ್ಯರ್ಥ ಕುರಿತು ಪ್ರಶ್ನೋತ್ತರಗಳು.

4. 1952(ಜುಲೈ 14) ಕಂದಾಯ ಸಚಿವರಾಗಿ,

   ವಿಷಯ: ಬೆಂಗಳೂರು ಜಿಲ್ಲೆಯಲ್ಲಿನ ಕೆರೆಗಳು-ಕುರಿತು ಪ್ರಶ್ನೋತ್ತರಗಳು.

5. 1952(ಜುಲೈ, 14) ಕಂದಾಯ ಸಚಿವರಾಗಿ,

   ವಿಷಯ: ಅರಣ್ಯ, ಅಮೃತ್ ಮಹಲ್ ಮತ್ತು ಡೇಟ್ ರಿಜರ್ವ್ ಪ್ರದೇಶಗಳಿಂದ ಸಾಗುವಳಿಗಾಗಿ ಭೂಮಿಯ ಬಿಡುಗಡೆ ಕುರಿತು ಪ್ರಶ್ನೋತ್ತರಗಳು.

6. 1952 (ಜುಲೈ, 15)ಕಂದಾಯ ಸಚಿವರಾಗಿ,

   ವಿಷಯ: ಗೋರೂರಿನ ಹೇಮಾವತಿ ನದಿಯ ಬದಿಯಲ್ಲಿ ಡ್ಯಾಮಿನ ನಿರ್ಮಾಣ ಕುರಿತು ಪ್ರಶ್ನೋತ್ತರಗಳು.

7. 1952 (ಜುಲೈ, 15) ಕಂದಾಯ ಸಚಿವರಾಗಿ,

   ವಿಷಯ: ಭೂ ಸುಧಾರಣಾ ಸಮಿತಿಯ ಶಿಫಾರಸ್ಸುಗಳ ಕುರಿತು ಪ್ರಶ್ನೋತ್ತರಗಳು.

8. 1952 (ಜುಲೈ, 15) ಕಂದಾಯ ಸಚಿವರಾಗಿ,

   ವಿಷಯ: ಸಾಮುದಾಯಿಕ ಯೋಜನೆಗಳ ಕುರಿತು ಪ್ರಶ್ನೋತ್ತರಗಳು.

9. 1952 (ಜುಲೈ, 15) ಕಂದಾಯ ಸಚಿವರಾಗಿ,

ವಿಷಯ: ಕಾವೇರಿ ಹಂಚಿಕೆಯ ಬಗ್ಗೆ ಮೈಸೂರು ಮತ್ತು ಮದ್ರಾಸ್ ಸರಕಾರಗಳ ಒಪ್ಪಂದದ ಕುರಿತು ಪ್ರಶ್ನೋತ್ತರಗಳು.

10. 1952 (ಜುಲೈ, 15) ಕಂದಾಯ ಸಚಿವರಾಗಿ,

ವಿಷಯ : ರೈತರನ್ನು ಸಾಲದಿಂದ ಮುಕ್ತಗೊಳಿಸುವ ಕುರಿತು ಪ್ರಶ್ನೋತ್ತರಗಳು.

11. 1952 (ಅಕ್ಟೋಬರ್, 25) ಕಂದಾಯ ಸಚಿವರಾಗಿ,

ವಿಷಯ: ಭೀಮಪ್ಪ ನಾಯಕರಿಗೆ ಕ್ಷಾಮ ಪರಿಸ್ಥಿತಿಯ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಕೊಂಡು ಆ ಕಷ್ಟವನ್ನು ನಿವಾರಣೆ ಮಾಡಲು ನಿಪುಣರ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಕೇಳಿದಾಗ ಆ ನಿರ್ಣಯದ ಬಗ್ಗೆ ಹೇಳಿಕೆ.

12. 1953 (ಮಾರ್ಚ್, 10) ಕಂದಾಯ ಸಚಿವರಾಗಿ

ವಿಷಯ: ಮಾರಾಟಕರ ಮೇಲಿನ ಸಮಿತಿಯ ಶಿಫಾರಸ್ಸುಗಳು.

13. 1953 (ಮಾರ್ಚ್, 26) ಕಂದಾಯ ಸಚಿವರಾಗಿ,

ವಿಷಯ: ಸಾಮುದಾಯಿಕ ಯೋಜನೆಗಳ ಕಾರ್ಯ ಯೋಜನೆ.

14. 1953 (ಮಾರ್ಚ್, 27) ಕಂದಾಯ ಸಚಿವರಾಗಿ,

ಟೇನಾನ್ಸಿ ಆ್ಯಕ್ಟ ಮೇಲಿನ ಚರ್ಚೆಗೆ ಸ್ಪಷ್ಟೀಕರಣ.

15. 1953 (ಏಪ್ರಿಲ್, 11) ಕಂದಾಯ ಸಚಿವರಾಗಿ,

ವಿಷಯ: ಮೈಸೂರು ಇನಾಮ ರದ್ದತಿಯ ಮಸೂದೆಯ ಮೇಲೆ ಜಂಟಿ ಸೆಲೆಕ್ಟ ಸಮಿತಿಗೆ ಒಪ್ಪಿಗೆ ಕುರಿತು ಸ್ಪಷ್ಟೀಕರಣ.

16. 1953 (ಏಪ್ರಿಲ್, 12) ಕಂದಾಯ ಸಚಿವರಾಗಿ,

ವಿಷಯ: ಮೈಸೂರು ಕೃಷಿಕರ ಪರಿಹಾರ (ತಿದ್ದುಪಡಿ) ಮಸೂದೆ 1953.

17. 1953 (ಜುಲೈ, 27) ಕಂದಾಯ ಸಚಿವರಾಗಿ,

ವಿಷಯ: ಆಂಧ್ರ ರಾಜ್ಯ ಮಸೂದೆ-ಮಂಡಿಸಿದಾಗ ನೀಡಿದ ಹೇಳಿಕೆ.

18. 1954 (ಜನವರಿ, 20)

ವಿಷಯ: ಮೈಸೂರು ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಮಸೂದೆ (ತಿದ್ದುಪಡಿ) 1954.

## ಸಂಸದೀಯ ಪಟು

## ಶ್ರೀ ಕಡಿದಾಳ ಮಂಜಪ್ಪನವರು

ಶ್ರೀ ಕಡಿದಾಳ ಮಂಜಪ್ಪನವರು, ಮೈಸೂರು (ಆಗಿನ) ರಾಜ್ಯದ, ಕಂದಾಯ ಮಂತ್ರಿಯಾಗಿ ಮತ್ತು ರಾಜ್ಯದ ಮುಖ್ಯ ಮಂತ್ರಿಯಾಗಿ, ರಾಜ್ಯದ ಶಾಸಕಾಂಗದ ಸದನಗಳಲ್ಲಿ ಸದಸ್ಯರ ಪ್ರಶ್ನೆಗಳಿಗೆ, ಉತ್ತರ ನೀಡಿ, ಕೆಲವು ಮಹತ್ವದ ವಿಷಯಗಳ ಮೇಲೆ, ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ತಮ್ಮ ಹೇಳಿಕೆಗಳನ್ನು ನೀಡಿದ್ದುಂಟು. ಅವರ ಎಲ್ಲ ಉತ್ತರಗಳು ಮತ್ತು ಚರ್ಚೆಗಳು ಮತ್ತು ಹೇಳಿಕೆಗಳು, ಶಾಸಕಾಂಗದ ಸದನಗಳಾದ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳ ನಡವಳಿಕೆಗಳ (Proceedings) ಮೇಲೆ ಆಧಾರವಾಗಿವೆ. ಇಲ್ಲಿ ಆ, ಆಧಾರಗಳ ಮೂಲಕ ಶ್ರೀ ಕಡಿದಾಳ ಮಂಜಪ್ಪನವರ ಕೆಲವು ಪ್ರಮುಖ, ವಿಷಯಗಳ ಮೇಲಿನ, ಪ್ರಶ್ನೆಗಳಿಗೆ ಉತ್ತರಗಳನ್ನು, ಮತ್ತು ಚರ್ಚೆಗಳಲ್ಲಿ ಭಾಗವಹಿಸಿ ತಮ್ಮ ಹೇಳಿಕೆಗಳನ್ನು ನೀಡಿದ್ದನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ.

**ಸದನದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಶ್ರೀ ಕಡಿದಾಳ ಮಂಜಪ್ಪನವರು, ಕಂದಾಯ ಮಂತ್ರಿಯಾಗಿ ನೀಡಿದ ಉತ್ತರಗಳು.**

**(ಕೆಲವು ಮಹತ್ವದ ಪ್ರಶ್ನೆಗಳನುಸಾರ- ಜುಲೈ 01, 1952)**

**1. ವಿಷಯ: ನುಗು ಪ್ರಾಜೆಕ್ಟ್‌ನ್ನು ಪೂರ್ಣಗೊಳಿಸುವ ಬಗ್ಗೆ)**

ಪ್ರಶ್ನೆ: ಎಂ.ಲಿಂಗಣ್ಣ (ನಂಜನಗೂಡ) ಅವರಿಂದ

ಅ) ಮೈಸೂರು ಜಿಲ್ಲೆಯ ನುಗು ಆಣೆಕಟ್ಟಿನ ಅಂದಾಜು.

ಬಿ) ಅದರ ಪ್ರಾರಂಭದ ವರ್ಷ.

ಕ) ಅದನ್ನು ಪೂರ್ಣ ಗೊಳಿಸುವ ವರ್ಷ.

ಡ) ನೀರಾವರಿಗೆ ಒಳಪಡುವ ಭೂಮಿಯ ಒಟ್ಟು ಎಕರೆಗಳೆಷ್ಟೆಂಬುದನ್ನು ತಿಳಿಸುವಿರಾ?

ಉತ್ತರ: ಶ್ರೀ ಕಡಿದಾಳ ಮಂಜಪ್ಪ

| | |
|---|---|
| ಅ) ಡ್ಯಾಮು | 1,30,75,000 |
| ಚ್ಯಾನೆಲ್ | 96,00,000 |
| ಒಟ್ಟು | 2,26,75,000 |

ಬ) 1947

ಕ) ಜೂನನಲ್ಲಿ ಪೂರ್ಣವಾಗುವುದು. ಆದರೆ ಅದೆಲ್ಲಾ ವಾರ್ಷಿಕ ಅನುದಾನಗಳ ಮೇಲೆ ಅವಲಂಬಿಸಿದೆ.

ಡ) 20 ಸಾವಿರ ಎಕರೆಗಳು.

ಪ್ರಶ್ನೆ : ಲಿಂಗಣ್ಣ ನವರಿಂದ :

ಆಣೆಕಟ್ಟು ಪ್ರಥಮ, ದ್ವಿತೀಯ ಅಥವಾ ತೃತೀಯ ಹಂತ ತಲುಪಿದೆಯೇ ಎಂಬುದನ್ನು ನಾನು ತಿಳಿದುಕೊಳ್ಳಬಹುದೇ

ಉತ್ತರ: ಶ್ರೀ ಕಡಿದಾಳ ಮಂಜಪ್ಪ

ಈಗ ಆಣೆಕಟ್ಟಿನ ಪ್ರಾರಂಭಿಕ ಕೆಲಸ ಪೂರ್ಣಗೊಂಡಿದೆ. ನದಿಯ ಬೆಡ್ಡಿನ ಪೂರ್ಣ ಅಗಲದ ಕೆಲಸವನು ಗ್ರೌಂಡಿಂಗವು ಪೂರ್ಣವಾಗಿದೆ. ಮ್ಯಾಸನರಿ ಕೆಲಸ, ನದಿಯ ಬೆಡ್ಡಿನ 2:3 ರಷ್ಟು ಕೆಲಸ ಅಪೂರ್ಣವಿದೆ.

## 2: ವಿಧಾನ ಸಭೆಯ ಹಾಲನ್ನು ಜೀರ್ಣೋದ್ದಾರಗೊಳಿಸುವುದಕ್ಕಾಗಿ ಮಾಡಿದ ಖರ್ಚುಗಳ ವಿವರ ಕುರಿತು ಪ್ರಶ್ನೋತ್ತರಗಳು 14ನೇ ಜುಲೈ 1952).

ಪ್ರಶ್ನೆ : ಶ್ರೀ ಜೆ. ಮಹ್ಮದ್ ಇಮಾಮ (ಜಗಳೂರು) ರಿಂದ :

ವಿಧಾನ ಸಭೆಯ ಸಭೆಯನ್ನು ಕರೆಯಲು ಕೋಣೆಯ ಜೀರ್ಣೋದ್ಧಾರಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂಬುದನ್ನು ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ (ಕಂದಾಯ ಸಚಿವರು)

ಒಂದು ಲಕ್ಷ ರೂಪಾಯಿ.

ಪ್ರಶ್ನೆ: ಶ್ರೀ ಜೆ. ಮಹ್ಮದ್ ಇಮಾಮ :

ಈ ಹಾಲಿಗೆ ಒಂದು ಲಕ್ಷರೂ. ಖರ್ಚಾಗಿದೆ ಎಂದು ಅಪ್ಪಣೆ ಕೊಡಿಸಿದ್ದೀರಿ. ಇದನ್ನು ಬಿಟ್ಟು ಬೇರೆ ಏನಾದರೂ ಖರ್ಚಾಗಿದೆಯೇ?

ಪ್ರಶ್ನೆ :ಶ್ರೀ ಕಡಿದಾಳ ಮಂಜಪ್ಪ :

ಖರ್ಚಾಗಿಲ್ಲ.

ಪ್ರಶ್ನೆ : ಶ್ರೀ ಜೆ. ಮಹ್ಮದ್ ಇಮಾಮ:

ಸದಸ್ಯರು, ಕುಳಿತಿರುವುದು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕಾಣದೇ ಇರುವುದು, ಪ್ರೆಸ್‌ನವರಿಗೆ ಸರಿಯಾಗಿ ಲೌಡ ಸ್ಪೀಕರ್ ಕೇಳದೇ ಇರುವುದು ಗೊತ್ತೇ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹೌಸ್ ಆಫ್ ಕಾಮನ್ಸ್ ಮಾದರಿಯಲ್ಲಿ ಈ ಹಾಲನ್ನು ಮಾಡಿದ್ದೇವೆ.

## 3 : ಹಾಸನ ಜಿಲ್ಲೆಯಲ್ಲಿ ಕಂದಾಯ ಇಲಾಖೆಗೆ ಒಪ್ಪಿಸಿದ ಅಮೃತ ಮಹಲ ಕವಲಿನ ಭೂಮಿಯ ಇತ್ಯರ್ಥ ಕುರಿತು ಪ್ರಶ್ನೋತ್ತರಗಳು.(14ನೇ ಜುಲೈ 1952)

ಪ್ರಶ್ನೆ : ಶ್ರೀ ಎಚ್. ಕೆ. ಸಿದ್ಧಯ್ಯಾ (ಬೇಲೂರು-ಪರಿಶಿಷ್ಟ ಜಾತಿಗಳು) :

ಅ) ಕಳೆದ ಐದು ವರ್ಷಗಳಲ್ಲಿ ಕಂದಾಯ ಇಲಾಖೆಗೆ ಅರ್ಪಿಸಿದ, ಅಮೃತ ಮಹಾಲ ಕವಲಿನಲ್ಲಿ ನಿಮ್ಮ ವರ್ಗದ ಜನರಿಗೆ ನೀಡಿದ ಭೂಮಿಯ ಬಗ್ಗೆ,

ಬ) ಅದೇ ಅವಧಿಯಲ್ಲಿ ಉಳಿದ ಸಂಸ್ಥೆಗಳಿಗೆ ಅಥವಾ ವ್ಯಕ್ತಿಗಳಿಗೆ ಕೊಟ್ಟ ಭೂಮಿಯ ಬಗ್ಗೆ ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಅ) ಕಳೆದ 5 ವರ್ಷಗಳಲ್ಲಿ ಕಂದಾಯ ಇಲಾಖೆಯ ಅಧೀನದಲ್ಲಿದ್ದ ಅಮೃತ ಮಹಲ ಕವಲಿನಿಂದ 1 ಸಾವಿರ 899 ಮತ್ತು 17 ಗುಂಟಾ ಜಮೀನನ್ನು ನಿಮ್ಮ ವರ್ಗದ ಜನರಿಗೆ ನೀಡಲಾಗಿದೆ.

ಬ) ಕಳೆದ 5 ವರ್ಷಗಳಲ್ಲಿ ಕಂದಾಯ ಇಲಾಖೆಗೆ ಒಪ್ಪಿಸಿದ ಅಮೃತ ಮಹಲ್ ಕವಲಿನ ಇನ್ನುಳಿದ 10,22 ಎಕರೆಗಳು ಮತ್ತು 22 ಗುಂಟಾಗಳ ಭೂಮಿಯನ್ನು ಇನ್ನುಳಿದ (ಇತರ) ಜನರಿಗೆ ನೀಡಲಾಗಿದೆ.

ಪ್ರಶ್ನೆ: ಎಚ್. ಕೆ. ಸಿದ್ಧಯ್ಯಾ :

ಹಾಸನದ ಹತ್ತಿರ ಸೀಗೆ ಗುಡ್ಡ ಕಾವಲಿನಲ್ಲಿ ಹರಿಜನರಿಗೆ ಜಮೀನು ಕೊಡುತ್ತೇವೆಂದು ಸರಕಾರದವರು ಭರವಸೆ ಕೊಟ್ಟು, ಇಪ್ಪತ್ತು ಜನ ಹರಿಜನರು ಅಲ್ಲಿ ಮನೆ ಕಟ್ಟಿಕೊಂಡು, ಹತ್ತು ವರ್ಷಗಳಿಂದಿದ್ದರೂ, ಅವರಿಗೆ ಏಕೆ ಜಮೀನು ಕೊಟ್ಟಿಲ್ಲ ?

ಉತ್ತರ: ಶ್ರೀ ಕಡಿದಾಳ ಮಂಜಪ್ಪ :

ನೋಟೀಸ್ ಕೊಡದೇ ವಿವರಗಳನ್ನು ಕೇಳಿದರೆ ಪ್ರತಿಯೊಂದು ಇಲ್ಲಿ ಸಿಗುವುದಿಲ್ಲ. ನನ್ನ ಗಮನಕ್ಕೆ ತಂದರೆ ಅದನ್ನು ಪರಿಶೀಲಿಸುತ್ತೇನೆ.

ಪ್ರಶ್ನೆ : ಎಚ್. ಕೆ. ಸಿದ್ಧಯ್ಯಾ

ಅಮೃತ ಮಹಲ ಕಾವಲಿನಲ್ಲಿ ಒಪ್ಪಿಸಲಾಗಿರುವ ಜಮೀನನ್ನು ಹರಿಜನರಿಗೂ ಇತರರಿಗೂ ಒದಗಿಸುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಸರ್ಕಾರದ ಉದ್ದೇಶವೇ ಅದು.

## 4: ಬೆಂಗಳೂರು ಜಿಲ್ಲೆಯಲ್ಲಿನ ಕೆರೆಗಳ ಕುರಿತು ಪ್ರಶ್ನೋತ್ತರ (14ನೇ ಜುಲೈ 1952)

ಪ್ರಶ್ನೆ : ಶ್ರೀ ಎ.ವಿ. ನರಸಿಂಹ ರೆಡ್ಡಿ (ಬೆಂಗಳೂರು ದಕ್ಷಿಣ) :

ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕುಗಳಲ್ಲಿ 14 ಕೆರೆಗಳು ಸರ್ವೆ ಆಗಿದೆ. ಎರಡು ಕೆರೆಗಳನ್ನು ರೆಸ್ಟೋರ್ ಮಾಡಿದೆ ಎಂದು ತಿಳಿಸಿದೆ. ಮಿಕ್ಕ ಕೆರೆಗಳು (ರೆಸ್ಟೋರ್) ಪೂರ್ವ ಸ್ಥಿತಿಗೆ ತರದೇ ಇರಲು ಕಾರಣವೇನು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಕೆಲವು ಕೆರೆಗಳ ಸರ್ವೇ ನಡೆಯುತ್ತಿದೆ.

ಪ್ರಶ್ನೆ: ಎ.ವಿ. ನರಸಿಂಹ ರೆಡ್ಡಿ :

ಸರ್ವೇ ಆಗಿದೆ ಎಂದು ಹೇಳಲಾಗಿದೆ. 14 ಕೆರೆಗಳನ್ನು ಸರ್ವೇ ಮಾಡಲಾಗಿದೆ ಎಂದು ಮತ್ತು 2 ಕೆರೆಗಳನ್ನು ಪೂರ್ವ ಸ್ಥಿತಿಗೆ ತರಲಾಗಿದೆ ಎಂದು ಹೇಳಲಾಗಿದೆ. ಎರಡು ಕೆರೆಗಳನ್ನು (ರೆಸ್ಟೋರ್) ಪೂರ್ವ ಸ್ಥಿತಿಗೆ ತಂದು, ಮಿಕ್ಕ 12 ಕೆರೆಗಳನ್ನು ಮಾಡದಿರಲು ಕಾರಣವೇನು ?

ಉತ್ತರ: ಶ್ರೀ ಕಡಿದಾಳ ಮಂಜಪ್ಪ :

ಪ್ರತಿಯೊಂದು ಕೆರೆಗೂ ವಿವರಗಳನ್ನು ಕೊಡವುದಕ್ಕೆ ಸಾಧ್ಯವಿಲ್ಲ. ಬೇರೆ ಬೇರೆ ಕಾರಣಗಳಿರಬಹುದು. ಕೆಲವು ಸಂದರ್ಭದಲ್ಲಿ ರೈತರು ಮುಚ್ಚಳಿಕೆ ಬರೆದು ಕೊಡಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ರೈತರು ಕಾಂಟ್ರಿಬ್ಯೂಶನ್ ಕೊಡಲು ಒಪ್ಪದಿರಬಹುದು. ಮತ್ತೆ ಕೆಲವು ಸಲ ಹಣ ವಿಲ್ಲದೆ ನಿಂತಿರಬಹುದು.

## 5: ಅರಣ್ಯ, ಅಮೃತ ಮಹಲ ಮತ್ತು ಡೇಟ್ ರಿಜರ್ವ್ ಪ್ರದೇಶಗಳಿಂದ ಸಾಗುವಳಿಗಾಗಿ ಭೂಮಿಯ ಬಿಡುಗಡೆ ಕುರಿತು ಪ್ರಶ್ನೋತ್ತರಗಳು. (14ನೇ ಜುಲೈ, 1952)

ಪ್ರಶ್ನೆ : ಜಿ.ಪುಟ್ಟಸ್ವಾಮಿ (ಚಿಕ್ಕಮಗಳೂರು-ಮುಡಿಗೆರೆ-ಪರಿಶಿಷ್ಟ ಜಾತಿಗಳು)

ಎ) ರಾಜ್ಯದಲ್ಲಿ ಅರಣ್ಯ, ಅಮೃತ್ ಮಹಲ ಕಾವಲ ಮತ್ತು ಡೇಟ್ ರಿಜರ್ವ್ ಪ್ರದೇಶಗಳಿಂದ ಸಾಗುವಳಿಗೆ ಬಿಡುಗಡೆ ಮಾಡಿದ ಭೂಮಿ ಎಷ್ಟು ಎಂಬುದನ್ನು ತಿಳಿಸುವಿರಾ? (ತಾಲೂಕುವಾರಿನ ಪೂರ್ಣ ಮಾಹಿತಿಯನ್ನು ಸಲ್ಲಿಸಬೇಕು).

ಬಿ) ಮೇಲಿನ ವಿಷಯಗಳಿಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಎ) ಅರಣ್ಯ : ರಾಜ್ಯದಲ್ಲಿ ಭೂಮಿಯನ್ನು ಕೆಳಮಟ್ಟದ ಪ್ರತಿಶತದ ಕಾರಣ, ಸರಕಾರವು ಭೂಮಿಯನ್ನು ಸಾಗುವಳಿ ಮಾಡಲು ಬಿಡಲು ಸಿದ್ಧವಿಲ್ಲ. ಆದರೆ ವೈಯಕ್ತಿಕ ಪ್ರಸಂಗಗಳನ್ನು ಅವುಗಳ ಅರ್ಹತೆಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.

ಅಮೃತ ಮಹಲ್ ಕಾವಲುಗಳಿಂದ : 37,699 ಎಕರೆ ಮತ್ತು 29 ಗುಂಟೆ ಭೂಮಿಯನ್ನು ಸಾಗುವಳಿಗೆ ಬಿಡಲು ಸೂಚಿಸಲಾಗಿದೆ.

ಬಿ) ಡೇಟ್ ರಿಜರ್ವಿನಿಂದ: ಯಾವುದೇ ಭೂಮಿಯನ್ನು ಬಿಡಲಾಗುವುದಿಲ್ಲ.

1950-51 ಮತ್ತು 1951-52ರಲ್ಲಿ ಅಮೃತ ಮಹಲ ಕವಲಿನಿಂದ 14, 582 ಎಕರೆ ಭೂಮಿಯನ್ನು ಕಂದಾಯ ವಿಭಾಗಕ್ಕೆ ವರ್ಗಾಯಿಸಲಾಗಿದೆ.

ಡೇಟ್ ರಿಸರ್ವ್ ಪ್ರದೇಶಗಳಿಂದ : ಒಟ್ಟು 37,271 ಎಕರೆ, ಮತ್ತು 15 ಗುಂಟೆ ಭೂಮಿಯನ್ನು ಬಿಡಲಾಗಿದೆ.

ಪ್ರಶ್ನೆ: ಪುಟ್ಟಸ್ವಾಮಿ :

ಆಯಾ ಸಂದರ್ಭದ ಸಾಧಕ-ಭಾಧಕಗಳನ್ನು ಗಮನಕ್ಕೆ ತೆಗೆದುಕೊಂಡು ಎಂದು ತೀಳಿಸೋಣವಾಗಿದೆ. ಅಂಥ ಸಂದರ್ಭಗಳು ಯಾವುದೆಂಬುದಕ್ಕೆ ಒಂದರೆಡು ನಿದರ್ಶನಗಳನ್ನು ಕೊಡಬಲ್ಲಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಎಲ್ಲೆಲ್ಲಿ ಹೆಚ್ಚು ಮರುಗಳಿಲ್ಲದೆ, ಬಯಲು ಹೆಚ್ಚಾಗಿದ್ದು, ಅಲ್ಲಿ ಜಂಗಲಿನ ಅಭಿವೃದ್ಧಿಗೆ ಅವಕಾಶವಿಲ್ಲವೆಂದು ಕಂಡು ಬರುತ್ತದೆಯೋ, ಅಂಥ ಸಂದರ್ಭಗಳಲ್ಲಿ ಅದನ್ನು ವ್ಯವಸಾಯಕ್ಕೆ ಬಿಟ್ಟು ಕೊಡಲಾಗುತ್ತದೆ.

ಪ್ರಶ್ನೆ : ಹೆಚ್. ಕೆ. ಸಿದ್ಧಯ್ಯಾ (ಬೇಲೂರು ಅನುಸೂಚಿತ ಜಾತಿ)

ಚೆನ್ನರಾಯ ಪಟ್ಟಣದ ತಾಲೂಕು ನುಗ್ಗೇಹಳ್ಳಿ ಬಳಿ ಅಂಥ ಬಯಲು ಪ್ರದೇಶವಿರುತ್ತದೆ. ಸುಮಾರು 40 ಎಕರೆಗಳಾಗಬಹುದು. ಅದನ್ನು ಅಲ್ಲಿನ ಹರಿಜನರಿಗೆ ವ್ಯವಸಾಯಕ್ಕೆ ಕೊಡುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹಾಗೆ ಮರಗಳಿಲ್ಲದಿದ್ದರೆ ನೋಡೋಣ.

ಪ್ರಶ್ನೆ: ಶ್ರೀ. ಬಿ. ದುಗ್ಗಪ್ಪ (ಕೊಳಲ ಕೆರೆ-ಅನುಸೂಚಿತ ಜಾತಿ) :

ಹೀಗೆ ಫಾರೆಸ್ಟಿನಲ್ಲಿ ಹರಿಜನರು ಜಮೀನುಗಳನ್ನು ವ್ಯವಸಾಯಕ್ಕೆ ಕೊಡಬೇಕೆಂದು ಅರ್ಜಿಗಳನ್ನು ಹಾಕಿದಾಗ, ಅವರಿಗೆ ಜಮೀನುಗಳನ್ನು ಕೊಡಲಾಗಿದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಅನೇಕ ಕಡೆ ಕೊಡಲಾಗಿದೆ.

ಪ್ರಶ್ನೆ: ಶ್ರೀ. ಬಿ.ದುಗ್ಗಪ್ಪ :

ಅವರಿಗೆ ಹಾಗೆ ಹಂಗಾಮಿ ,ಸಾಗುವಳಿಗೆ ಕೊಟ್ಟಿರುವಂಥ ಜಮೀನುಗಳನ್ನು ಪುನಃ ಸರಕಾರದವರು ವಾಪಸ್ಸು ಕಿತ್ತು ಕೊಂಡಿರತಕ್ಕ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಯಾರಾದರೂ ಆ ಷರತ್ತುಗಳ ಮತ್ತು ನಿರ್ಬಂಧಗಳ ಮೇಲೆ ನಡೆಯಲು ತಪ್ಪಿದಲ್ಲಿ ಅಂಥವರಿಂದ ವಾಪಸ್ಸು ತೆಗೆದುಕೊಂಡಿರಬಹುದು.

ಪ್ರಶ್ನೆ: ಶ್ರೀ ಬಿ. ರಾಚಯ್ಯ (ಯಳಂದೂರು-ಅನುಸೂಚಿತ ಜಾತಿ) :

ಜಿ.ಎಂ.ಎಫ್. ಯೋಜನೆಯ ಪ್ರಕಾರ, ಐದು ವರ್ಷ ಯಾರು ಜಮೀನುಗಳನ್ನು ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೋ, ಅಂಥವರಿಗೆ ಆ ಅವಧಿ ಪೂರೈಸಿದ ನಂತರ ಜಮೀನುಗಳನ್ನು ಕೊಡಬೇಕೆಂಬ ನಿಯಮ ವಿರಲಿಲ್ಲವೇ?

ಉತ್ತರ :ಶ್ರೀ ಕಡಿದಾಳ ಮಂಜಪ್ಪ :

ಈ ನಿಯಮದ ಜೊತೆಗೆ ಇನ್ನೂ ಎಷ್ಟೋ ನಿಯಮಗಳಿದ್ದವು.

ಪ್ರಶ್ನೆ: ಶ್ರೀ ಬಿ. ರಾಚಯ್ಯ :

ಹಾಗೆಯೇ ನಿಯಮಗಳಿದ್ದರೂ ಆ ಜಮೀನುಗಳನ್ನು ಕೆಲವು ಕಡೆ ಹಾಗೇ ಯಾರು ವ್ಯವಸಾಹ ಮಾಡುತ್ತಿದ್ದಾರೋ ಅಂಥವರಿಗೆ ಖಾಯಂ ಮಾಡದೇ ಬೇರೆಯವರಿಗೆ ಕೊಟ್ಟಿರತಕ್ಕ ನಿದರ್ಶಿನಗಳು. ತಮ್ಮ ಗಮನಕ್ಕೆ ತಂದಿಲ್ಲವೇ ?

ಉತ್ತರ: ಶ್ರೀ ಕಡಿದಾಳ ಮಂಜಪ್ಪ :

ಜಮೀನನ್ನು ಗ್ರ್ಯಾಂಟು ಮಾಡುವಾಗ ಏನೇನು ಷರತ್ತುಗಳನ್ನು ಹಾಕಲಾಗಿತ್ತೋ ಆ ಷರತ್ತುಗಳನ್ನು ಅನುಸರಿಸದೇ ಹೋಗಿದ್ದಲ್ಲಿ ಅಂಥವರಿಂದ ಜಮೀನುಗಳನ್ನು ವಾಪಸ್ಸು ಪಡೆದುಕೊಂಡಿರಬಹುದು.

ಪ್ರಶ್ನೆ: ಶ್ರೀ ಸಿದ್ದಯ್ಯ ಅಲಿಯಾಸ್ ಕನ್ನಯ್ಯನವರು (ಗುಂಜ್ಲುಪೇಟೆ)-ಹೆಗ್ಗಡ ದೇವನ ಕೋಟೆ ಅನುಸೂಚಿತ ಜಾತಿ:

ಹೆಗ್ಗಡ ದೇವನ ಕೋಟೆ ತಾಲೂಕಿಗೆ, ಮಾನ್ಯ ಕಂದಾಯ ಮಂತ್ರಿಗಳು ದಯಮಾಡಿಸಿದ್ದಾರೆ ಅಲ್ಲಿ ಕಾಡಿನಲ್ಲಿ ಮರಗಳಿಲ್ಲದೆ. ಬಯಲಾಗಿರತಕ್ಕಂಥ ಪ್ರದೇಶವನ್ನು ವ್ಯವಸಾಯಕ್ಕೆ ಬಿಡಿಸಿ ಕೊಡುತ್ತಿವೆಂದು ಅಪ್ಪಣೆ ಮಾಡಿದ್ದು ನಿಜವೇ?

ಉತ್ತರ: ಶ್ರೀ ಕಡಿದಾಳ ಮಂಜಪ್ಪ :

ಬಹುಶಃ ನಮ್ಮ ಕಾಲದಲ್ಲಿ ಹಾಗೆ ಆಗಿರಲಾರದು.

ಪ್ರಶ್ನೆ: ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ) :

ಸರ್ಕಾರದವರು ಈ ಈಚಲು ವನಗಳನ್ನು ವ್ಯವಸಾಯಕ್ಕೆ ಕೊಡುವಾಗ ಯಾವ ನೀತಿಯನ್ನು ಅನುಸರಿಸುತ್ತಾರೆ ?

ಉತ್ತರ :ಶ್ರೀ ಕಡಿದಾಳ ಮಂಜಪ್ಪ:

ಸರಕಾರದವರು ಈ ಬಗ್ಗೆ ಒಂದು ಸಮಿತಿ ನೇಮಕ ಮಾಡಿದ್ದಾರೆ . ಆ ಸಮತಿಯ ಶಿಫಾರಸ್ಸುಗಳ ಮೇರೆಗೆ, ಜಮೀನನ್ನು ವಿಲೇವಾರಿ ಮಾಡಲಾಗುತ್ತದೆ. ಹಾಗೆ ವಿಲೇವಾರಿಗಾಗಿ ಜಮೀನುಗಳನ್ನು , ರೆವೆನ್ಯೂ (ಕಂದಾಯ) ಇಲಾಖೆಗೆ ಬಿಟ್ಟುಕೊಡಲಾಗುತ್ತದೆ.

## 6: ಗೋರೂರಿನ ಹೇಮಾವತಿ ನದಿಯ ಬದಿಯಲ್ಲಿ ಡ್ಯಾಮಿನ ನಿರ್ಮಾಣ ಕುರಿತು ಪ್ರಶ್ನೋತ್ತರಗಳು.( ಜುಲೈ 15, 1952).

ಪ್ರಶ್ನೆ : ಶ್ರೀ ಎಂ. ಶಂಕರಲಿಂಗೇ ಗೌಡ (ನಾಗಮಂಗಲ)

ಆ) ಹೇಮಾವತಿ ಕಣಿವೆ (ವ್ಯಾಲೆ) ಯಿಂದ ಸಿಂಹ ಕಣಿವೆ (ವ್ಯಾಲೆ)ಗೆ ನೀರನ್ನು ಕೊಡುವ ದಿಸೆಯ

ಬಿ)ಗೋರೂರಿನ ಹೇಮಾವತಿ ಅಣೆಕಟ್ಟಿನ (ಡ್ಯಾಮ್‌ನ) ಅಂದಾಜು ತಯಾರಿಕೆ ಮತ್ತು

1)ಅನಟಿ ಟ್ಯಾಂಕ್ ಚೆನ್ನನಾರಾಯಣ ಪಟ್ಟಣ ತಾಲೂಕು, ನೊಣವಿನಾಯಕೆರೆ (ತಿಪಟೂರು ತಾಲ್ಲೂಕು) ತುರವೆಕೆರೆ, ಕಲ್ಲಣಕೆರೆಗಳು (ಕುಣಿಗಲ್ ತಾಲ್ಲೂಕು)

2) ಹೆರಗನಹಳ್ಳಿ ಮತ್ತು ದಸನಕೆರೆ (ನಾಗಮಂಗಲ ತಾಲ್ಲೂಕು) ಮತ್ತು ಮಾರ್ಕೋನಹಳ್ಳಿ ಜಲಾಶಯದ(ಕುಣಿಗಲ್ ತಾಲ್ಲೂಕು)ಗಳಲ್ಲಿ ನೀರಿನ ಸರಬರಾಜುವಿನ ಬಗ್ಗೆ ತಿಳಿಸುವಿರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಅ) 1933-35 ರಲ್ಲಿ ಪ್ರಾರಂಭಿಕ ಸರ್ವೇ ಮಾಡಲಾಯಿತು.

ಬ) ಗೋರೂರಿನ ಹೇಮಾವತಿ ನದಿಗೆ ಅಣೆಕಟ್ಟನ್ನು ಕಟ್ಟಲು ಮತ್ತು ನೀರಿನ ಅಭಿವೃದ್ಧಿಗೆ ಹಾಸನ ಜಿಲ್ಲೆಯಲ್ಲಿ 45,000 ಎಕರೆ ಭೂಮಿಯನ್ನು ಒಳಪಡಿಸಲಾಯಿತು.ಸಿಂಹ ಕಾಲುವೆಗೆ ಚಾನಲ್‌ಗಳನ್ನು ಕೈ ಕೊಳ್ಳಲು ಯಾವ ಯೋಜನೆಯು ಇರುವುದಿಲ್ಲ. ಏಕೆಂದರೆ 1 ಮತ್ತು 2 ರಲ್ಲಿ ಕೆರೆಗಳನ್ನು ಘೋಷಿಸಲು, ಸೇತುವೆಯನ್ನು ಬೇರ್ಪಡಿಸಲು ದೀರ್ಘ ಮತ್ತು ಭಾರಿ ಕೆತ್ತನೆಯನ್ನು ಮಾಡಬೇಕಾಗುತ್ತದೆ.

ಪ್ರಶ್ನೆ: ಎಂ. ಶಂಕರ ಲಿಂಗೇಗೌಡ :

ಮಾನ್ಯ ಮಂತ್ರಿಗಳು, ಹೇಮಾವತಿ ಅಣೆಕಟ್ಟಿನ ಬಗ್ಗೆ ಹೆಚ್ಚಿನ ಆಸಕ್ತಿ ಭರವಸೆ ನೀಡಿದ್ದರಿಂದ, ನಾನು ಹೆಚ್ಚಿನದಾಗಿ ಏನನ್ನು ಕೇಳಲು ಬಯಸುವುದಿಲ್ಲ.

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನಾನು ಯಾವುದರ ಬಗ್ಗೆ ಆಶ್ವಾಸನೆ ನೀಡಿರುವುದಿಲ್ಲ. ನಾನು ಪರಿಶೀಲಿಸುತ್ತೇನೆಂದು ಹೇಳಿರುವೆ.

ಪ್ರಶ್ನೆ : ಕೆ.ಕಲ್ಲಪ್ಪ (ಚೆನ್ನರಾಯ ಪಟ್ಟಣ)

ಈ ಒಂದು ಯೋಜನೆಯಲ್ಲದೆ ಬೇರೆ ಯಾವುದನ್ನಾದರೂ , ಕೈಕೊಳ್ಳಲು ಸರಕಾರದವರು, ತೀರ್ಮಾನ ಮಾಡಿದ್ದಾರೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಇನ್ನೂ ಮಾಡಿಲ್ಲ. ಈಗ ನಡೆಸಿರತಕ್ಕ ಯೋಜನೆಯ ಪ್ರಕಾರ, ಹಾಸನ ಜಿಲ್ಲೆಯಲ್ಲಿ ಸುಮಾರು, 45 ಸಾವಿರ ಎಕರೆ, ನೀರು ಸಾಗಿ ಬರಬಹುದೆಂದು ಮತ್ತು ಅದಕ್ಕಾಗಿ ಐದು ಕೋಟಿರೂಪಾಯಿಗಳು ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಸದ್ಯಕ್ಕೆ ಇದೇ ದೊಡ್ಡದು.

ಪ್ರಶ್ನೆ: ಜೆ. ಮಹ್ಮದ್ ಇಮಾಮ್ (ಜಗಳೂರು) :

ಈ ಯೋಜನೆ ಎಷ್ಟು ವರ್ಷಗಳಿಂದ ಸರಕಾರದವರ ಪರಿಶೀಲನೆಯಲ್ಲಿದೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಇದು ಸುಮಾರು ತಾವಿದ್ದ ಕಾಲದಿಂದಲೂ, ಅಂದರೆ 33-34ನೇ ಸಾಲಿನಿಂದಲೂ ಪರಿಶೀಲನೆ ಆಗುತ್ತಲೇ ಬಂದಿದೆ.

## 7: ಭೂ ಸುಧಾರಣಾ ಸಮಿತಿಯ ಶಿಫಾರಸ್ಸುಗಳ ಕುರಿತು ಪ್ರಶ್ನೋತ್ತರ (ಜುಲೈ 15, 1952)

ಪ್ರಶ್ನೆ : ಶ್ರೀ ಮುಲ್ಕ ಗೋವಿಂದ ರೆಡ್ಡಿ (ಚಿತಾಲಡ್ರುಗ್)

ಅ) ಭೂ ಸುಧಾರಣಾ ಸಮಿತಿಯ ಶಿಫಾರಸ್ಸುಗಳ ಬಗ್ಗೆ.

ಬ) ಯಾವುದಾದರೂ ಶಿಫಾರಸ್ಸು ಈಗಾಗಲೇ ಅನುಷ್ಠಾನಕ್ಕೆ ತರಲಾಗಿದೆಯೇ, ತಂದಿದ್ದರೆ. ಅವುಗಳು ಯಾವುವು?

ಕ) ಸಮಿತಿಯ, ಉಳಿದ ಶಿಫಾರಸ್ಸುಗಳನ್ನು, ಅನುಷ್ಠಾನದಲ್ಲಿ ತರುವ ಬಗ್ಗೆ ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಅ) ಸದನದಲ್ಲಿ ಮಂಡಿಸದ ಭೂ ಕಂದಾಯ (ಲ್ಯಾಂಡ್ ರೆವೆನ್ಯೂ) ಸುಧಾರಣೆಗಳ ಸಮಿತಿಯ ವರದಿಯ ಪುಟ 209 ರಿಂದ 215 ಭಾಗ 1 ಮತ್ತು ಪುಟಗಳು 59 ರಿಂದ 64ರ ಪ್ರಕಾರ.

ಬ) ಹೌದು, ಟೆನಾನ್ಸಿ ಕಾಯ್ದೆಯನ್ನು ಜಾರಿಯಲ್ಲಿ ತರಲಾಗಿದೆ.

ಕ) ಇನಾಮುಗಳನ್ನು ರದ್ದುಪಡಿಸಲು ಒಂದು ಮಸೂದೆಯನ್ನು ತಯಾರಿಸಲಾಗಿದೆ ಉಳಿದ ಶಿಫಾರಸ್ಸುಗಳು ಪರಿಶೀಲನೆಯ ಹಂತದಲ್ಲಿವೆ.

## 8: ಸಾಮುದಾಯಿಕ ಯೋಜನೆಗಳು ಕುರಿತು ಪ್ರಶ್ನೋತ್ತರ (ಜುಲೈ 15, 1952)

ಪ್ರಶ್ನೆ : ಶ್ರೀ ಡಿ. ಆರ್. ಕರೀಗೌಡ (ಹಾಸನ)

ಅ) ರಾಜ್ಯದಲ್ಲಿಯ ತಾಲ್ಲೂಕಿನಲ್ಲಿ ಸಾಮುದಾಯಿಕ ಯೋಜನೆಗಳು ಪ್ರಾರಂಭಿಸಿದ,

ಬ) ಈ ಯೋಜನೆಯ ಅಡಿಯಲ್ಲಿ ಬರುವ ಒಟ್ಟು ಗ್ರಾಮಗಳ ಸಂಖ್ಯೆ,

ಕ) ಇದಕ್ಕೆ ಖರ್ಚು ಮಾಡಲು ಇರುವ, ಒಟ್ಟು ಹಣ

ಡ) ಗ್ರಾಮಗಳಿಗೆ ಈ ಯೋಜನೆಗಳಿಂದ ಆಗುವ ಲಾಭಗಳ ಬಗ್ಗೆ ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಅ) ಸೊರಬ ಮತ್ತು ಶಿಕಾರಿಪುರ.

ಬ) ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳ ಸುಮಾರು 378 ಜನಸಂಖ್ಯೆಯ ಗ್ರಾಮಗಳು.

ಕ) ಸುಮಾರು 65 ಲಕ್ಷ ರೂಪಾಯಿಗಳು.

ಡ) ಕೃಷಿ , ಪಶುಸಂಗೋಪನಾ, ಶಿಕ್ಷಣ , ಸಾರ್ವಜನಿಕ ಆರೋಗ್ಯ ಸಣ್ಣ ಕೈಗಾರಿಕೆಗಳು, ಹೊಸ ರೇಷ್ಮೆ ಕೈಗಾರಿಕೆಗಳ ಮತ್ತು ಗ್ರಾಮಗಳ ಜನರಿಗೆ ಹೊಸ ಉದ್ಯೋಗಗಳನ್ನು ಕಲ್ಪಿಸುವ ಮತ್ತು ಇತರ ಆರ್ಥಿಕ ಕಾರ್ಯ ಚಟುವಟಿಕೆಗಳಲ್ಲಿ ಸಮಗ್ರ ಅಭಿವೃದ್ಧಿಯನ್ನು ಕೈಕೊಳ್ಳುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅಲ್ಲದೆ ಗ್ರಾಮೀಣ ಸಂಸ್ಥೆಗಳಲ್ಲಿ, ಮೇಲಟ್ಟದಲ್ಲಿ ಜೀವನವನ್ನು ನಡೆಸಲು ಯೋಚಿಸಲಾಗಿದೆ.

## 9: ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಮೈಸೂರು ಮತ್ತು ಮದ್ರಾಸು ಸರಕಾರಗಳ ಮಧ್ಯೆ ಒಪ್ಪಂದ ಕುರಿತು ಪ್ರಶ್ನೋತ್ತರ (ಜುಲೈ 15, 1952)

ಪ್ರಶ್ನೆ : ಶ್ರೀ ಮುಲ್ಕ ಗೋವಿಂದ ರೆಡ್ಡಿ(ಚಿತಾಲದ್ರುಗ)

ಅ) ಕಾವೇರಿ ನೀರಿನ ಬಳಕೆಯ ಬಗ್ಗೆ ಇದ್ದ, ಮದ್ರಾಸ ಸರಕಾರದ ಒಪ್ಪಂದದ ಕರಾರುಗಳ ಬಗ್ಗೆ.

ಬ) ಒಪ್ಪಂದ ಮಾಡಿಕೊಂಡದ್ದು ಯಾವಾಗ ಎಂಬುದರ ಬಗ್ಗೆ,

ಕ) ಒಪ್ಪಂದ ಕರಾರುಗಳನ್ನು ಪರಿಷ್ಕರಿಸಲು ಮೈಸೂರು ಸರಕಾರವು ಯಾವ ಕ್ರಮಗಳನ್ನು ತೆಗೆದುಕೊಂಡುದರ ಬಗ್ಗೆ,

ಡ) ಕ್ರಮಗಳನ್ನು ತೆಗೆದುಕೊಳ್ಳದಿದ್ದಲ್ಲಿ, ಒಪ್ಪಂದವನ್ನು ಪರಿಷ್ಕರಿಸಲು ಯಾವಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದೆಂಬುದರ ಬಗ್ಗೆ ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಅ)ಸದನದಲ್ಲಿ ಮಂಡಿಸಿದ್ದಂತೆ ಒಪ್ಪಂದದ ಒಂದು ಮುದ್ರಿತ ಕಾಪಿಯ ಪ್ರಕಾರ 1924ರಲ್ಲಿ ತಿಳಿಸಿದಂತೆ, ಮೈಸೂರು ಮತ್ತು ಮದ್ರಾಸ್ ಸರಕಾರಗಳ ಮಧ್ಯದ ಒಪ್ಪಂದದ ಕರಾರುಗಳನ್ನು ಉಲ್ಲೇಖಿಸಲಾಗಿದೆ.

ಬ) 1924ರ ಫೆಬ್ರುವರಿಯ ಕಾಲದಲ್ಲಿ,

ಕ) ಮತ್ತು ಡ)- ಈ ಪ್ರಶ್ನೆಯು ಸರಕಾರದ ಪರಿಶೀಲನೆಯಲ್ಲಿದೆ.

## 10: ರೈತರನ್ನು ಸಾಲದಿಂದ ವಿಮೋಚನೆ ಗೊಳಿಸಲು ಕ್ರಮಗಳು ಕುರಿತು ಪ್ರಶ್ನೋತ್ತರ( ಜುಲೈ 15, 1952)

ಪ್ರಶ್ನೆ : ಶ್ರೀಮತಿ ಬಿ. ಎಲ್. ಸುಬ್ಬಮ್ಮಾ (ಚಿಕ್ಕಮಗಳೂರು-ಮುಡಿಗೆರೆ)

ಅ) ರೈತರನ್ನು ಸಾಲದಿಂದ ವಿಮೋಚನೆಗೊಳಿಸಲು ಕೈಗೊಂಡ ಕ್ರಮಗಳ ಬಗ್ಗೆ,

ಬ) ಆ ಕ್ರಮಗಳು ಯಾವುದೆಂಬುದರ ಬಗ್ಗೆ,

ಕ) ಸಾಲದ ಸಮೀಕ್ಷೆ ನಡೆಸಿರುವ ಬಗ್ಗೆ,

ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಅ)ಮತ್ತು ಬ) 1, ಹೆಚ್ಚುತ್ತಿರುವ ಸಾಲದ ಹೊರೆಯನ್ನು ಪ್ರತಿಬಂಧಿಸಲು ರೈತರ ಶೋಷಣೆಯನ್ನು ಪ್ರತಿಬಂಧಿಸಲು, ಮೇಲಿಂದ ಮೇಲೆ ಕೆಳಗಿನ ಕಾಯ್ದೆಗಳನ್ನು ಅಂಗೀಕರಿಸಲಾಯಿತು.

1, 1939ರ ಮನಿ ಲೆಂಡರ್ ಕಾಯ್ದೆ,

2, 1928 ರೈತರ ಪರಿಹಾರ ಕಾಯ್ದೆ,

3, 1937ರ ಸಾಲ ಕನ್ಸಿಲಿಯೇಶನ್ ಬೋರ್ಡ್ ಕಾಯ್ದೆ, ರೈತರು ಈ ಬೋರ್ಡುಗಳಿಂದ ಯಾವುದೇ ಲಾಭವನ್ನು ಪಡೆಯಲಾಗಲಿಲ್ಲ. ಕಾರಣ ಅವುಗಳನ್ನು ರದ್ದುಗೊಳಿಸಲಾಯಿತು.

2. ಕಡಿಮೆ ಬಡ್ಡಿ ದರದಲ್ಲಿ ರೈತರಿಗೆ ಈ ಸಾಲ ನೀಡಲು ಲ್ಯಾಂಡ ಮಾರ್ಟಗೇಜ್ ಬ್ಯಾಂಕ್ ಮತ್ತು ಸಹಕಾರಿ ಸಂಸ್ಥೆಗಳನ್ನು ರಾಜ್ಯದಲ್ಲಿ ಸ್ಥಾಪಿಸಲಾಗಿದೆ.

3. ಅದು ಅಲ್ಲದೇ ರೈತರಿಗೆ, ನೀರಾವರಿಯ ಬಾವಿಗಳನ್ನು ತೋಡಲು ತಕಾವಿ ಸಾಲ ಮತ್ತು ಭೂ ಸುಧಾರಣಾ ಸಾಲಗಳನ್ನು ಕಂದಾಯ ವಿಭಾಗದಿಂದ ನೀಡಲಾಗುತ್ತಿದೆ.

4. ಕೃಷಿ ಸರಕುಗಳ ಬೆಲೆಗಳು ಕಳೆದ 5 ಅಥವಾ 6 ವರ್ಷಗಳಿಂದ ಏರುತ್ತಿರುವ ಸಮಯದಲ್ಲಿಯೂ, ರೈತರು ತಮ್ಮ ಕೃಷಿ ಉತ್ಪನ್ನದಿಂದ ತಮ್ಮ ಸಾಲವನ್ನು ಮುಟ್ಟಿಸಲು ಆರ್ಥಿಕವಾಗಿ ಒಳ್ಳೆಯ ಸ್ಥಿತಿಯಲ್ಲಿದ್ದಾರೆ.

ಕ) ಹೌದು, 1941 ಮತ್ತು 1945ರಲ್ಲಿ.

11: ಶ್ರೀ ಭೀಮಪ್ಪ ನಾಯಕರು ಕ್ಷಾಮ ಪರಿಸ್ಥಿತಿಯ ಬಗ್ಗೆ ಸರಕಾರ ಕೂಡಲೇ ಕ್ರಮ ಕೈಕೊಂಡು ಆ ಕಷ್ಟವನ್ನು ನಿವಾರಣೆ ಮಾಡಲು, ನಿಪುಣರ ಸಮಿತಿಯೊಂದನ್ನು ಏರ್ಪಡಿಸಬೇಕೆಂದು ಕೇಳಿದಾಗ ಆ ನಿರ್ಣಯ ಬಗ್ಗೆ ಶ್ರೀ ಕಡಿದಾಳ ಮಂಜಪ್ಪನವರು ಈ ಕೆಳಗಿನ ಹೇಳಿಕೆಯನ್ನು ನೀಡಿದರು. ( 25ನೇ ಅಕ್ಟೋಬರ್,1952)

ಶ್ರೀ ಕಡಿದಾಳ ಮಂಜಪ್ಪ:

ಸ್ವಾಮಿ, ನಾನು ಹೆಚ್ಚು ವಾಗ್ವಾದ ಮಾಡುವ ಸಂದರ್ಭವಿಲ್ಲ. 'ಡಿಸ್ಟ್ರೇಸ್' ಎಂಬ ಪದಕ್ಕೂ 'ಫ್ಯಾಮಿನ್' ಎಂಬ ಪದಕ್ಕೂ ಹೆಚ್ಚು ವ್ಯತ್ಯಾಸವಿಲ್ಲವೆಂಬುದನ್ನು ತಿಳುವಳಿಕೆಯುಳ್ಳ ಮಾನ್ಯ ಸದಸ್ಯರಿಗೆ, ನಾನೇನು ಹೇಳಬೇಕಾಗಿಲ್ಲ. ಫ್ಯಾಮಿನ್ ಕೋಡದಲ್ಲಿಯೂ ಕೂಡ 'ಡಿಸ್ಟ್ರೇಸ್', ಎಂಬ ಪದದ ಪ್ರಯೋಗ ಅನೇಕ ಕಡೆ ಬಂದಿದೆ. ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಚ್ಛಿಸುತ್ತೇನೆ. ಅಂಥ ಪ್ರದೇಶವನ್ನು ಕ್ಷಾಮ ಪೀಡಿತ ಪ್ರದೇಶವೆಂದು ಕರೆಯಲಿ ಎಂದು ಈ ನಿರ್ಣಯದಲ್ಲಿ ಹೇಳಿದ್ದಾರೆ. 'ಡಿಸ್ಟ್ರೇಸ್ ಎಂದರೆ ಕ್ಷಾಮ. ಈ ಎರಡೂ ಪದಗಳ ಮಧ್ಯೆ ಸ್ವಲ್ಪ ವ್ಯತ್ಯಾಸವಿದೆ. ನಮ್ಮ ಸಂಸ್ಥಾನದಲ್ಲಿ ಮೊದಲು ಈ ಕ್ಷಾಮದ ಪರಿಸ್ಥಿತಿ ಉದ್ಭವಿಸಿದುದು ಕೋಲಾರ ಜಿಲ್ಲೆಯಲ್ಲಿ, ಏಪ್ರಿಲ್ ತಿಂಗಳ ಎರಡನೇ ವಾರದಲ್ಲಿ, ಈ ಪರಿಸ್ಥಿತಿಯ ವಿಚಾರ ಸರಕಾರದ ಗಮನಕ್ಕೆ ಬಂದ ಕೂಡಲೇ ಸ್ವಲ್ಪವೂ ಕೂಡ ತಡ ಮಾಡದೇ ಅಲ್ಲಿಗೆ ಆಹಾರ ಧವಸವನ್ನು ಒದಗಿಸಿದ್ದು, ಅಲ್ಲದೆ ಅಲ್ಲಿ ಪರಿಹಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೇವೆ. ಏಪ್ರೀಲ್ ತಿಂಗಳಿಂದ ಮೇ ಅಖೈರ ವರೆಗೆ ಅಥವಾ ಜೂನ್ ಮಧ್ಯ ಭಾಗದವರೆಗೆ ಮೈಸೂರು ಸಂಸ್ಥಾನದ ಬಾಕಿ ಪ್ರದೇಶದಲ್ಲಿ ಕ್ಷಾಮದ ಪರಿಸ್ಥಿತಿ ಉದ್ಭವಿಸುತ್ತದೆಂದು ಕನಸಿನಲ್ಲಿಯೂ ಸರಕಾರ ಕಂಡಿರಲಿಲ್ಲ. ಹಾಗೆ ನೀರಿಕ್ಷಿಸಲು ಕಾರಣಗಳು ಇರಲಿಲ್ಲ. ಈ ವರ್ಷದ ಪರಿಸ್ಥಿತಿ. ಅಸಾಧಾರಣ ಪರಿಸ್ಥಿತಿ. ಮಳೆ ಈ ವರ್ಷ ಹೋದಷ್ಟು ಬಹುಶಃ ಮೈಸೂರು ದೇಶದ ಇತಿಹಾರದಲ್ಲಿ ಕಳೆದ 50 ವರ್ಷಗಳಿಂದೀಚೆಗೆ ಯಾವಾಗಲೂ ಹೋಗಿರಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅನಿರೀಕ್ಷಿತವಾಗಿ ಮುಂಗಾರು ಮಳೆ ಮೈಸೂರು ದೇಶದ ಅನೇಕ ಭಾಗಗಳಲ್ಲಿ ಬಾರದೇ ಇದ್ದುದರಿಂದ ಏಕಾಏಕಿ ಕ್ಷಾಮದ ಚಿಹ್ನೆ ಎಲ್ಲಾ ಕಡೆಯೂ ತೋರಿ, ಅನೇಕ ಕಡೆ ಜನರು ಬಹಳ ಕಷ್ಟಕ್ಕೀಡಾದರು. ಫ್ಯಾಮಿನ್ ಕೋಡನ್ನು ಉಪಯೋಗಿಸಿಕೊಂಡು, ಏಕೆ ಇದನ್ನು ಕ್ಷಾಮದ ಪ್ರದೇಶವೆಂದು ಸಾರಲಿಲ್ಲವೆಂದು ಕೇಳುತ್ತಾರೆ. ನನಗೆ ಇದರಲ್ಲಿ ವ್ಯತ್ಯಾಸವೇನೂ ತೋರಲಿಲ್ಲ. ಹಾಗೆ ಸಾರಿದ್ದರಿಂದ ಬರುವ ಸುಖವೇನೆಂಬುದು, ಗೊತ್ತಾಗಲಿಲ್ಲ. ಸಾರದಿರಲು ಕಾರಣವೇನೆಂದು ಅನೇಕ ಬಾರಿ ತಿಳಿಸಿದ್ದೇವೆ. ಈ ಫ್ಯಾಮಿನ್ ಕೋಡ್ ಎಂಬುದು ಓಬಿರಾಯನ ಕಾಲದ ಕಾನೂನು. ಅದು ಈಗಿನ ಪರಿಸ್ಥಿತಿಗೆ ಅನುಗುಣವಾಗಿಲ್ಲವೆಂದು ಹೇಳಿದರೆ, ತಾವು ಯಾರೂ ಆಕ್ಷೇಪಿಸಬಾರದೆಂದು ಮನವಿ ಮಾಡಿಕೊಳ್ಳುತ್ತೇವೆ.

ಪ್ರಶ್ನೆ : ಶ್ರೀ ಎ. ಭೀಮಪ್ಪ ನಾಯಕ :

ಸರಕಾರವು ತಿದ್ದುಪಡಿಗಳನ್ನು ಏಕೆ ತರುವುದಿಲ್ಲ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಕ್ಷಾಮವು ನಮ್ಮ ಶಾಸನೀಯ ತಿದ್ದುಪಡಿಗಳು ಮತ್ತು ಕ್ರಮಗಳಿಗಾಗಿ(ಕಾಯುವುದಿಲ್ಲ) ಕಾಯಬೇಕಾದುದಿಲ್ಲ.

ಸ್ವಾಮಿ, ಈ ಫ್ಯಾಮಿನ್ (ಕ್ಷಾಮ) ಕೋಡಿನ ಅಧ್ಯಾಯಗಳ ಮುಖ್ಯಾಂಶಗಳನ್ನು ಮಾತ್ರ ಓದುತ್ತೇನೆ. ಬಹಳ ಕಾಲ ತೆಗೆದುಕೊಳ್ಳುವುದಿಲ್ಲ. ಈ ಕಾನೂನಿನಲ್ಲಿ ಬಹಳ ಭಾಗಗಳಿವೆ, ಮೊದಲನೆಯದಾಗಿ, ಕೆಲವು ವರದಿಗಳು ಬಂದ ಮೇಲೆ ಕ್ಷಾಮ ವಿದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡಬೇಕು.

## ಅಧ್ಯಾಯ-2

## ಪ್ರಾರಂಭಿಕ ವಿಚಾರಣೆಯ ಕ್ರಮಗಳು, ಮತ್ತು ಮಳೆ ಬಾರದಿದ್ದಾಗ ಪೂರ್ವ ಸಿದ್ಧತೆ :

ಗಂಡಾಂತರದ ಚಿಹ್ನೆಗಳು ಗಂಡಾಂತರವನ್ನು ಎದುರಿಸಲು ಕ್ರಮಗಳು

ರೆವಿನ್ಯೂ ಕಮೀಷನರಿಗೆ ಪ್ರಾರಂಭಿಕ ವರದಿ.

ಸರಕಾರಕ್ಕೆ ವರದಿ.

ಹಣಕಾಸಿನ ಸ್ಥಿತಿಯನ್ನು ಸರಕಾರದಿಂದ ಪರಿಶೀಲನೆ.

## ಅಧ್ಯಾಯ-3

## ಅವಲೋಕನದ ಮತ್ತು ಪರೀಕ್ಷೆಯ ಕಾಲಾವಧಿ

ಅಭಾವ ಅಥವಾ ಬರಗಾಲವನ್ನು ನಿರ್ಧರಿಸಲು, ಡೆಪ್ಯೂಟಿ ಕಮೀಷನರ್‌ರಿಂದ ಪರೀಕ್ಷೆಕಾರ್ಯಗಳ ಬಹಿರಂಗ ಪಡಿಸುವಿಕೆ.

ಪರೀಕ್ಷೆ ಕಾರ್ಯಗಳ ನಿರ್ವಹಣೆ,

ಡೆಪ್ಯುಟಿ ಕಮೀಷನರ ಬಡವರ ವಸತಿಗಳ ಸ್ಥಾಪಿಸುವಿಕೆ.

ರೆವಿನ್ಯೂ (ಕಂದಾಯ) ಕಮೀಷನರ್‌ರಿಂದ, ಡೆಪ್ಯೂಟಿ ಕಮೀಷನರರು ಮಾಡಿದ ವಿಶೇಷ ವರದಿಯನ್ನು ಸರಕಾರಕ್ಕೆ ವರ್ಗಾಯಿಸುವುದು.

ಡೆಪ್ಯುಟಿ ಕಮೀಷನರರು, ಉಪಧಾನದ ಪರಿಹಾರ ಸಂಘಟಿಸುವುದು.

ಬರಗಾಲವು ಗಂಭೀರದಲ್ಲಿದ್ದಾಗ, ಐ.ಜಿ.ಪಿ.ಯ ಕಾರ್ಯಗಳು.

ಸ್ಯಾನಿಟರಿ ಕಮೀಷನರರ ಕಾರ್ಯಗಳು.

ಆಹಾರ ಧಾನ್ಯಗಳನ್ನು ಮತ್ತು ಮೇವಿನ ರೈಲ್ವೇಯ ಸಾರಿಗೆಗಾಗಿ ವ್ಯವಸ್ಥೆಗಳು.

ರೈಲ್ವೇ ಆಡಳಿತದೊಡನೆ ಸಹಕಾರ.

ಪ್ರಯೋಗ ಕಾರ್ಯಗಳು, ಹೆಚ್ಚು ಜನರನ್ನು ಆಕರ್ಷಿಸಿದಾಗ, ಅವುಗಳನ್ನು , ರೆವೆನ್ಯೂ (ಕಂದಾಯ) ಕಮೀಷನರ್‌ರಿಗೆ, ಡೆಪ್ಯುಟಿ ಕಮೀಷನರರು ವರದಿ ಮಾಡುವುದು.

## ಬರಗಾಲದಲ್ಲಿ

ಬರಗಾಲ ಘೋಷಿಸಿದ ನಂತರ:-

ಪರಿಹಾರ ಕಾರ್ಯಗಳನ್ನು, ಪ್ರಯೋಗ ಕಾರ್ಯಗಳ ಪರಿವರ್ತಿಸುವಿಕೆ. ಅವಶ್ಯಬಿದ್ದಾಗ, ಹೊಸ ಪರಿಹಾರ ಕಾರ್ಯಗಳನ್ನು ಪ್ರಾರಂಭಿಸುವಿಕೆ.

ಗ್ರಾಮೀಣ ಉಪದಾನದ ಪರಿಹಾರದ ಪ್ರಾರಂಭ ಮಾಡುವುದು.

ಹೀಗೆ ಪೂರ್ವಭಾವಿಯಾಗಿ ಆಗಬೇಕಾದ, ಕಾಲ ವಿಳಂಬದ ಕಾರ್ಯಕ್ರಮಗಳಾದ ನಂತರ ಕ್ಷಾಮ ಪರಿಹಾರ ಕೆಲಸಗಳು ಪ್ರಾರಂಭವಾಗುತ್ತವೆ. ಹೀಗೆ ನಾವು ಮಾಡಿದರೆ, ಅನೇಕರು ಸಂಸ್ಥಾನದಲ್ಲಿ ಕ್ಷಾಮಕ್ಕೆ ತುತ್ತಾಗುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಆಮೇಲೆ ಕ್ಷಾಮ ಎಂದು ಘೋಷಿಸಿದ ನಂತರ ಏನು ಮಾಡುವುದೆಂದರೆ.

ಪರಿಹಾರದ ಕಾರ್ಯಗಳಲ್ಲಿ ಪರೀಕ್ಷೆಯ ಕಾರ್ಯಗಳನ್ನು ಪರಿವರ್ತಿಸಲು, ಅವಶ್ಯವಾದಲ್ಲಿ ಹೊಸ ಪರಿಹಾರ ಕಾರ್ಯಗಳನ್ನು ತೆರೆಯುವುದು, ಗ್ರಾಮ ಉಪದಾನದ ಪರಿಹಾರದ ಹಂಚುವಿಕೆಯನ್ನು ಪ್ರಾರಂಭಿಸುವುದು ಇತ್ಯಾದಿ.

ಎಂದರೆ, ನಾವು ಏಪ್ರಿಲ್ ತಿಂಗಳಲ್ಲಿ ಮಾಡಿರುವುದನ್ನು ಈಗ ಮಾಡಬೇಕೆಂದು, ಹೇಳಿದಂತಾಯಿತು. ಒಟ್ಟಿನಲ್ಲಿ ಇದರ ಪ್ರಕಾರ ಕ್ಷಾಮ ವೆಂದು ಸಾರಿದ ಮೇಲೆ, ಏನೇನು ಮಾಡಬೇಕೋ ಅದನ್ನೆಲ್ಲಾ ನಾವು ಏಪ್ರಿಲ್ ತಿಂಗಳಿನಿಂದಲೇ ಮಾಡುತ್ತಿದ್ದೇವೆ. ಶ್ರೀ ಭೀಮಪ್ಪಾ ನಾಯಕರ ಈ ನಿರ್ಣಯವನ್ನು ನೋಡಿದರೆ, ಸಂಸ್ಥಾನದಲ್ಲಿ ಕ್ಷಾಮ ಪರಿಹಾರ ಕಾರ್ಯಕ್ರಮವನ್ನು ಕೈ ಕೊಳ್ಳಲಿಲ್ಲವೋ ಏನೋ ಎನ್ನುವ ಹಾಗೆ ಕಾಣುತ್ತಿದೆ.

ಪ್ರಶ್ನೆ ಶ್ರೀ ಭೀಮಪ್ಪ ನಾಯಕ :

ತಮ್ಮನ್ನು ಧನ್ಯವಾದಗಳೊಂದಿಗೆ, ನಾನು ನನ್ನ ಭಾಷಣವನ್ನು ಮುಮ್ಮಾತ್ರನ್ನು ಮುಗಿಸುತ್ತೇನೆ. ನನ್ನನ್ನು ತಪ್ಪು ದಾರಿಗೆ ಎಳೆಯಬೇಡಿ.

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಸದನಕ್ಕೆ ಗೊತ್ತಿರುವ ಹಾಗೆ, ತಾವು ಎಷ್ಟು ದೊಡ್ಡ ವ್ಯಕ್ತಿಗಳೆಂದರೆ, ತಮ್ಮನ್ನು ತಪ್ಪು ದಾರಿಗೆ ಎಳೆಯಲು ಸಾಧ್ಯವಿಲ್ಲ. ಮತ್ತು ನಾನು ಬಹಳ ಕಿರಿಯವನು (ನಗೆ). ಆದುದರಿಂದ, ಫ್ಯಾಮಿನ್ ಕೋಡಿನ ಪ್ರಕಾರ ಏನೇನು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿತ್ತೋ ಅವುಗಳನ್ನೆಲ್ಲಾ ಬಹಳ ಜಾಗ್ರತೆಯಿಂದ ಕೈ ಕೊಂಡು ಅಲ್ಲಿ ಹೇಳಿರುವುದಕ್ಕಿಂತ ಹೆಚ್ಚಿನ ಪರಿಹಾರವನ್ನು ಕಲ್ಪಿಸಿಕೊಟ್ಟಿದ್ದೇವೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಮನವಿ ಮಾಡಿಕೊಳ್ಳುತ್ತೇನೆ.

ಸರ್ಕಾರದವರು ಈ ಕ್ಷಾಮ ಪ್ರದೇಶಗಳಲ್ಲಿ ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆಂಬುದನ್ನು ಸೂಕ್ಷ್ಮವಾಗಿ ಮಾನ್ಯ ಸಭೆಯ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಸಂಸ್ಥಾನದ ಬೇರೆ ಬೇರೆ ಜಿಲ್ಲೆಗಳಿಗೆ ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಒದಗಿಸಿರುವ ಹಣ ಈ ರೀತಿ ಇದೆ.

| | ಬರಗಾಲ ನಿಧಿ | ಹೆಚ್ಚಿನ ಆಹಾರ ಬೆಳೆಗಳ ಅನುದಾನ |
|---|---|---|
| ಬೆಂಗಳೂರು ಜಿಲ್ಲೆ | 85,000 | 2,25,000 |
| ಕೋಲಾರ ಜಿಲ್ಲೆ | 23,93,500 | 6,72,000 |
| ಅಪೂರ್ಣ ಕಾರ್ಯಗಳನ್ನು ಪೂರ್ಣಗೊಳಿಸಲು | 5ಲಕ್ಷ ರೂ. ನೀಡಬೇಕಾದುದು | |
| ತುಮಕೂರು ಜಿಲ್ಲೆ | 4.,11,000 | 3,25,000 |
| ಅಪೂರ್ಣ ಕಾರ್ಯಗಳನ್ನು ಪೂರ್ಣಗೊಳಿಸುವುದಕ್ಕಾಗಿ | -4ಲಕ್ಷ ರೂ. ನೀಡಬೇಕಾದುದು | |
| ಮೈಸೂರ ಜಿಲ್ಲೆ | 79,000 | 1,25,000 |
| ಮಂಡ್ಯ ಜಿಲ್ಲೆ | 1,17,000 | 3,68,000 |
| ಹಾಸನ ಜಿಲ್ಲೆ | 80,000 | 1,56,000 |
| ಶಿವಮೊಗ್ಗ ಜಿಲ್ಲೆ | 75,000 | 1,75,000 |
| ಚಿಕ್ಕಮಗಳೂರು ಜಿಲ್ಲೆ | 37,000 | 1,00,000 |
| ಚಿತ್ರದುರ್ಗ ಜಿಲ್ಲೆ | 3,24,500 | 2,20,000 |

ಶ್ರೀ ಕಡಿದಾಳ ಮಂಜಪ್ಪ

ಇಷ್ಟನ್ನು ಕೊಡಲಾಗಿದೆ. ಇದೇ ಅಲ್ಲದೇ ಮೊನ್ನೆ ತಾನೇ ಸೆಂಟ್ರಲ್ ಡಿಸ್ಟ್ರೆಸ್ ರಿಲೀಫ್ ಕಮೀಟಿ ಯಲ್ಲಿ ತೀರ್ಮಾನ ವಾದ ಮೇಲೆ ಕೋಲಾರಕ್ಕೆ 2,10,000, ತುಮಕೂರಿಗೆ 2,10,000, ಚಿತ್ರದುರ್ಗಕ್ಕೆ 2,10,000, ಶಿವಮೊಗ್ಗಕ್ಕೆ 1,45,000, ಹಾಸನಕ್ಕೆ 45,000, ಮಂಡ್ಯಕ್ಕೆ 45,000 ಮೈಸೂರಿಗೆ 75,000, ಬೆಂಗಳೂರಿಗೆ 20,000, ಚಿಕ್ಕಮಗಳೂರಿಗೆ 45,000 ರೂಪಾಯಿಗಳನ್ನು ಹಂಚಲಾಗಿದೆ.

ಮೊನ್ನೆ ತಾನೇ ಸೆಂಟ್ರಲ್ ಫ್ಯಾಮಿನ ರಿಲೀಫ್ ಕಮೀಟಿ ಯವರಿಂದ ಬಂದ ಸಹಾಯ ನಿಧಿಯನ್ನು ಈ ರೀತಿಯಾಗಿ ಹಂಚಲಾಗಿದೆ. ಕೋಲಾರ ಜಿಲ್ಲೆಗೆ 2 ಲಕ್ಷ 10 ಸಾವಿರ, ತುಮಕೂರು ಜಿಲ್ಲೆಗೆ 2,10,000, ಚಿತ್ರದುರ್ಗಕ್ಕೆ 2 ಲಕ್ಷ 10 ಸಾವಿರ, ಶಿವಮೊಗ್ಗ ಜಿಲ್ಲೆಗೆ 1 ಲಕ್ಷ, ಹಾಸನ ಜಿಲ್ಲೆಗೆ 45 ಸಾವಿರ, ಮಂಡ್ಯ ಜಿಲ್ಲೆಗೆ 45 ಸಾವಿರ, ಮೈಸೂರು ಜಿಲ್ಲೆಗೆ 75 ಸಾವಿರ, ಬೆಂಗಳೂರು ಜಿಲ್ಲೆಗೆ 25 ಸಾವಿರ ಮತ್ತು ಚಿಕ್ಕಮಗಳೂರು ಜಿಲ್ಲೆಗೆ 45 ಸಾವಿರ, ಈ ರೀತಿಯಾಗಿ ಹಂಚಲಾಗಿದೆ. ಇದೂ ಅಲ್ಲದೆ, ರಷ್ಯಾ ಮತ್ತು ಚೈನಾಗಳಿಂದ ಬಂದ ಧಾನ್ಯವನ್ನು ಎಲ್ಲಾ ಜಿಲ್ಲೆಗಳಿಗೂ ಹಂಚಲಾಗಿದೆ. ಇದರ ಜೊತೆಗೆ ರೆಡ್ ಕ್ರಾಸ್ ಸೊಸೈಟಿಯವರ ಸಲಹೆ ಮೇರೆಗೆ ಪರಿಹಾರವನ್ನು ಒದಗಿಸಲು ಕಾರ್ಯಕ್ರಮ ಕೈಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ.

ಪ್ರಶ್ನೆ: ಶ್ರೀ ಬಿ.ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡ)

ಉಚಿತ ಕೊಡುಗೆಯನ್ನು....ದಲ್ಲಿ ಬದಲಾಯಿಸಲಾಯಿತು.............

ಉತ್ತರ: ಶ್ರೀ ಕಡಿದಾಳ ಮಂಜಪ್ಪ

ಅದರಿಂದ ಸರಕಾರಕ್ಕೆ ಯಾವ ಲಾಭವೂ ಇಲ್ಲ. ಅದರಿಂದ ದೇಶಕ್ಕೆ ಲಾಭವಾಗಬಹುದು.

ಪ್ರಶ್ನೆ: ಶ್ರೀ ಬಿ.ವಿ. ನಾರಾಯಣರೆಡ್ಡಿ

ಇದ್ದು ಹಾಗೆ ಕೊಟ್ಟಿರೋ.........

ಉತ್ತರ: ಶ್ರೀ ಕಡಿದಾಳ ಮಂಜಪ್ಪ

ಬೇಡಿಕೊಳ್ಳುವುದು, ಕೈಗಡದಿಂದ, ಕಳ್ಳತನದಿಂದ ನಾನು ಮುಖ್ಯ ಮಂತ್ರಿಯವರ ನಿಧಿಯಿಂದ ಬೇಡಿಕೊಳ್ಳಬಹುದು. ನಾನು ನನಗೆ ಸಾಲ ನೀಡುವವರಿಂದ ಕೈಗಡ ತೆಗೆದುಕೊಳ್ಳಬಹುದು. ಆದರೆ, ಕಳ್ಳತನ ಮಾಡುವ ಕಲೆಯ ಬಗ್ಗೆ ನಾನು ಕಲಿತಿರುವುದಿಲ್ಲ.

ಪ್ರಶ್ನೆ :ಶ್ರೀ ಶ್ರೀನಿವಾಸ ಐಯ್ಯಂಗಾರ ಎಸ್

ನೀವು ಕಳ್ಳತನ ಮಾಡುವ ಕಲೆಯ ಬಗ್ಗೆ ಕಲಿಯಬೇಕು (ನಗು).

ಶ್ರೀ ಮಹ್ಮದ್ ಇಮಾಮ್

ದರೋಡೆಯು ಹೆಚ್ಚಾಗಿ ಸಮರ್ಥಿಸಬಹುದು.

ಉತ್ತರ :ಶ್ರೀ ಕಡಿದಾಳ ಮಂಜಪ್ಪ

ಸರಕಾರಕ್ಕೆ ಅದರಿಂದ ಲಾಭವೇನು ಬರಬೇಕಾಗಿಲ್ಲ.ಒಟ್ಟಿನಲ್ಲಿ ದೇಶಕ್ಕೆ ಸಹಾಯವಾಗಬೇಕು. ಜನರಿಗೊಂದು ಅನುಕೂಲವಾಗಬೇಕು, ಆ ರೀತಿ ಕೆಲಸ ಕಾರ್ಯಗಳನ್ನು ನಡೆಸಲಾಗಿದೆ. ಹಾಗಿದ್ದರೂ ಕೆಲವರು ಭಾಷಣ ಮಾಡಿರುವುದನ್ನು ನೋಡಿದರೆ, ಸರಕಾರದವರು ಯಾವ ಕೆಲಸವನ್ನು ಮಾಡಲು ಸಿದ್ಧವಾಗಿಲ್ಲ, ಅವರಿಗೆ ಕಷ್ಟ ಪರಿಹಾರ ಮಾಡಲು ಮನಸ್ಸಿನಲ್ಲಿ ಅನ್ನುವ ಹಾಗೆ ಮಾತ ನಾಡಿದ್ದಾರೆ. ಆದರೆ ಸರಕಾರದ ಹಣಕಾಸಿನ ಸ್ಥಿತಿ ಏನಾಗಿದೆ ಎಂಬುದ ಮಾನ್ಯ ಸದಸ್ಯರುಗಳಿಗೆಲ್ಲಾ ಗೊತ್ತೇ ಇದೆ. ಇಷ್ಟೇಲ್ಲಾ ಕಷ್ಟಗಳಿದ್ದರೂ ಸರಕಾರದವರು ಅದೇಷ್ಟೋ ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಈ ವರ್ಷದ ಪರಿಸ್ಥಿತಿ ಏನಾಗಿದೆ ಎಂಬುದು ಈಗಾಗಲೇ ಸರ್ವರಿಗೂ ಮನದಟ್ಟವಾಗಿದೆ.ಇಂಥ ಕಷ್ಟ ಪರಿಸ್ಥಿತಿ ಇದ್ದಾಗ್ಯೂ ಬಹಳ ಕಷ್ಟ ಪಟ್ಟು ಸುಮಾರು ಎಪ್ಪತ್ತೊಂದು ಲಕ್ಷ ಅರವತ್ತ ಮೂರು ಸಾವಿರ ರೂಪಾಯಿಗಳನ್ನು ಕ್ಷಾಮ ನಿವಾರಣೆಯ ಬಗ್ಗೆ ಒದಗಿಸಿದ್ದೇವೆ. ಈ ಕ್ಷಾಮ ನಿವಾರಣೆಯ ಬಗ್ಗೆ ಕೆಲಸ ಕಾರ್ಯಗಳನ್ನು ನಡೆಸತಕ್ಕವರಿಗೆ ಕೊಡತಕ್ಕ ಸಂಬಳ ಇದರಲ್ಲಿ ಸೇರಿಲ್ಲ. ಪಿ.ಡಬ್ಲ್ಯೂ.ಡಿ ಅಧಿಕಾರಿಗಳ ಮತ್ತು ರೆವೆನ್ಯೂ ಅಧಿಕಾರಿಗಳ ಸಂಬಳ ಇದರಲ್ಲಿ ಸೇರಿಲ್ಲ. ಜಿಲ್ಲಾ ಬೋರ್ಡುಗಳಿಗೆ ಮತ್ತು ಗ್ರಾಮ ಪಂಚಾಯತಗಳಿಗೆ ಖರ್ಚು ಮಾಡಿರುವ ಹಣ ಇದರಲ್ಲಿ ಸೇರಿರುವುದಿಲ್ಲ. ಕೇವಲ ಆ ಒಂದೇ ಒಂದು ಕ್ಷಾಮದ ಐಟಂಗಾಗಿ ಸರ್ಕಾರದಿಂದ 71 ಲಕ್ಷ 6 ಸಾವಿರ ರೂಪಾಯಿಗಳನ್ನು ಒದಗಿಸಿದ್ದೇವೆ. ಸರ್ಕಾರದವರ ಕೈಯಲ್ಲಿ ಮಾಡತಕ್ಕದ್ದೇನೇನು

ಸಾಧ್ಯವಿತ್ತೋ ಅದೆಲ್ಲವನ್ನೂ ಮಾಡಲಾಗಿದೆ. ಆಮೇಲೆ ನಾವು ಯಾವ ರೀತಿಯಲ್ಲಿ ಪರಿಹಾರ ಕೊಟ್ಟಿದ್ದೇವೆ ಎಂಬ ಬಗ್ಗೆ ಒಂದೆರೆಡು ಮಾತುಗಳನ್ನು ಹೇಳತಕ್ಕದ್ದು ಸೂಕ್ತವಾಗಿದೆ. ಕೇವಲ ನಿರ್ಗತಿಕರಾಗಿರತಕ್ಕವರಿಗೆ, ಉಚಿತವಾಗಿ ಆರಕ್ಕೆ ಮೂರರಂತೆ ದವಸವನ್ನು ಹಂಚಿಸಿದ್ದೇವೆ. ಆಮೇಲೆ ಕೆಲ ಕೆಲವು ಕಡೆಗಳಲ್ಲಿ ಹಾಲಿನ ಕೇಂದ್ರಗಳನ್ನು, ರೆಡ್ ಕ್ರಾಸ್ ಸಂಸ್ಥೆಯವರ ಮೂಲಕ ಸ್ಥಾಪಿಸಲಾಗಿದೆ. ಕೋಲಾರ ಜಿಲ್ಲಾ ಸರಹದ್ದಿನಲ್ಲಿ ಬ್ರೆಡ್ಡುಗಳನ್ನು ಹಂಚಲಾಯಿತು. ಪೊಟ್ಯಾಟೋ ಆಹಾರವನ್ನು ಸಹ ಹಂಚಲಾಯಿತು. Multi Vitamin Tablets have been supplied at subsidised rates. ಜಾನುವಾರುಗಳಿಗೆ ಹುಲ್ಲನ್ನು ಸಬ್ಸಿಡೈಸ್ಡ್ ರೇಟಿನಲ್ಲಿ ಅಂದರೆ 125 ರಂತೆ ಕೊಂಡಿದ್ದನ್ನು ಟನ್ ಒಂದಕ್ಕೆ 60 ರೂಪಾಯಿಗಳಂತೆ ಮಾರಾಟ ಮಾಡಿಸಲಾಯಿತು. ಇಷ್ಟೆಲ್ಲಾ ಮಾಡಿರುವಾಗ ದೇಶದಲ್ಲಿ ಕ್ಷಾಮವೇ ಇಲ್ಲವೆಂದು ಯಾರೂ ಹೇಳುವುದಿಲ್ಲ .ನಾವು ಮಾಡಿದ ಕೇಲಸವೆಲ್ಲಾ ಪರಿಪೂರ್ಣವಾಗಿ ಎಲ್ಲರಿಗೂ ಪರಿಹಾರ ದೊರೆತಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಮ್ಮ ಅಧಿಕಾರಿಗಳು ಹಗಲೂ ಇರಳೂ ದುಡಿದಿದ್ದಾರೆ ಸ್ವಲ್ಪವೂ ನಿರ್ಲಕ್ಷ ಮಾಡದೆ ಅವರೆಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಿದ್ದಾರೆಂದು ನಾನು ಸ್ಪಷ್ಟವಾಗಿ ತಿಳಿಸಲಿಚ್ಚಿಸುತ್ತೇನೆ.

ಇನ್ನೊಂದು ಅಂಶವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾಗಿದೆ. ಇದು ಪ್ರಕೃತಿ ನಿರ್ಮಿತವಾದ ಸಮಸ್ಯೆ, ಮಾನವ ನಿರ್ಮಿತವಾದದ್ದಲ್ಲ. ಮಾನವ ನಿರ್ಮಿತ ವಾದುದಾಗಿದ್ದರೆ ಅದನ್ನು ಪರಿಹಾರ ಮಾಡಲು ಸಾಧ್ಯವಿತ್ತು. ಆದರೆ ಇದು ಪ್ರಕೃತಿ ನಿರ್ಮಿತ ಸಮಸ್ಯೆ. ಸರ್ಕಾರ ಪರಿಹಾರ ಮಾಡಲು ಸಾಧ್ಯವಿಲ್ಲ ಇದಕ್ಕೆ ನಾನಾ ಮುಖವಾಗಿ, ನಾನ ಜನರಿಂದ ನಾನಾ ಸಹಾಯಗಳು ಆಗಬೇಕಾಗಿರುತ್ತದೆ. ಕೇವಲ ಸರ್ಕಾರ ಒಂದರಿಂದಲೇ ಸಾಧ್ಯವಾಗಲಾರದು. ಮದ್ರಾಸಿನವರು ಅವರ ಕೈ ಶಕ್ತಿಮೀರಿ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ಆ ಮದ್ರಸಿನಲ್ಲಿ 6 ತಿಂಗಳಿಂದಿತ್ತೀಚಿಗೆ ಸುಮಾರು 2 1/2 ಲಕ್ಷ ಜನರನ್ನು ಉದ್ಯೋಗವಿಲ್ಲದೆ ಅಲೆದಾಡತಕ್ಕ ಪರಿಸ್ಥಿತಿ ಬಂದಿತು. ನಾವು ಅದನ್ನು ಕಣ್ಣಾರೆ ನೋಡಿದ್ದೇವೆ. ಅವರು ಈ ದೇಶಕ್ಕೆ ಬಂದು ಪ್ರತಿಯೊಂದು ಜಿಲ್ಲೆಯಲ್ಲೂ ಬಿಕ್ಷಾಟನೆ ಮಾಡುತ್ತಿದ್ದಾರೆ. ತಾವುಗಳೆಲ್ಲರೂ ಇದನ್ನು ನೋಡಿದ್ದೀರಿ ಯಾವ ಸರ್ಕಾರಕ್ಕೆ ತಾನೆ ಎಷ್ಟು ಮಾಡಲು ಸಾಧ್ಯ ? ಸಾರ್ವಜನಿಕರ ಸಹಾಯ, ನೆರವು ಇಲ್ಲದೆ ಇದನ್ನು ಪರಿಹಾರ ಮಾಡುವುದಕ್ಕೆ ಖಂಡಿತ ಆಗುವುದಿಲ್ಲ ಎಂಬ ಅಂಶವನ್ನು ನಾನು ತಮ್ಮೆಲ್ಲರಲ್ಲೂ ಮನವಿಮಾಡಿಕೊಳ್ಳಬೇಕಾಗಿದೆ.

ಪ್ರಶ್ನೆ ಶ್ರೀ ಎಂ. ಪಲಾನಿಯಪ್ಪನ್

The Chief Minister of Madras has stated people come to Madras province, from the State. Which is correct Sir ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ - ಆ ರೀತಿಯಾಗಿ ಅವರು ಹೇಳಲಿಲ್ಲ. ಆ ಅರ್ಥ ಬರುವ ಹಾಗೆ ಹೇಳಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರಕ್ಕೂ ಮತ್ತು ಕ್ಷಾಮಪೀಡಿತ ಪ್ರದೇಶಗಳ ಜನರ ನೆರವಿಗಾಗಿ ಬಂದ ಎಲ್ಲ ಧನ ಧಾನ್ಯಗಳ ಸಹಾಯ ನೀಡಿದವರನ್ನು ವಂದಿಸಬೇಕಾದ್ದು ನನ್ನ ಕರ್ತವ್ಯ. ಈಗಾಗಲೇ ಚೀಫ್ ಮಿನಿಸ್ಟರ್‌ರವರ ಕ್ಷಾಮ ಪರಿಹಾರ

ನಿಧಿಗೆ ಸಾರ್ವಜನಿಕರು ಸುಮಾರು 2 1/2 ಲಕ್ಷದಷ್ಟು ಧನ ಸಹಾಯ ನೀಡಿದ್ದಾರೆ. ಮಂಡ್ಯ ಜಿಲ್ಲೆಯವರು ದವಸ ಮತ್ತು ಹುಲ್ಲನ್ನು ಸಹಾಯಾರ್ಥವಾಗಿ ಕೊಟ್ಟಿದ್ದಾರೆ. ಶ್ರೀ ಮಾನ್ ಮಹಾರಾಜರವರು ಉದಾರವಾಗಿ ತಮ್ಮ ಸ್ವಂತ ಫಂಡಿನಿಂದ ಅಧಿಕ ಸಹಾಯ ನೀಡಿದ್ದಾರೆ. ಪ್ರೈಂಮಿನಿಸ್ಟರವರೂ ಕೂಡ ಅವರ ಸ್ವಂತ ಫಂಡಿನಿಂದ ಧನ ಸಹಾಯ ಮಾಡಿದ್ದಾರೆ. ಇದೇ ರೀತಿಯಾಗಿ ಚೈನ, ರಷ್ಯಾ ಮತ್ತು ರೆಡ್‌ಕ್ರಾಸ್ ಸೊಸೈಟಿಯವರೂ ಸಹ ಸಹಾಯ ನೀಡಿದ್ದಾರೆ. ಹೀಗೆ ನಾನಾ ರೀತಿಯಲ್ಲಿ ಉಪಕಾರ ನೀಡಿರತಕ್ಕ ಈ ಎಲ್ಲ ದೇಶಗಳವರಿಗೂ ಸಂಸ್ಥೆಗಳವರಿಗೂ, ಮತ್ತು ದಾನನೀಡಿರತಕ್ಕ ಎಲ್ಲ ಮಹನೀಯರುಗಳಿಗೂ ಸರ್ಕಾರದ ಪರವಾಗಿ ನನ್ನ ಹೃತ್ಪೂರ್ವಕ ವಂದನೆಗಳು. ಈ ಕ್ಷಾಮದ ಸಮಸ್ಯೆ ಇಂದಿಗೇ ಮುಗಿಯಿತೆಂದು ಯಾರು ಭಾವಿಸಿರಲಾರರು. ಇನ್ನೂ ಮೂರು ತಿಂಗಳ ಕಾಲ ಇದನ್ನು ಮುಂದುವರಿಸಿ ಕೆಲಸ ನಡೆಸಬೇಕಾಗಿರುತ್ತದೆ. ಅನೇಕರಿಗೆ ಉದ್ಯೋಗಗಳನ್ನೂ ಒದಗಿಸಬೇಕಾಗಿದೆ. ಈ ಬಗ್ಗೆ ಈಗಾಗಲೇ ನಮ್ಮ ಕೈಲಾದಮಟ್ಟಿಗೂ ಹಣವನ್ನು ಒದಗಿಸಿದ್ದೇವೆ. ಆದರೂ ಇನ್ನೂ ಹೆಚ್ಚಿಗೆ ಹಣ ಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದ ಸಹಾಯಪಡೆಯಲು ಎಲ್ಲಾ ಪ್ರಯತ್ನಗಳನ್ನೂ ನಾವು ಮಾಡುತ್ತಲೇ ಇದ್ದೇವೆ. ಆದರೂ ಕೇಂದ್ರ ಸರ್ಕಾರದ ಸಹಾಯ ಪಡೆಯಲು ಸರ್ಕಾರ ಏನೂ ಪ್ರಯತ್ನ ಮಾಡಲಿಲ್ಲವೆಂದು ಕೆಲವರು ಆರೋಪಣೆ ಮಾಡಿದರು. ಆದರೆ ಅದು ಸರಿಯಾದುದಲ್ಲ. ನಮ್ಮ ಕೈಲಾದ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇವೆ. ಸದ್ಯದಲ್ಲೇ ಕೇಂದ್ರದವರೂ ಕೂಡ ನಮಗೆ ಸಹಾಯ ನೀಡಬಹುದೆಂಬ ಬಗ್ಗೆ ನಾನು ಇನ್ನೂ ಆಸೆಯನ್ನಿಟ್ಟು ಕೊಂಡಿದ್ದೇನೆ. ಸರ್ಕಾರದವರು ನಿರೀಕ್ಷಿಸಿದ್ದ ಮಟ್ಟದಲ್ಲಿ ಸಹಾಯ ಮಾಡದೆ ನಿರ್ಲಕ್ಷ್ಯ ಮಾಡಿದ್ದಾರೆಂದೂ, ಆದ್ದರಿಂದ ಜನರು ಗಡ್ಡೆ ಗೆಣಸು ಸೊಪ್ಪುಸದೆಗಳನ್ನು ತಿಂದ ಅಜೀರ್ಣ, ಆಮಶಂಕೆಯಿಂದ ಅನೇಕರು ಸತ್ತು ಹೋದರೆಂದೂ, ಅಷ್ಟಾದರೂ ಸರ್ಕಾರದವರು ಏನೂ ಮಾಡಲಿಲ್ಲವೆಂದೂ ಶ್ರೀಮಾನ್ ಎಚ್. ಸಿ. ಲಿಂಗಾರೆಡ್ಡಿಯವರು ಹೇಳಿದರು. ಆದರೆ ಈ ಸಂಬಂಧವಾಗಿ ನನ್ನ ಗಮನಕ್ಕೆ ಎರಡು ನಿದರ್ಶನಗಳು ಮಾತ್ರ ಬಂದಿರುತ್ತವೆ. ಮದ್ರಾಸಿನ ಕಡೆಯಿಂದ ಯಾರೋ ಒಬ್ಬ ಬಿಕ್ಷಾಟನೆಗಾಗಿ ಕೋಲಾರಜಿಲ್ಲೆಗೆ ಬಂದಿದ್ದವನು ಬಂದು ದೇವಸ್ಥಾನದಲ್ಲಿ ಮಲಗಿದ್ದು ಅಲ್ಲಿ ಕೆಲವು ದಿನಗಳ ಹಿಂದೆ ಸತ್ತು ಹೊದನೆಂಬುದಾಗಿ ಕೇಳಿದ್ದೆನು. ಈ ಸಂಬಂಧವಾಗಿ ವಿಶ್ವಕರ್ನಾಟಕ ದಿನ ಪತ್ರಿಕೆಯಲ್ಲೂ ಸಹ ಒಬ್ಬ ಕೈ ಕಾಲು ದಪ್ಪವಾಗಿ ಊದಿಕೊಂಡಿದ್ದು ಸತ್ತುಹೋಗಿದ್ದವನ ಫೋಟೋ ಸಹ ಬಂದಿತ್ತು. ನಾವು ನಿರ್ಲಕ್ಷ್ಯವಾಗಿ ವರ್ತಿಸಿದ್ದೇವೆಂದು ತಾವು ನಮ್ಮ ಮೇಲೆ ಬಹಳ ಸುಲಭವಾಗಿ ಟೀಕೆ ಮಾಡಬಹುದು. ಆದರೆ ಹಾಗೆ ನಾವು ಯಾವ ರೀತಿಯಲ್ಲೂ ನಿರ್ಲಕ್ಷ್ಯ ಮಾಡದೇ ಏನೇ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕಾಗಿತ್ತೋ ಅವುಗಳನ್ನೆಲ್ಲಾ ಕೈಕೊಂಡಿದ್ದಾಗ್ಯೂ ಕೆಲವು ಸದಸ್ಯರು ಹೀಗೆ ಟೀಕೆ ಮಾಡಿರುವುದರ ಅರ್ಥ ನನಗೆ ಆಗುತ್ತಿಲ್ಲ. ಕೆಲವು ದಿನಗಳ ಹಿಂದೆ ಆದಾದ ಮೇಲೆ ಯಾರೋ ಒಬ್ಬ ಮದನಪಲ್ಲಿ ಕಡೆಯಿಂದ ಬಂದಿದ್ದವನು ತನ್ನ ಮಗುವನ್ನು ಮಾರಾಟಮಾಡಿದನೆಂದು ಒಂದು ವರದಿ ಬಂದಿತ್ತು. ಪೇಪರುಗಳಲ್ಲಿ ಹೊಟ್ಟೆಗಿಲ್ಲದೆ ಮಗುವನ್ನು ಮಾರಟ ಮಾಡಿದನೆಂದು ಒಂದು ವರದಿಬಂದಿತ್ತು. ನಾವಂತೂ ಒಂದು ನೀತಿಯ ಮೇಲೆ ಒಂದು ನಿಯತ್ತಿನಿಂದ ಕೆಲಸಮಾಡಿದ್ದೇವೆ. ಇಂಥ ಘೋರ ಪರಿಸ್ಥಿತಿ ಬರಿ ಕೋಲಾರ ಜಿಲ್ಲೆಯೊಂದರಲ್ಲೇ ಅಲ್ಲದೆ ಚಿತ್ರದುರ್ಗ, ತುಮಕೂರು ಮತ್ತು ಬೇರೆ ಜಿಲ್ಲೆಗಳ ಕೆಲ ಕೆಲವು ಭಾಗದಲ್ಲೂ ಇತ್ತು. ಶ್ರೀಮತಿ ಸುಬ್ಬಮ್ಮನವರೂ ಕೂಡ ಮಲೆನಾಡಿನಲ್ಲೂ ಅನೇಕರು ಹೊಟ್ಟೆಗಿಲ್ಲದೆ ಹಲಸು, ಇತ್ಯಾದಿ ಹಣ್ಣುಗಳನ್ನು

ತಿನ್ನುತ್ತಿದ್ದರೆಂದು ತಿಳಿಸಿದರು. ಹಾಗೆ ಜನರಿಗೆ ಹೊಟ್ಟೆಗೆ ಆಹಾರ ಯಾವಾಗ ಸಿಕ್ಕುವುದಿಲ್ಲವೋ ಆಗ ಅಲ್ಲಿ ಗೆಡ್ಡೆಗೆಣಸುಗಳನ್ನು ಮತ್ತು ಹಣ್ಣು ಹಂಪಲುಗಳನ್ನು ತಿನತಕ್ಕದ್ದು ಸ್ವಾಭಾವಿಕವಾಗಿಯೇ ಇದೆ. ಆ ಮಲೆನಾಡಿನ ಜನರು ಗೆಡ್ಡೆಗೆಣಸುಗಳನ್ನು ತಿಂದು ತಿಂದು ಅವರಿಗೆ ಗಟ್ಟಿಯಾಗಿ ಕೂಗಿಕೊಳ್ಳುವ ಶಕ್ತಿ ಸಹ ಇಲ್ಲದಂತಾಗಿದೆಯೆಂದು ತಿಳಿಸಿದ್ದಾರೆ. ಏನೇ ಆಗಲಿ, ಇನ್ನೂ ನಮ್ಮ ದೇಶದ ಜನರ ಜೀವನವೇ ಉತ್ತಮ ಸ್ಥಿತಿಯಲ್ಲಿದೆಯೆಂದು ಹೇಳಬೇಕಾಗಿದೆ. ಮದ್ರಾಸ್ ಪ್ರಾಂತ್ಯದಲ್ಲಿ ಜನರಿಗೆ ಹೊಟ್ಟೆಗಿಲ್ಲದ್ದು ಹೋಗಲಿ ಕೂಲಿ ಮಾಡಿಲಕ್ಕೂ ಸಹ ಅವಕಾಶವಿಲ್ಲದೆ ದೇಶಾಟನೆ ಹೊರಡಲು ಅವಕಾಶವಾಗಿದೆ. ಆದರೆ ನಮ್ಮ ಜನರಿಗೆ ಹಾಗೆ ದೇಶ ಬಿಟ್ಟು ದೇಶಕ್ಕೆ ಹೋಗಲು ಇಷ್ಟವಿಲ್ಲ. ಎಲ್ಲ ಅನುಕೂಲಗಳೂ ಇವರಿಗೆ ಅವರು ಕುಳಿತಿದ್ದ ಸ್ಥಳಕ್ಕೇ ಅವರವರ ಮನೆಯ ಬಾಗಿಲಿಗೇ ಬಂದು ಸಿಕ್ಕಬೇಕಾಗಿದೆ. ಜನರು ಒಂದು ಕಡೆ ಅನಾನುಕೂಲವಿದೆಯೆಂದು ಕಂಡಾಗ ಮತ್ತೊಂದು ಅನುಕೂಲವಿರತಕ್ಕ ಜಾಗಕ್ಕೆ ಹೊರಡಲು ಸಿದ್ದವಾಗಿರಬೇಕು. ಕಷ್ಟಪರಿಸ್ಥಿತಿಯಲ್ಲಿ ಎಲ್ಲಕ್ಕೂ ಧೈರ್ಯದಿಂದ ಸಿದ್ಧವಾಗಿರಬೇಕು ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಿದರೆ ಅದು ತಪ್ಪಾಗಲಾರದು.

ಇನ್ನು ಆಹಾರ ಧಾನ್ಯಗಳ ಸಾಗಾಣಿಕೆಯ ಬಗ್ಗೆ ಮತ್ತು ಆಹಾರಧಾನ್ಯಗಳನ್ನು ಸಾಕಷ್ಟು ಒದಗಿಸಲಿಲ್ಲವೆಂಬ ಬಗ್ಗೆ ಕೆಲವು ಆಕ್ಷೇಪಣೆಗಳು ಬಂದಿವೆ. ಈ ಆಹಾರ ಧಾನ್ಯಗಳನ್ನು ಒದಗಿಸತಕ್ಕ ಬಗ್ಗೆ ಸರ್ಕಾರದವರು ತಮ್ಮ ಕೈಲಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ಈ ಬಗ್ಗೆ ಕೆಲವು ಕಡೆಗಳಲ್ಲಿ ಕೆಲವು ತೊಂದರೆಗಳು ಆಗಿರಬಹುದು. ಈ ಹಿಂದೆ ಕೆಲವು ದಿನಗಳವರೆಗೆ ನಮ್ಮ ಡಿಪೋಗಳಲ್ಲಿ ಜನರು ಆಹಾರ ಸಾಮಗ್ರಿಗಳನ್ನು ಕೊಳ್ಳಲು ಬರುತ್ತಿರಲಿಲ್ಲ. ಏಕದಂ ಯಾವಾಗ ಜುಲೈ ಆಗಸ್ಟ್ ತಿಂಗಳುಗಳಿಂದ ಮಳೆ ಬಾರದೆ ಹೋಯಿತೋ ಆಗ ಗಾಬರಿಯಾಗಿ ಹೆಚ್ಚು ಹೆಚ್ಚು ಜನರು ಆಹಾರ ದಿನಸಿಗಾಗಿ ಡಿಪೋಗಳಲ್ಲಿ ಬರುವುದು ಹೆಚ್ಚಾಯಿತು. ಆಗ ಅನೇಕ ಕಡೆಗಳಲ್ಲಿ ತೊಂದರೆ ಉದ್ಭವಿಸಿತೆಂಬುದು ನಿಜ. ಈಗಲೂ ಕೆಲವು ಕಡೆಗಳಲ್ಲಿ ತೊಂದರೆ ಇದೆ ಸರ್ಕಾರದವರು ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟು ಮಟ್ಟಿಗೆ ಕ್ಷಾಮಪೀಡಿತ ಪ್ರದೇಶಗಳಿಗೆ ಆಹಾರವನ್ನೊದಗಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆಂದು ಮನವಿ ಮಾಡಿಕೊಳ್ಳುತ್ತೇನೆ.

ಹಾಗೆಯೇ ನೀರಾವರಿ ಕಾಮಗಾರಿಗಳ ಸಂಬಂಧದಲ್ಲೂ ನಮ್ಮ ಕೈಲಾದ ಮಟ್ಟಿಗೂ ಕೂಡ ಈ ವರ್ಷ ಕ್ಷಾಮ ಪೀಡಿತ ಪ್ರದೇಶಗಳಲ್ಲೇ ಹೆಚ್ಚಿಗೆ ಕೆಲಸ ನಡೆಸುವುದಕ್ಕೆ ಏರ್ಪಾಡು ಮಾಡುತ್ತಿದೆ.

ಪ್ರಶ್ನೆ ಶ್ರೀ ಎಂ. ಶಂಕರ ಲಿಂಗೇಗೌಡ

ನಾಗಮಂಗಲ ತಾಲ್ಲೂಕಿನಲ್ಲಿ ಏನೇನೂ ಮಾಡಲಿಲ್ಲವಲ್ಲಾ ?

ಉತ್ತರ ಶ್ರೀ ಕಡಿದಾಳ ಮಂಜಪ್ಪ

ನಾಗಮಂಗಲ ತಾಲ್ಲೂಕಿನಲ್ಲೂ ಕೂಡ ಕೆಲಸ ನಡೆಸುವುದಕ್ಕೆ ಹಣವನ್ನೊದಗಿಸಲು ಪ್ರಯತ್ನ ಮಾಡಿದ್ದೇವೆ. ಇನ್ನೊಂದು ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಏನೆಂದರೆ ಗ್ರೋ ಮೋರ್ ಫುಡ್ ಯೋಜನೆಗಳಿಗಾಗಿ ಮೀಸಲಾಗಿದ್ದ ಹಣದಲ್ಲಿ ಹೆಚ್ಚು ಭಾಗವನ್ನು

ಈ ವರ್ಷ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಖರ್ಚು ಮಾಡಬೇಕಾಗಿಬಂದಿದ್ದರಿಂದ ಬಾಕಿ ಪ್ರದೇಶಗಳಿಗೆ ಸ್ವಲ್ಪ ತೊಂದರೆಯಾಗಿದೆಯೆಂದು ಗೊತ್ತು ದೇಶದ ಹಿತದೃಷ್ಟಿಯಿಂದ ಇದನ್ನು ಬಾಕಿ ಪ್ರದೇಶದ ಜನರು ವಹಿಸಿಕೊಳ್ಳುತ್ತಾರೆಂದು ನಂಬಿದ್ದೇನೆ.

ಕೇಂದ್ರ ಸರ್ಕಾರದವರು ಶ್ರೀಮಾನ್ ರಾಜಗೋಪಾಲಾಚಾರಿಯವರು ಹೇಳಿದ ಹಾಗೆ, ಇಂಥ ಕ್ಷಾಮಗಳನ್ನು ತಡೆಗಟ್ಟುವ ಸಲುವಾಗಿ ಒಂದು ಪ್ರತ್ಯೇಕ ನಿಧಿಯನ್ನು ಏರ್ಪಡಿಸಿ ಅದರ ಮುಖೇನ ಕ್ಷಾಮಪೀಡಿತ ಪ್ರದೇಶಗಳಿಗೆ ಸಹಾಯ ನೀಡುವುದು ಅತ್ಯಗತ್ಯ .ಆ ರೀತಿ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇಷ್ಟು ವಿವರಗಳನ್ನು ಕೊಟ್ಟನಂತರ ನನ್ನ ಮಿತ್ರರಾದ ಶ್ರೀ ಭೀಮಪ್ಪ ನಾಯಕರು ಅವರ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

## 12: ಮಾರಾಟಕರದ ಮೇಲಿನ ಸಮಿತಿಯು ಶಿಫಾರಸ್ಸುಗಳು (ಮಾರ್ಚ್10 1953)

ಪ್ರಶ್ನೆ : ಶ್ರೀ ವೀರಪ್ಪಾ (ಪದವೀಧರ ಕ್ಷೇತ್ರ)

ಅ)ಸರಕಾರದಿಂದ ನೇಮಿಸಲ್ಪಟ್ಟು ಸಮಿತಿಯು ಮಾರಾಟ ಕರ ವಿಧಿಸಲು ಸರಕಾರಕ್ಕೆ ವರದಿ ಸಲ್ಲಿಸಿದೆಯೇ ಸಲ್ಲಿಸಿದ್ದರೆ, ಅದನ್ನು ಸದನದಲ್ಲಿ ಯಾವಾಗ ಮಂಡಿಸಲಾಗುವುದು?

ಬ)ಆ ವರದಿಯ ಮೇಲೆ ಸರಕಾರ ತೆಗೆದು ಕೊಂಡು ಕ್ರಮವೇನು?

ಸಿ) ಒಂದೇ ಅಂಶದ ಮೇಲೆ, ಸಮಿತಿಯು ಮಾರಾಟಕರ ವಿಧಿಸಲು ಶಿಫಾರಸ್ಸು ಮಾಡಿರುವುದೇ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ (ಕಂದಾಯ ಮತ್ತು ಲೋಕೋಪಯೋಗಿ ಮಂತ್ರಿ)

ಅ) ಹೌದು ಅದನ್ನು ಅಂತಿಮವಾಗಿ ಸರಕಾರದ ಆಜ್ಞೆಗಳನ್ನು ಅಂಗೀಕರಿಸಿದ ನಂತರ ಸದಸನದಲ್ಲಿ ಪ್ರಸ್ತಾಪಿಸಲಾಗುವುದು.

ಬ) ಕೆಳಗಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಮಿತಿಯ ಶಿಫಾರಸ್ಸುಗಳ ಪ್ರಕಾರ ಸರಕಾರದ ಆಜ್ಞೆಗಳನ್ನು ಹೊರಡಿಸಲಾಗಿದೆ.

(1) ಟ್ರ್ಯಾಕ್ಟರುಗಳ ಮಾರಾಟ, ಮತ್ತು ಅವುಗಳ ಬಿಡಿ ಭಾಗಗಳು, ಮರಾಟ ಕರದ ಕಾಯ್ದೆಯ ಅಡಿಯಲ್ಲಿ ಹೆಚ್ಚಿನ ತೆರಿಗೆಕೊಡುವುದು, ವಿನಾಯಿತಿ ಮಾಡಲಾಗಿದೆ.

(2) ಧಾನ್ಯಗಾರರಿಗೆ ಮತ್ತು ರೇಷ್ಮೆ ಬೆಳೆಸುವವರಿಗೆ, ತೆರಿಗೆ ವಿನಾಯಿತಿ ನೀಡಲಾಗಿದೆ.

(3) ಚರಖಾ ರೇಷ್ಮೆ ಡೀಲರ್ಸ್‌ರಿಗೆ, ಕೊಡಬೇಕಾದ ಲೈಸೆನ್ಸ್ ಫೀ ಯನ್ನು ನಿಗದಿಪಡಿಸಲಾಯಿತು.

(4) ಮಟನ್, ಹಣ್ಣುಗಳ, ಕಾಯಿಪಲ್ಲೆಗಳ, ಇತ್ಯಾದಿಗಳ ಮೇಲೆ ವ್ಯಾಪಾರಿಗಳು ಕೊಡುವ ತೆರಿಗೆಯನ್ನು ಕಡಿಮೆ ಮಾಡಲಾಯಿತು.

ಉಳಿದ ಶಿಫಾರಸ್ಸುಗಳಿನ್ನೂ ಪರಿಶೀಲನೆಯಲ್ಲಿವೆ.

(ಕ) ಬಹು-ಅಂಶ-ವಿಧಿಸುವ ಪ್ರಸ್ತುತ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಮಾಡಬಾರದೆಂದು ಸಮಿತಿಯು ತನ್ನ ಅಭಿಪ್ರಾಯ ಪಡಿಸಿರುವುದು. ಸರಕಾರವು ವಿಧಿಸಿದಂತೆ ಒಂದೇ ಅಂಶ ಲೇವಿ-ಪದ್ಧತಿಯನ್ನು ಕೆಲವು ಸರಕುಗಳಿಗೆ ವಿಸ್ತರಿಸಬೇಕೆಂದು ಸೂಚಿಸಲಾಯಿತು.

## 13: ಸಾಮುದಾಯಿಕ ಯೋಜನೆಯ ಕಾರ್ಯ ಯೋಜನೆ (ಮಾರ್ಚ್ 26 1953).

ಪ್ರಶ್ನೆ : ಶ್ರೀ ಗೋರುರು ರಾಮಸ್ವಾಮಿ ಅಯ್ಯಂಗಾರ (ನೇಮಕ ವಾದ)

ಅ)ಸಾಮುದಾಯಿಕ ಯೋಜನೆಯ ಕಾರ್ಯಯೋಜನೆಯ ಅಡಿಯಲ್ಲಿ ಕಾರ್ಯ ಮಾಡಿದ್ದರ ಸ್ವರೂಪ

ಬ)ಆ ಕಾರ್ಯಗಳನ್ನು ಕೈಕೊಂಡ ಸ್ಥಳಗಳ ಬಗ್ಗೆ

ಕ) ಆ ಕಾರ್ಯ ಯೋಜನೆಗೆ ನೇಮಿಸಲ್ಪಟ್ಟ ಆಡಳಿತದ ಸಿಬ್ಬಂದಿಯ ಸಂಖ್ಯೆ ಬಗ್ಗೆ.

ಡ) ವಿವಿಧ ಶೀರ್ಷಿಕೆಗಳಲ್ಲಿ ಸರಕಾರವು ಖರ್ಚು ಮಾಡುವ ಬಗ್ಗೆ.

ಇ) ಭಾರತ ಸರಕಾರವು ಅಥವಾ ಅಮೇರಿಕೆಯ ಸರಕಾರವು ಈ ಯೋಜನೆಗೆ ಹಣ ಕೊಡುವ ಬಗ್ಗೆ ತಿಳಿಸುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ (ಕಂದಾಯ ಮತ್ತು ಲೋಕೋಪಯೋಗಿ ಮಂತ್ರಿ)

ಅ) ಗ್ರಾಮೀಣ ಅಭಿವೃದ್ಧಿಯ ಬೃಹತ್ ಯೋಜನೆಯನ್ನು ಸಮನ್ವಯ ಮಾಡಲು ಮತ್ತು ನಿರ್ದೇಶಿಸಲು, ಕೆಲವು ಮಹತ್ವದ ಯೋಜನೆಯ ಅಡಿಯಲ್ಲಿ ಕಾರ್ಯಚಟುವಟಿಕೆಗಳ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಯಿತು.

ಬ) ಶಿವಮೊಗ್ಗ ಜಿಲ್ಲೆಯ ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳು.

ಕ)1. ಅಧ್ಯಕ್ಷರು-ಯೋಜನೆಯ ಸಲಹಾ ಸಮಿತಿ.

2. ಪ್ರಾಜೆಕ್ಟ ಕಾರ್ಯಾಂಗೀಯ ಅಧಿಕಾರಿ.

3. ಸಹಾಯಕ ಯೋಜನೆಯ ಕಾರ್ಯಾಂಗೀಯ ಅಧಿಕಾರಿ-ಮತ್ತು ಅವಶ್ಯಕ ಸಿಬ್ಬಂದಿ ಮತ್ತು 17 ಗ್ರಾಮ ಸೇವಕರು.

ಡ) ಯೋಜನೆಯ ಕಾಲಾವಧಿಯ ಪ್ರಕಾರ, ಮೂರು ವರ್ಷಗಳಿಗಾಗಿ ಸರಕಾರವು 41,98,000 ರೂ. ಖರ್ಚು ಮಾಡಬೇಕಾಗುವುದು. ಯೋಜನೆಗೆ 65 ಲಕ್ಷ ರೂ ಹಂಚಿದ ಹಣವನ್ನು ಕೆಳಗಿನ ವಿಷಯಗಳಿಗೆ 3 ವರ್ಷಗಳ ಅವಧಿಗಾಗಿ ನಿಗಧಿಪಡಿಸಲಾಗಿದೆ.

| | ರೂ. |
|---|---|
| ರಾಜ್ಯ ಹೆಡ್ ಕ್ವಾಟರ್ಸ್‌ಗಳು | 22,600 |
| ಜಿಲ್ಲಾ ಪ್ರಾಜೆಕ್ಟ ಹೆಡ್- ಕ್ವಾಟರ್ಸ್‌ಗಳು | 2,66,000 |
| ವ್ಯವಸಾಯ ಮತ್ತು ಪಶುಸಂಗೋಪನಾ ಸೇವೆಗಳು | 50,000 |
| ನೀರಾವರಿ | 17,19,000 |
| ಸಾಗುವಳಿ | 2,47,500 |
| ಆರೋಗ್ಯ ಮತ್ತು ಗ್ರಾಮೀಣ ನೈರ್ಮಲ್ಯ | 6,71,000 |
| ಶಿಕ್ಷಣ | 5,50,000 |
| ಸಾಮಾಜಿಕ ಶಿಕ್ಷಣ | 97,000 |
| ಸಂಪರ್ಕ | 11,22,000 |
| ಗ್ರಾಮೀಣ ಕಲೆ, ಕೌಶಲ್ಯ ಮತ್ತು ಕೈಗಾರಿಕೆಗಳು | 2,82,500 |
| ತರಬೇತಿ | 7,000 |
| ಕಾಮಗಾರಿಗಳು | 2,12,000 |
| ಡಾಲರ | 6,53,000 |
| ಒಟ್ಟು | 64,99,600 ಅಥವಾ |
| | 65,00,000 |
| ಇ) ಕೇಂದ್ರ ಸರಕಾರದ ಅನುದಾನ | 23,02,004 |
| ಕೇಂದ್ರ ಸರಾಕರದಿಂದ ಸಾಲ | 29.,91,000 |
| ಅಮೇರಿಕ ಸರಕಾರ | 6,53,000 |
| (ಡಾಲರ ವೆಚ್ಚ) | |

**ಯೋಜನೆಯಡಿಯಲ್ಲಿನ ಮಹತ್ವದ ಕಾರ್ಯ ಚಟುವಟಿಕೆಗಳು**

ಎ) ಒಕ್ಕಲುತನ ಮತ್ತು ಅದರ ಸಹಾಯಕ ರಂಗಗಳು

1) ಬಂಜರು ಭೂಮಿಯ ಸಾಗುವಳಿ

2) ಕೃಷಿಗೆ ನೀರಾವರಿಯ ಸೌಕರ್ಯ (ನೀರಾವರಿ ಕಾಲುವೆ ಟ್ಯೂಬ್ ಬಾವಿಗಳು, ಸರ್ಫೆಸ್ ಬಾವಿ, ಮುಂತಾದವು)

3. ಗುಣಮಟ್ಟದ ಬೀಜಗಳ ಪೂರೈಕೆ

4. ಸುಧಾರಿತ ಕೃಷಿ ತಂತ್ರಜ್ಞಾನ

5. ಪಶು ವೈದ್ಯಕೀಯ ಸಹಾಯ

6. ಸುಧಾರಿತ ಕೃಷಿ ಸಾಧನಗಳು ಪೂರೈಕೆ

7. ಮಾರುಕಟ್ಟೆಯ ಮತ್ತು ಸಾಲದ ಸೌಲಭ್ಯ

8. ಪಸು ಸಂಗೋಪನಗಳ ಗರ್ಭದಾರಣೆಯ ಕೇಂದ್ರಗಳ ಪೂರೈಕೆ.

9. ಮೀನುಗಾರಿಕೆ ಅಭಿವೃದ್ಧಿ

10.ಆಹಾರ ಕ್ರಮದ ಪುನರ್ ಸಂಘಟನೆ

11. ಹಣ್ಣು ಮತ್ತು ಕಾಯಿಪಲ್ಲೆಯ ಸಾಗುವಳಿಯ ಅಭಿವೃದ್ಧಿ

12. ಮಣ್ಣಿನ ಸಂಶೋಧನೆ ಮತ್ತು ರಸಗೊಬ್ಬರದ ಪೂರೈಕೆ.

13. ಗಿಡ ನೆಡುವುದು ಮತ್ತು ಅರಣ್ಯಗಳ ಪೂರೈಕೆ

14. ಫಲಿತಾಂಶಗಳ ಪರಿಶೀಲನೆಗಾಗಿ ಅವಕಾಶ.

(ಬಿ) ಸಂಪರ್ಕ

1. ರಸ್ತೆಗಳ ಪೂರೈಕೆ.

2. ಯಾಂತ್ರಿಕ ರಸ್ತೆ ಸಾರಿಗೆ ಸೇವೆಗಳಿಗೆ ಪ್ರೋತ್ಸಾಹ

3. ಪ್ರಾಣಿಗಳ ಸಾರಿಗೆಯ ಅಭಿವೃದ್ಧಿ

(ಸಿ) ಶಿಕ್ಷಣ

1. ಪ್ರಾಥಮಿಕ ಹಂತದಲ್ಲಿ ಕಡ್ಡಾಯ ಮತ್ತು ಮುಕ್ತ ಶಿಕ್ಷಣದ ಅವಕಾಶ

2. ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ಅವಕಾಶ

3. ಸಾಮಾಜಿಕ ಶಿಕ್ಷಣ, ಗ್ರಂಥಾಲಯ ಸೇವೆಗಳಿಗೆ ಅವಕಾಶ.

(ಡಿ) ಆರೋಗ್ಯ

1. ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ಕ್ರಮಗಳು.

2. ನರಳುತ್ತಿರುವವರಿಗೆ ವೈದ್ಯಕೀಯ ಸಹಾಯ ಇತ್ಯಾದಿ.

3. ಇತ್ಯಾದಿ.

(ಇ) ತರಬೇತಿ

1. ಪ್ರಸ್ತುತ ಕುಶಲ ಕರ್ಮಿಗಳ ಮಟ್ಟ ಸುಧಾರಿಸಲು, ಪುನಃ ಚೇತನ ಶಿಬಿರಗಳು.

2. ಕೃಷಿಕರ ತರಬೇತಿ

3. ವಿಸ್ತರಣಾ ಸಹಾಯಕರ ತರಬೇತಿ

4. ಕುಶಲಕರ್ಮಿಗಳ ತರಬೇತಿ

5. ಮೇಲ್ವಿಚಾರಕರ ತರಬೇತಿ

6. ನಿರ್ವಹಣೆಯ ಸಿಬ್ಬಂದಿಯ ತರಬೇತಿ

7. ಆರೋಗ್ಯ ಕೆಲಸಗಾರರ ತರಬೇತಿ ಇತ್ಯಾದಿ.

8. ಇತ್ಯಾದಿ.

(ಎಫ್) ಉದ್ಯೋಗ

1. ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ

2. ಮಧ್ಯಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ.

3. ಯೋಜಿತ ವ್ಯಾಪಾರದ ಹಂಚುವಿಕೆಯಿಂದ ಉದ್ಯೋಗದ ಪ್ರೋತ್ಸಾಹ.

(ಜಿ) ವಸತಿ

1.ಗ್ರಾಮೀಣ ವಸತಿಗೆ ಸುಧಾರಿತ ತಂತ್ರಗಳ ಮತ್ತು ಯೋಜನೆಗಳ ಅವಕಾಶ

2. ನಗರ ಪ್ರದೇಶಗಳ ವಸತಿಯ ಪೂರೈಕೆ.

ಎಚ್. ಸಾಮಾಜಿಕ ಕಲ್ಯಾಣ

1. ಸ್ಥಳೀಯ ಸಂಸ್ಕೃತಿಯ ಆಧಾರದ ಮೇಲೆ, ಸಾಮೂದಾಯಿಕ ಮನೋರಂಜನೆಯ ಪೂರೈಕೆ.

2. ಬೋಧನೆ ಮತ್ತು ಮನರಂಜನೆಗಾಗಿ, ದೃಕ್ ಶ್ರವಣೋಪಕರಣಗಳ ಪೂರೈಕೆ.

3. ಗ್ರಾಮೀಣ ಮತ್ತು ಇತರ ಚಟುವಟಿಕೆಗಳ ಸಂಘಟನೆ.

4. ಜಾತ್ರೆಗಳ ಸಂಘಟನೆ.

5. ಸಹಕಾರಿ ಮತ್ತು ಸ್ವಸಹಾಯದ ಚಳುವಳಿಯ ಸಂಘಟನೆ.

## 14: ಟೆನೆನ್ಸಿ ಆ್ಯಕ್ಟನ ಮೇಲೆ ಚರ್ಚೆ- ಶ್ರೀ ಪಿ. ಸೀತಾರಾಮಯ್ಯನವರು ಅತೀ ಮಬ್ಬಾದ ರೀತಿಯಲ್ಲಿ ಟೆನೆನ್ಸಿ ಆ್ಯಕ್ಟನ್ನು ಮಂಡಿಸಿರುವುದರ ಬಗ್ಗೆ ಶ್ರೀ ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ. (27ನೇ ಮಾರ್ಚ,1953).

ಶ್ರೀ ಕಡಿದಾಳ ಮಂಜಪ್ಪ (ಕಂದಾಯ ಮಂತ್ರಿ) :

ಮಾನ್ಯರೇ, ನನ್ನ ಮಿತ್ರರಾದ ಶ್ರೀ ಪಿ. ಸೀತಾರಾಮಯ್ಯನವರು,ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಜಾರಿಯಲ್ಲಿರುವ ಟೆನೆನ್ಸಿ ಕಾಯ್ದೆಯ ಬಗ್ಗೆ ಮಬ್ಬಾದ ಚಿತ್ರವನ್ನು ಮಂಡಿಸಿದ್ದಾರೆ.

ಮಾನ್ಯರೇ, ಆ ಕಾಯ್ದೆಯನ್ನು ಕೆಳಮನೆಯಲ್ಲಿ ಚರ್ಚಿಸಿದ್ದಾಗ ತಾವು ಕಾನೂನು ಸದಸ್ಯರಿದ್ದೀರಿ. ನನ್ನ ಜೊತೆ, ತಾವು ಕೂಡ ಸೆಲೆಕ್ಟ ಸಮಿತಿಯ ಸದಸ್ಯರಿದ್ದೀರಿ. ರಾಯರೇ, ಈ ಕಾಯ್ದೆಯು ಭಾರತದಲ್ಲಿ ಜಾರಿಯಲ್ಲಿದ್ದ ಅತೀ ಸೌಮ್ಯದ ಟೆನಾನ್ಸಿ ಕಾಯ್ದೆಯೆಂದು ನಾನು ಹೇಳಲೇ ಬೇಕಾಗುತ್ತದೆ. ಆ ಕಾಯ್ದೆಯನ್ನು, ಬೊಂಬೈ ಟೆನಾನ್ಸಿ ಕಾಯ್ದೆಯ ಮಾದರಿಯ ಆಧಾರದ ಮೇಲೆ ರಚಿಸಲಾಗಿದೆ. ಆದರೆ, ಬೊಂಬೈ ಕಾಯ್ದೆಯಲ್ಲಿ ಗೇಣಿದಾರರಿಗೆ ಅನುಕೂಲವಾಗುವಂಥ ಅನೇಕ ಉಪಬಂಧಗಳು ಈ ಕಾಯ್ದೆಯಲ್ಲಿ ಕಂಡು ಬರುವುದಿಲ್ಲ. ಆದಕ್ಕಾಗಿಯೇ, ಸಮಿತಿಯ ಕೆಲವು ಶಿಫಾರಸ್ಸುಗಳಿಗೆ ನಾನು ವಿರೋಧಿಸಿದೆ. ಭಾರತದ ಸ್ವಾತಂತ್ರ್ಯದ ನಂತರ, ಭೂ ಸುಧಾರಣೆಗಳ (ಸಂಪತ್ತಿನ ಹಂಚುವಿಕೆ), ಕಡೆ ಜನರ ಗಮನ ಸೆಳೆಯಿತು. ಕೆಲವು ವರ್ಷಗಳ ಹಿಂದೆ ಸ್ಥಾಪಿಸಿದ ಕಾಂಗ್ರೆಸ್ ಕೃಷಿ ಸಮಿತಿಯು, ಕೆಲವು ಷರತ್ತುಗಳ ಪ್ರಕಾರ "ಉಳುವವನೇ ಭೂಮಿಯ ಒಡೆಯ" ನೆಂದು ಅಭಿಪ್ರಾಯ ವ್ಯಕ್ತಪಡಿಸಿತು. ಪುನ: ಇತ್ತೀಚಿಗೆ ಯೋಜನಾ ಆಯೋಗವು, ಬೂಮಿಯ ಬಗ್ಗೆ ಇದ್ದ ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕೆಂದು ಸೂಚಿಸಿತು. ಜಮೀನದಾರರಿಗೆ ನನ್ನ ಕಳಕಳಿಯ ವಿನಂತಿಯೇನೆಂದರೆ, ಅವರು ಸಮಯಕ್ಕನುಸಾರವಾಗಿ ನಡೆಯಬೇಕು. ಇಲ್ಲದಿದ್ದರೆ, ಅವರ ಅಧೋಗತಿಯೇ ಸರಿ. ಅದಕ್ಕಾಗಿಯೇ, ಶ್ರೀಮಾನ್ಯ ಸೀತಾರಾಮಯ್ಯನವರು"ಗೇಣಿದಾರರ ಮತ್ತು ಜಮೀನುದಾರರ ನಡುವೆ ಸಾಮರಸ್ಯ ಇಲ್ಲ" ವೆಂಬ ಹೇಳಿಕೆ ಸತ್ಯವಾದದ್ದು. ಪ್ರಾರಂಭಿಕ ಹಂತದಲ್ಲಿ, ಇಂಥ ಸನ್ನಿವೇಶಗಳು ಬಂದೊದಗುವುದು ಸಹಜ. ಅದರೆ ಕ್ರಮೇಣ, ಈ ಕಾಯ್ದೆಯ ಉಪಬಂಧಗಳ ಪ್ರಕಾರ, ಜಮೀನದಾರರು ಮತ್ತು ಗೇಣಿದಾರರು, ಹೊಂದಿಕೊಂಡು ಹೋಗಬೇಕು.

ನನ್ನ ಮಿತ್ರರು "ಕೆಲವು ಜನರು ಈ ಕಾಯ್ದೆಯ ವಿರುದ್ಧ ಇದ್ದಾರೆ" ಎಂಬುದು ಸತ್ಯ. ಏಕೆಂದರೆ, ಕಾಯ್ದೆಯ ವಿರುದ್ಧ, ಕೆಲವು ಪಟ್ಟಭದ್ಧ ಹಿತಾಸಕ್ತಿಗಳು ಕೆಲಸ ಮಾಡುವುದು ಸಹಜ, ಮತ್ತು ಸ್ವಭಾವಿಕ. ಕಾಯ್ದೆಯಲ್ಲಿ ಮಾರ್ಪಾಡು ಮಾಡಬೇಕಾಗುತ್ತದೆ. ನನಗೂ ಕಾಯ್ದೆಯಲ್ಲಿನ ಕೆಲವು ಉಪಬಂಧಗಳು ಅಷ್ಟು ಸ್ಪಷ್ಟರೀತಿಯಲ್ಲಿಲ್ಲ ಅನಿಸುವುದು, ಅದನ್ನು ತಿದ್ದುಪಡಿಮಾಡ ಬೇಕಾಗುತ್ತದೆ. ಆ ದಿಶೆಯಲ್ಲಿ ಸರಕಾರವು ಗಂಭೀರವಾಗಿ ಪರಿಶೀಲಿಸುತ್ತಿದೆ.

ಮಾನ್ಯ ಸದಸ್ಯರ ಗಮನಕ್ಕೆ ನಾನು ತರುವುದೇನೆಂದರೆ, ಭಾರತದಲ್ಲಿ, ಅತೀ ಉತ್ತಮವಾದ ಕಾಯ್ದೆ ಎಂದು, ಹೆಸರು ಪಡೆದ, ಬಾಂಬೆ ಟೆನಾನ್ಸಿ ಕಾಯ್ದೆಯು 1:6 ದಷ್ಟು ಉತ್ಪನ್ನವು ಬಾಡಿಗೆಗೆ

ಅವಕಾಶ ಮಾಡಿಕೊಡುತ್ತದೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಬಾಡಿಗೆಯ, ಉತ್ಪನ್ನದ ಅರ್ಧದಷ್ಟು ಇರುತ್ತದೆ. ಮಲೆನಾಡು ತಾಲೂಕುಗಳಲ್ಲಿ, ಬಾಡಿಗೆಯು 1:3ರಷ್ಟು ಇರುತ್ತದೆ. ಕೆಲವು ರೈತರ ಪ್ರಕಾರ, ಕಾಯ್ದೆಯನ್ನು ಇಡೀ ರಾಜ್ಯಕ್ಕೆ ಅನ್ವಯವಾಗುವಂತಾಗಬೇಕು ಮತ್ತು ಗೇಣಿದಾರರಿಗೆ ಕೆಲವು ರಕ್ಷಣೆಗಳು ಸಿಗುವಂತಾಗಬೇಕು. ಶ್ರೀ ಸೀತಾರಾಮಯ್ಯನವರು ಹೇಳಿದಂತೆ, ಭೂಮಿಯ ಕಿಮ್ಮತ್ತು ಇಳಿಮುಖವಾಗಿರುತ್ತದೆ. ರಾಯರೇ, ಕಾಯ್ದೆಯು ಕೇವಲ ಶ್ರೀರಂಗಪಟ್ಟಣ ತಾಲ್ಲೂಕಿಗೆ ಅನ್ವಯಿಸುವುದಿಲ್ಲ. ಅದು ಉಳಿದ ತಾಲ್ಲೂಕಗಳಿಗೂ ಅನ್ವಯಿಸುತ್ತದೆ. ಶ್ರೀರಂಗಪಟ್ಟಣ ತಾಲ್ಲೂಕು ಬಿಟ್ಟರೆ, ಬೇರೆ ಯಾವ ತಾಲ್ಲೂಕುಗಳಲ್ಲಿ, ಜಮೀನದಾರರು, ಕಾಯ್ದೆಯ ವಿರುದ್ಧ ಆಕ್ಷೇಪಣೆ ಮಾಡಿಲ್ಲ. ಕಾಯ್ದೆಯು ಜಮೀನದಾರರ ಹಿತಾಸಕ್ತಿಗಳನ್ನು ಕಾಪಾಡಲು ಅವಕಾಶ ನೀಡುತ್ತದೆ. ಗೇಣಿದಾರನು, ಬಾಡಿಗೆ ಕೊಡದಿದ್ದಲ್ಲಿ ಮಾತ್ರ ಅವನ ಸ್ವಾಧೀನತೆಯನ್ನು ತಪ್ಪಿಸಲಾಗುತ್ತದೆ. ಒಂದು ವೇಳೆ ಅವನು ಸಮರ್ಪಕವಾಗಿ ಭೂಮಿಯನ್ನು ಸಾಗುವಳಿ ಮಾಡದಿದ್ದಲ್ಲಿ, ಅವನ ಭೂ ಸ್ವಾಧೀನತೆಯನ್ನು ಕಸಿದು ಕೊಳ್ಳಲಾಗುತ್ತದೆ.

ನನ್ನ ಮಿತ್ರರು ಹೇಳಿದಂತೆ, ಗೇಣಿದಾರನು, ಭೂಮಿಯನ್ನು 12 ವರ್ಷಗಳ ವೆರಿಗೆ ಸಾಗುವಳಿ ಮಾಡಿದರೆ, ಅವನು ಆ ಭೂಮಿಯ ಖಾಯಂ ಒಡೆಯನಾಗುವನು. ಅದು ಸತ್ಯ. ಒಂದು ವೇಳೆ ನೀವು ಭೂಮಿಯನ್ನು ಸಾಗುವಳಿ ಮಾಡಬೇಕಾದರೆ, ನೀವು ಅಮಿಲದಾರರಿಗೆ ಅರ್ಜಿ ಸಲ್ಲಿಸಿ, ಭೂಮಿಯ ಮೇಲೆ ನಿಮ್ಮ ಸೊತ್ತನ್ನು ತೆಗೆದುಕೊಳ್ಳಬಹುದು (ಅರ್ಧಕ್ಕಿಂತ ಹೆಚ್ಚು ಇಲ್ಲದ) ಆ ಉಪಬಂಧವನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಶ್ರೀರಂಗಪಟ್ಟಣದ ಜಮೀನದಾರರ ಪ್ರತಿನಿಧಿಗಳು ನನಗೆ ಅರ್ಜಿ ಸಲ್ಲಿಸಿದ್ದಾರೆ. ನಾನು ಅದನ್ನು ಪರಿಶೀಲಿಸುತ್ತಿದ್ದೇನೆ. ವಿಧಾನ ಪರಿಷತ್ತಿನ ಮುಂದಿನ ಅಧಿವೇಶನದಲ್ಲಿ ಟೆನಾನ್ಸಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಮಂಡಿಸಲಾಗುತ್ತದೆ. ಶ್ರೀ ಸೀತಾರಾಮಯ್ಯನವರು ಹೇಳಿದಂತೆ, ಕಾಯ್ದೆಯು ಜನರನ್ನು ಸೋಮಾರಿಯನ್ನಾಗಿ ಮಾಡುತ್ತದೆ. ಅದು ಅವರ ಅನುಭವದ ಮಾತು ಎಂದು ಅವರು ಹೇಳುತ್ತಾರೆ.

ಆದರೆ, ನನ್ನ ಪ್ರಕಾರ, ಆ ರೀತಿಯ ಹೇಳಿಕೆ ಮಾಡುವವರು ಪಟ್ಟಭದ್ರ ಹಿತಾಸಕ್ತಿಗಳು ಮಾತ್ರ. ಕಾಯ್ದೆಯನ್ನು ಗೇಣಿದಾರನನ್ನು ಸಹಾಯ ಮಾಡಲು, ಕೆಲವು ಪ್ರದೇಶಗಳಿಗೆ ಅನ್ವಯಿಸಲಾಗಿದೆ. ಕೆಳಮನೆಯಲ್ಲಿ, ಈ ಹಿಂದಿನ ದಿನ ಈ ಕಾಯ್ದೆಯನ್ನು ಸಮಸ್ತ ರಾಜ್ಯಕ್ಕೆ ಅನ್ವಯಿಸದೇ ಇರುವುದರ ಸರಕಾರದ ಕ್ರಮವನ್ನು ಬಹುತೇಕ ಸದಸ್ಯರು ಟೀಕಿಸಿದ್ದಾರೆ.ರಾಯರೇ, ಅಲ್ಲಿ ನಾನು ಕಾಯ್ದೆಯನ್ನು ಸಂಪೂರ್ಣ ರಾಜ್ಯಕ್ಕೆ ಅನ್ವಯವಾಗುವಂತೆ ಸರಕಾರ ವ್ಯವಸ್ಥೆ ಮಾಡುತ್ತದೆಯೆಂದು ಪ್ರಮಾಣ ಮಾಡಿದ್ದೇನೆ. ಈಗ ಪ್ರಶ್ನೆ ಇರುವುದು ಇದನ್ನು ಈಗ ಮಾಡಬೇಕೋ ಅಥವಾ ತಿದ್ದುಪಡಿಯ ನಂತರ ಸರಕಾರವು ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಶೀಲಿಸುತ್ತಿದೆ.

ಮಾನ್ಯ ಸದಸ್ಯರು ತಿಳಿಸಿದಂತೆ, ಹಿಡುವಳಿಗಳಿಗೆ ಗರಿಷ್ಟ ಮಿತಿ ನಿಗದಿಗೊಳಿಸಬೇಕು. ನಮ್ಮ ರಾಜ್ಯ ಸರಕಾರ ಅಲ್ಲದೇನೇ, ಕೇಂದ್ರ ಸರಕಾರವೂ ಈ ಪ್ರಶ್ನೆಯನ್ನು ಪರಿಶೀಲಿಸುತ್ತದೆ. ಗರಿಷ್ಟ ಮಿತಿ ನಿಗದಿಗೊಳಿಸಲು, ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ನಡುವೆ ಪತ್ರ ವ್ಯವಹಾರ ನಡೆದಿದೆ. ಈ ಪ್ರಶ್ನೆ, ತಿಳಿದುಕೊಂಡಷ್ಟು ಸುಲಭವಲ್ಲ. ಅದು ಒಂದು ಬಹಳ

ಜಟಿಲವಾದ ಪ್ರಶ್ನೆಯಾಗಿದೆ. ಎಲ್ಲ ಪ್ರದೇಶಗಳಲ್ಲಿ, ಒಂದೇ ತೆರನಾದ ಗರಿಷ್ಠ ಮಿತಿ ನಿಗದಿಪಡಿಸಲು ಸಾಧ್ಯವಿಲ್ಲ. ಆ ಮಿತಿಯು ಪ್ರದೇಶ, ಭೂಮಿಯ ಸ್ವರೂಪ ಮತ್ತು ಇತರ ಸನ್ನಿವೇಶ ಅಥವಾ ಸಂದರ್ಭಗಳ ಮೇಲೆ ಅವಲಂಬಿಸಬೇಕು. ಕಾಫಿ ಅಥವಾ ಅಡಿಕೆ ಅಥವಾ ಚಹಾ ಎಸ್ಟೇಟುಗಳ ಮೇಲೆ ನಿಗದಿ ಪಡಿಸುವ ಮಿತಿಯು ಕೃಷಿಯ ಭೂಮಿಗಿಂತ ಭಿನ್ನವಾಗಿರುತ್ತದೆ. ಈಗ ಸಧ್ಯ, ನಾವು ಕೃಷಿಯ ಭೂಮಿಗಳ ಮೇಲೆ ಮಿತಿ ನಿಗಧಿ ಪಡಿಸುವುದು ಸಮರ್ಪಕ ಆ ದಿಶೆಯಲ್ಲಿ, ಕೂಡಲೇ, ಒಂದು ನಿರ್ಧಾರ ತೆಗೆದುಕೊಳ್ಳಲಾಗುವುದು. ನಮ್ಮ ಸ್ನೇಹಿತರು, ಸೂಚಿಸಿದಂತೆ, ಸ್ವತ್ತಿನ ಹಂಚುವಿಕೆಯು ಕೇವಲ ಕೃಷಿ ಭೂಮಿಗಳಿಗೆ ಸೀಮಿತವಾಗದೇ, ಅದು ಮನೆ ಮತ್ತು ಇತರ ಸ್ವತ್ತುಗಳಿಗೆ ವಿಸ್ತರಿಸಬೇಕು. ನಾನು ಅವರ ಅಭಿಪ್ರಾಯಕ್ಕೆ ಒಪ್ಪುತ್ತೇನೆ. ಶ್ರೀಮಂತ ಮತ್ತು ಬಡವರ ಮಧ್ಯೆಯಿರುವ ವೈಷಮ್ಯತೆ ನಿರ್ಮೂಲವಾದರೆ, ದೇಶದ ಅಭಿವೃದ್ಧಿ ಸಾಧ್ಯ.

ಕೊನೆಯದಾಗಿ, ನಾನು ಸೀತಾರಾಮಯ್ಯನವರಿಗೆ, ಅರಿಕೆ ಮಾಡಿಕೊಳ್ಳುವುದೇನೆಂದರೆ, ಪುನ: ಈ ಸಮಸ್ಯೆಯನ್ನು ದೇಶದ ಮತ್ತು ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ, ಪರಿಗಣಿಸಬೇಕು. ಭೂ ಸುಧಾರಣೆಗಾಗಿ, ಇಷ್ಟು ಭರದಿಂದ ನಾವು ಕ್ರಮ ತೆಗೆದುಕೊಳ್ಳುವುದು, ನನಗೆ ತೃಪ್ತಿಯಿಲ್ಲ. ಇಂಥ, ಯಾವುದೇ ಕಾರ್ಯಕ್ರಮವನ್ನು ನಾವು ಪರಿಶೀಲಿಸುವಾಗ, ಜಮೀನದಾರರನ್ನು ಅನಾವಶ್ಯಕವಾಗಿ ಯಾವುದೇ ಹಾನಿಗೆ ಗುರಿ ಮಾಡಬಾರದು. ಒಂದು ವೇಳೆ ಜಮೀನುದಾರರು, ಭೂಮಿಯನ್ನು ಒಂದು ಮಿತಿಯವರೆಗೆ ಸಾಗುವಳಿ ಮಾಡಲು ಬಯಸಿದರೆ, ಅವರಿಗೆ ಆ ರೀತಿಯ ಅನುಮತಿ ಕೊಡಬೇಕು. ಅಂಥ ವೇಳೆಯಲ್ಲಿ, ಸದನದಲ್ಲಿ, ಕಾಯ್ದೆಯ ತಿದ್ದುಪಡಿಯನ್ನು ಮಂಡಿಸಬೇಕಾಗುತ್ತದೆ. ಕಾಯ್ದೆಯನ್ನು ತಿದ್ದುಪಡಿ ಮಾಡುವಾಗ, ಶ್ರೀ ಸೀತಾರಾಮಯ್ಯನವರ ಎಲ್ಲಾ ಸೂಚನೆಗಳನ್ನು ಗಮನದಲ್ಲಿಡುತ್ತೇನೆ. ನಂತರ ಕೂಡಲೇ ಆದಷ್ಟು ಬೇಗನೆ, ತಿದ್ದುಪಡಿಯ ಮಸೂದೆಯನ್ನು ಸದನದಲ್ಲಿ ತರುತ್ತೇನೆ.

## 15: ವಿಧಾನ ಪರಿಷತ್ತು-ಮೈಸೂರು ಇನಾಂರದ್ದತಿಯ ಮಸೂದೆಯ ಮೇಲೆ ಜಂಟಿ ಸೆಲೆಕ್ಟ ಸಮಿತಿಗೆ ಒಪ್ಪಿಗೆ ಕುರಿತು ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ. 11ನೇ ಏಪ್ರೀಲ್ 1953

ಸಭಾಧ್ಯಕ್ಷರು :

ಮಸೊದೆಯ ತತ್ವಗಳಿಗೆ ಎಲ್ಲಾ ಸದಸ್ಯರು ಒಪ್ಪಿಕೊಂಡಿದ್ದಾರೆಂಬುದು ನನಗೆ ಅನಿಸುತ್ತದೆ. ಈಗ ಮಾನ್ಯ ಮಂತ್ರಿಗಳು ಉತ್ತರ ನೀಡುವರು.

ಶ್ರೀ ಕಡಿದಾಳ ಮಂಜಪ್ಪ :

ಮಾನ್ಯರೆ, ಎಲ್ಲ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ, ಕಾಯ್ದೆಯಲ್ಲಿನ ಕೆಲವು ಉಪ ಬಂಧಗಳಿಗೆ, ಸ್ವಾಗತ ಕೋರಿ, ಅದರ ಕೆಲವು ಉಪ ಬಂಧಗಳ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಟಿ.ಎಸ್. ರಾಜಗೋಪಾಲ ಅಯ್ಯಂಗಾರ್ ಅವರು ಕಾಯ್ದೆಯ ಎಲ್ಲ ಉಪ ಬಂಧಗಳ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಅದರ ಬಗ್ಗೆ, ನಾನು ಈ ಹಂತದಲ್ಲಿ ಹೆಚ್ಚಿಗೆ ಏನೂ ಹೇಳವ ಅವಶ್ಯಕತೆಯಿಲ್ಲ. ಏಕೆಂದರೆ, ಮಸೂದೆಯು ಸೆಲೆಕ್ಟ ಸಮಿತಿಯ ಎದುರು ಹೋಗಲಿದೆ. ಸಂಕ್ಷಿಪ್ತವಾಗಿ, ನಾನು ಇಲ್ಲಿ ನನ್ನ ಉತ್ತರ ನೀಡುತ್ತೇನೆ. ಶ್ರೀ ರಾಜಗೋಪಾಲ ಅಯ್ಯಂಗಾರರು ಮಸೂದೆಯ ಬಗ್ಗೆ ಪ್ರಸ್ತುತ ಪಡಿಸಿದಂತೆ, ಅದರಲ್ಲಿನ ಕೆಲವು ಮಧ್ಯವರ್ತಿಗಳನ್ನು ತೆಗೆದುಹಾಕಿ. ಸಾಗುವಳಿ ಮಾಡುವವನೇ ಭೂಮಿಯ ಒಡೆಯನನ್ನಾಗಿ ಮಾಡಬೇಕು. ಮಸೂದೆಯಲ್ಲಿ ಕೆಲವು ದೋಷಗಳಿರುವುದು ಸತ್ಯ. ಸೆಲೆಕ್ಟ ಸಮಿತಿಯು, ಅವುಗಳನ್ನೆಲ್ಲ, ಕೂಲಂಕುಷವಾಗಿ ಪರಿಶೀಲಿಸಿ, ಕೆಲವು ಅವಶ್ಯಕ ತಿದ್ದುಪಡಿಗಳನ್ನು ಮಾಡುತ್ತದೆ. ನನ್ನ ಮಿತ್ರ ಶ್ರೀ ರಾಜಗೋಪಾಲ ಅಯ್ಯಂಗಾರರು "ಸರಕಾರವು ಹಂಚಿಕೆದಾರನ ಮತ್ತು ದಳ್ಳಾಳಿಯ ಪಾತ್ರ ತೆಗೆದುಕೊಳ್ಳುವುದೆಂದು," ಹೇಳಿದ್ದಾರೆ. ಮಸೂದೆಯ, ಗೇಣಿದಾರರಿಂದ ವಿಮಾ ಕಂತು (ಪ್ರೀಮಿಯಮ್) ಪಡೆಯುವ ಉಪಬಂಧಗಳಿಗೆ, ಅವರು ಆಕ್ಷೇಪಣೆ ಹಾಕಿದ್ದಾರೆ.

ಮಾನ್ಯರೆ, ಗೇಣಿದಾರರನ್ನು ಕಡಿಮ ಗೇಣಿದಾರರೆಂದು, ಖಾಯಂ-ಕ್ವಾಸಿ (ಅರೆ) ಅರೆ ಸ್ವರೂಪದ ಗೇಣಿದಾರರೆಂದು ಮತ್ತು ಸಾಮಾನ್ಯ ಗೇಣಿದಾರರೆಂದು ವರ್ಗೀಕರಿಸಲಾಗಿದೆ. ಅಲ್ಲದೆ, ಭೂಮಿಯ ಖಾಸ್ ಸ್ವಾಧೀನತೆಗಾಗಿ, ಅಲ್ಲಿ ಇನಾಮದಾರನಿರುವನು. ಕಡಿಮ ಗೇಣಿದಾರನು, ಬೇರ್ಪಡೆ ಹೊಂದಿದ ಗ್ರಾಮಗಳಲ್ಲಿ, ತನ್ನ ಸ್ಥಾನ ಹೊಂದಿ, ಅವನಿಗೆ ಭೂಮಿಯನ್ನು 'ಇನಾಮ' ವಾಗಿ ಕೊಡಲಾಗಿದೆ. ಕಾರಣ, ಅವನು ಭೂಮಿಗೆ ಯಾವ ಪ್ರೀಮಿಯಮ್ ಕೊಡಲು ನಾವು ನೀರಿಕ್ಷಿಸಲು ಸಾಧ್ಯವಿಲ್ಲ. ಅವನು ಕೇವಲ ಸಾಮಾನ್ಯ ಭೂ-ಕಂದಾಯ ಕೊಟ್ಟರೆ ಸಾಕು. ಒಬ್ಬ ವ್ಯಕ್ತಿಯು 12 ವರ್ಷಗಳವರೆಗೆ, ಭೂಮಿಯ ಸ್ವಾಧೀನತೆಯನ್ನು ಹೊಂದಿದರೆ, ಅವನು ಖಾಯಂ ಗೇಣಿದಾರನು. ಖಾಯಂ ಗೇಣಿದಾರನ ಪ್ರಸಂಗದಲ್ಲಿ, ಮಸೂದೆಯ ಪ್ರಕಾರ, 50 ಪ್ರತಿಶತ ಮಾರುಕಟ್ಟೆಯ ಭೂಮಿಯ ಬೆಲೆ (ಮೌಲ್ಯ)ಯನ್ನು ಸರಕಾರಕ್ಕೆ ಕೊಡಬೇಕಾಗುತ್ತದೆ. ನಮಗೆ ಗುರ್ತಿದ್ದ ಹಾಗೆ, ಸರಕಾರದ ಗ್ರಾಮಗಳಲ್ಲಿ, ಜಮೀನದಾರರ ಅಡಿಯಲ್ಲಿ, ಭೂಮಿ ಸಾಗುವಳಿ ಮಾಡಲು ಖಾಯಂ ಗೇಣಿದಾರರಿದ್ದಾರೆ.

## 16: MYSORE SALES TAX (AMENDMENT) BILL, 1953.

(ಮೊದಲಿನ ಚರ್ಚೆಗೆ ಶ್ರೀ ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ).
**11th APRIL, 1953**

**Mr. CHAIRMAN:-**

Government did not want to tax the people. But sinceMadras has imposed the tax Mysore is forced to tax the people.

**SRI KADIDAL MANJAPPA -**

Correct sir, thank you ಇದೇ ರೀತಿ ಸರ್ಕಾರವು ಈ ಉದ್ಯೋಗಕ್ಕಾಗಿ ಇನಾಂ ಬಿಲ್ಲನ್ನೂ ತಂದಿತ್ತು.

**ಶ್ರೀ ಆರ್. ಪಿ. ರೇವಣ್ಣ :** - ಅದು ಜಾರಿಗೆ ಬರಲೇ ಇಲ್ಲ.

**ಶ್ರೀ ಕಡಿದಾಳ ಮಂಜಪ್ಪ :-** ಜಾರಿಗೆ ಬರದೇ ಇದ್ದುದು ನಮ್ಮ ತಪ್ಪಲ್ಲ. ಆಗಿದ್ದ ಅಸೆಂಬ್ಲಿ dissolve ಆಯಿತು. ಈಗ ಹೊಸ ಅಸೆಂಬ್ಲಿ ಮುಂದೆ ಹೊಸ ಮಸೂದೆ ತರಬೇಕಾಗಿದೆ.

ಆಮೇಲೆ ಸರ್ಕಾರಕ್ಕೆ ನೀತಿ ನಿಯಮವಿಲ್ಲ, ಏಕೆಂದರೆ ಈ ರೀತಿ ಬಂದ ಮಸೂದೆಯನ್ನು ಹಠಾತ್ತನೆ ತಂದಿರುತ್ತಾರೆಂಬ ಆರೋಪಣೆ ಮಾಡಿದ್ದಾರೆ. ಒಂದು ವೇಳೆ ಈ ಮಸೂದೆಯನ್ನು ತರದಿದ್ದರೆ ಸರ್ಕಾರದವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂಬ ಆರೋಪಣೆಯು ಬರುತ್ತಿತ್ತು. ಈಗ ತಂದಿರುವುದು "ಏನೋ ಹಠಾತ್ತನೆ ತಂದು ಬಿಟ್ಟರು" ಎಂದು ಮಾತ್ರ ಸದಸ್ಯರಿಗೆ ಎದ್ದು ಕಾಣುತ್ತಿದೆ.

ಈಗಾಗಲೇ ಭಾರತ ಸರ್ಕಾರದವರು Taxation Enquiry committee ಎಂಬುದೊಂದನ್ನು ಜಾನ್ ಮ್ಯಾಥೈಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತಾರೆ. ಅವರು ಕೇಂದ್ರ ಸರ್ಕಾರದ ವಿಚಾರವಲ್ಲದೆ ಸಂಸ್ಥಾನಗಳ ಸರ್ಕಾರಕ್ಕೂ ಸಂಬಂಧಪಟ್ಟ ತೆರಿಗೆಗಳನ್ನೂ, ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ತೆರಿಗೆಗಳನ್ನೂ ವಿಮರ್ಶೆ ಮಾಡುತ್ತಾರೆ.

**ಶ್ರೀ ಆರ್.** ಪಿ. ರೇವಣ್ಣ :- ಅದರಲ್ಲಿ ನಮ್ಮ ದೇಶದ ವ್ಯಕ್ತಿ ಯಾರಾದರೂ ಸದಸ್ಯರಿದ್ದಾರೆಯೇ?

**ಶ್ರೀ ಕಡಿದಾಳ್** ಮಂಜಪ್ಪ :- ಇಲ್ಲ.

**ಶ್ರೀ ಆರ್.** ಪಿ. ರೇವಣ್ಣ : ಹಾಗಾದರೆ ನಮ್ಮ ಕಷ್ಟ ಅವರಿಗೆ ಗೊತ್ತೇ ?

**ಶ್ರೀ ಕಡಿದಾಳ್** ಮಂಜಪ್ಪ : ಗೊತ್ತು, ಇದಕ್ಕೆ ಅವಶ್ಯಕತೆ ಉಂಟು ಬಂದರೆ ಆಗ ಯೋಚಿಸೋಣ.

ಬೊಂಬಾಯಿ, ಕೋಚಿನ್, ಟ್ರಾವಂಕೂರ್‌ಗಳಲ್ಲಿ ಈ ರೀತಿ ಮಸೂದೆಯನ್ನು ತರಲಿಲ್ಲ, ನೀವೇಕೆ ತಂದಿರಿ, ಎಂದು ಆಕ್ಷೇಪಿಸಿದ್ದಾರೆ. ಈಗ ಅವರ ತಿಳಿವಳಿಕೆಗೂ ಇದು ಬರುವುದರಿಂದ,

ಅವರೂ ಇಂಥ ಮಸೂದೆಯನ್ನು ತರಬಹುದೆಂದು ಊಹಿಸುತ್ತೇನೆ. ಶ್ರೀ ಆರ್.ಪಿ.ರೇವಣ್ಣನವರು ಇದನ್ನು ಸೆಲೆಕ್ಷನ್ ಕಮಿಟಿಗೆ 'refer' ಮಾಡಬೇಕೆಂದು ಹೇಳಿದರೂ ಇದನ್ನು ಈ ರೀತಿ ಮಾಡಿ ಇದರ ಮೇಲಿನ ಚರ್ಚೆಯನ್ನು ಜೂನ್ ತಿಂಗಳವರೆಗೆ ಮುಂದುವರಿಸಿದರೆ ಪರಿಣಾಮವೇನು ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು Retail Sale Price ಜಾಸ್ತಿಯಾಗಿ, ನಮ್ಮ ಸಂಸ್ಥಾನದ ಸರಕನ್ನೆಲ್ಲಾ ಮದ್ರಾಸ್ ಪ್ರಾಂತ್ಯಕ್ಕೆ ಸಾಗಿಸಲು ಅನುಕೂಲವಾಗುತ್ತದೆ. ಆದಕಾರಣ, ಈ ಸುಂಕ ಅನಿವಾರ್ಯವಾದುದೆಂದು ಮನವಿ ಮಾಡಿ ಕೊಳ್ಳುತ್ತೇನೆ.

## 17: ಮೈಸೂರು ಕೃಷಿಕರ ಪರಿಹಾರ (ತಿದ್ದುಪಡಿಯ) ಮಸೂದೆ 1953. ವಿಧಾನ ಪರಿಷತ್ತಿನಲ್ಲಿ - 12ನೇ ಏಪ್ರೀಲ್ 1953.

**ಶ್ರೀಕಡಿದಾಳ ಮಂಜಪ್ಪ :**

ಮಾನ್ಯರೆ, ನಾನು "ಮೈಸೂರು ಕೃಷಿಕರ ಪರಿಹಾರ (ತಿದ್ದುಪಡಿಯ) ಮಸೂದೆಯನ್ನು ವಿಧಾನ ಸಭೆಯಲ್ಲಿ ಅಂಗೀಕರಿಸಿದ್ದನ್ನು ಈ ಸಭಸದಲ್ಲಿ, ಪರಿಶೀಲನೆಗಾಗಿ ಮುಂಡಿಸುತ್ತೇನೆ

ಮಾನ್ಯರೆ, ಇದು ಬಹಳ ಸರಳವಾದ ಕ್ರಮವಾಗಿದೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಈ ಕಾಯ್ದೆಯನ್ನು "ಮೈಸೂರು ಕೃಷಿಕರ ಪರಿಹಾರ ಕಾಯ್ದೆ"ಎಂದು ಕರೆಯಲಾಗಿದೆ. ಇದು 1928ರಲ್ಲಿ ಕಾಯ್ದೆಯಾಯಿತು. ಇದು ಸಣ್ಣ ಕೃಷಿಕರಿಗೆ (ಯಾರ ಆದಾಯ ರೂ. 1000ಕ್ಕೆ ಮೀರದಂತೆ), ಪರಿಹಾರ ನೀಡಲು ಉದ್ದೇಶ ಹೊಂದಿರುತ್ತದೆ. ಯುದ್ಧ ಪ್ರಾರಂಭವಾಗುವತನಕ, ಈ ಕಾಯ್ದೆಯಿಂದ, ಚಿಕ್ಕ ಕೃಷಿಕರಿಗೆ ಪರಿಹಾರ ನೀಡಲಾಯಿತು. ಆದರೆ, ಯುದ್ಧ ಪ್ರಾರಂಭವಾದ ನಂತರ, ಮತ್ತು ಯುದ್ಧ ಅಂತ್ಯವಾದ ಬಳಿಕ, ಬೆಲೆಗಳ ಏರುವಿಕೆಯಿಂದ ಅದೆಷ್ಟೋ ಕೃಷಿಕರು ಯಾವ ಪರಿಹಾರ ಪಡೆಯಲು ಸಾಧ್ಯವಾಗುವುದಿಲ್ಲ.ಕಾರಣ ಅವರನ್ನು ಸಹಾಯ ಮಾಡಲು, ಸರಕಾರವು ಆದಾಯವನ್ನು 1 ಸಾವಿರ ರೂ. ಯಿಂದ 2ಸಾವಿರ ರೂ. ಗೆ ಹೆಚ್ಚಿಸಲು ಯೋಚಿಸಿತು. ವಿಧಾನ ಸಭೆಯಲ್ಲಿ, ಮಸೂದೆಯನ್ನು ತಿದ್ದುಪಡಿ ಮಾಡಲಾಯಿತು. ಏಕೆಂದರೆ, 1ನೇ ಏಪ್ರೀಲ್ 1953ರಂದು " ಭಾರತೀಯ ಮಿತಿಯ ಕಾಯ್ದೆಯು" ಜಾರಿಯಲ್ಲಿ ಬಂತು. ಕಾಯ್ದೆಯ 29ನೇ ರೂಲದ ಪ್ರಕಾರ, ಒಂದು ವೇಳೆ, ವಿಶೇಷ ಕಾನೂನು, ಬೇರೆ ಕಾಲದ ಮಿತಿಯನ್ನು ನಿಗಧಿ ಪಡಿಸಿದರೆ ಬೇರೆ ಅದನ್ನು "ಭಾರತೀಯ ಮಿತಿಯ ಕಾಯ್ದೆ"ಯಲ್ಲಿ ನಿಗಧಿಪಡಿಸಿದ ಬೇರೆ ಕಾಲವೆಂದು ತಿಳಿಯಬೇಕು. ಮಿತಿಯ ಕಾಯ್ದೆಯ 19 ಮತ್ತು 20ನೇ ಭಾಗಗಳು ಮಿತಿಯ ಕಾಲವನ್ನು ನಿರ್ಧರಿಸುವಲ್ಲಿ ಅನ್ವಯ ಮಾಡುವಂತಿಲ್ಲ. ಕೃಷಿಕರ ಪರಿಹಾರ ಕಾಯ್ದೆಯ ಅಡಿಯಲ್ಲಿ, ಒಂದು ವೇಳೆ ಒಪ್ಪಂದ (ಕರಾರು), ಮೌಖಿಕ ಅಥವಾ ದಾಖಲಾತಿಯ ಆಧಾರದ ಮೇಲೆ ಇದ್ದರೆ, ನಿಗಧಿ ಪಡಿಸಿದ ಕಾಲವು 6 ವರ್ಷಗಳದ್ದಾಗಿರುತ್ತದೆ. ಒಂದು ವೇಳೆ, ಅದು ದಾಖಲಾತಿಯ ಆಧಾರದ ಮೇಲಿದ್ದು, ನೊಂದಾವಣೆಯಾಗಿದ್ದರೆ, ಕಾಲವು 12 ವರ್ಷಗಳದ್ದಾಗಿರುತ್ತದೆ. ಒಂದು ವೇಳೆ, 6 ಅಥವಾ 12 ವರ್ಷಗಳಲ್ಲಿ ಸಾಲಗಾರನು ಭಾಗಶ: ಸಂದಾಯ ಮಾಡಿದರೆ, ಅಥವಾ ತನ್ನ ಹೊಣೆಗಾರಿಕೆಯನ್ನು ಒಪ್ಪಿಕೊಂಡರೆ, ಅವನನ್ನು 6 ಅಥವಾ 12 ವರ್ಷಗಳಲ್ಲಿ (ಭಾಗಶ: ಸಂದಾಯ ಮಾಡಿದ ದಿನಾಂಕದಂದು ಅಥವಾ ಒಪ್ಪಿಕೊಂಡ ದಿನಾಂಕದಂದು), ದಾವೆಗೆ ಹಾಕಬೇಕು. ಆದರೆ, ಇತ್ತೀಚಿಗೆ, ಹಾಗೆ ಮಾಡುವಂತಿಲ್ಲ. ನಮ್ಮ ಹೈಕೋರ್ಟಿನ ತೀರ್ಪಿನ ಪ್ರಕಾರ, ಸಾಲಕೊಟ್ಟ ಎಷ್ಟೋ ಜನರು, ಮೊಕದ್ದಮೆಗಳನ್ನು ಹೂಡಿರುವುದಿಲ್ಲ. ಏಕೆಂದರೆ, ಅವರು ಸಾಲ ಕೊಡುವುದು ಭಾಗಶ: ಸಂದಾಯ ಮಾಡಿದ್ದರ ಮೇಲೆ ಅವಲಂಬಿಸಿತ್ತು. ಕಾರಣ ಸಾಲ ಕೊಡುವವರಿಗಾಗಲಿ ಅಥವಾ ಸಾಲಗಾರರಿಗಾಗಲಿ, ಯಾವುದೇ ಅನಾವಶ್ಯಕ ಶೋಷಣೆ ಮಾಡುವುದನ್ನು ತಪ್ಪಿಸಲು, ಕೆಳಮನೆಯಲ್ಲಿ ಈ ತಿದ್ದುಪಡಿಯನ್ನು (ಕಾಯ್ದೆಯ) ಒಪ್ಪಿಕೊಳ್ಳಲಾಗಿದೆ. ಅಲ್ಲದೆ 19 ಮತ್ತು 20 ಭಾಗಗಳನ್ನು ( ಭಾಗಶ: ಸಂದಾಯಕ್ಕಾಗಿ ಮತ್ತು ಒಪ್ಪಿಗೆಗಳ) ಮಿತಿಯ ಕಾಲ ನಿರ್ಧರಿಸುವಲ್ಲಿ ಪರಿಗಣಿಸಲಾಗುವುದು.

## 18: ಆಂಧ್ರ ರಾಜ್ಯಮಸೂದೆ ಮಂಡಿಸಿದಾಗ ಶ್ರೀಕಡಿದಾಳ ಮಂಜಪ್ಪನವರ ಹೇಳಿಕೆ ಜುಲೈ 27, 1953

ಶ್ರೀ ಕಡಿದಾಳ ಮಂಜಪ್ಪ:

ಮಾನ್ಯರೆ, ಕ್ಲಾಜ್ 62 ಎ ಪ್ರಕಾರ, "ತುಂಗಭದ್ರಾ ಅಣೆಕಟ್ಟು ಅಥವಾ ಆಡಳಿತ ಸಂಬಂಧದ ಮದ್ರಾಸ್ ರಾಜ್ಯದ ಎಲ್ಲ ಹಕ್ಕುಗಳು ಮತ್ತು ಹೊಣೆಗಳು, ಆಂಧ್ರ ಮತ್ತು ಮೈಸೂರು ರಾಜ್ಯದ ಹಕ್ಕುಗಳು ಮತ್ತು ಹೊಣೆಗಳಾಗಬೇಕು".

ಭಾಗದಲ್ಲಿರುವ(ಸೆಕ್ಷೇನ್) ಹಕ್ಕುಗಳು ಮತ್ತು ಹೊಣೆಗಳು, ನೀರಿನ ಹಂಚುವಿಕೆ, ಅಣೆಕಟ್ಟಿನ ಆಡಳಿತ, ನಿರ್ಮಾಣ, ಮತ್ತು ನಿರ್ವಹಣೆಗಳನ್ನು ಒಳಗೊಂಡಿರತ್ತದೆ. ಆಡಳಿತ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ, ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಿಗೆ ಸಂಬಂಧದ ವಿಷಯಗಳ ಬಗ್ಗೆ ಈವರೆಗೆ ನಾವು ಯಾವ ನಿರ್ಧಾರಕ್ಕೆ ಬಂದಿರುವುದಿಲ್ಲ. ಆ ವಿಷಯವನ್ನೇ ಈ ಸಂಧಾನಗಳ ಮತ್ತು ಒಪ್ಪಂದ ಮೂಲಕ ನಿರ್ಣಯಿಸಬೇಕಾಗಿದೆ. ದೆಹಲಿಯಲ್ಲಿ ನಡೆದ ಎರಡು ಸಮ್ಮೇಳನಗಳಲ್ಲಿ, ಪ್ರಥಮವಾಗಿ, ಮಂಜೂರಿ ಮಾಡಿದ ಅಣೆಕಟ್ಟು, ಎಲ್ಲ ರಾಜ್ಯಗಳಿಗೆ ಅನ್ವಯಿಸುವುದೆಂದು ನಿರ್ಧರಿಸಲಾಗಿತ್ತು. ಯೋಜನೆಗಳ ಜಾರಿಗಾಗಿ ಮತ್ತು ನೀರಾವರಿಯ ಕೆಲಸಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಬಂಧಪಟ್ಟ ರಾಜ್ಯಗಳ ಚೀಫ್ ಇಂಜಿನೀಯರರು ಇರುವ ಬೋರ್ಡ ಮತ್ತು ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಅಧ್ಯಕ್ಷರಿಂದ ನಿರ್ವಹಿಸಬೇಕೆಂದು ತಾತ್ಕಾಲಿಕವಾಗಿ ನಿರ್ಧರಿಸಲಾಗಿತ್ತು. ಆದರೆ, ನಿರ್ವಹಣೆಯ ಮತ್ತು ಕಾರ್ಯಾಚರಣೆಯ ಬಗ್ಗೆ, ಯಾವ ನಿರ್ಧಾರ ತೆಗೆದುಕೊಳ್ಳಲಾಗಲಿಲ್ಲ. ಆ ವಿಷಯವನ್ನೇ ಈಗ ಪರಸ್ಪರ, ಒಪ್ಪಂದದ ಮೂಲಕ ಇತ್ಯರ್ಥಗೊಳಿಸಬೇಕಾಗಿದೆ. ಒಪ್ಪಂದದ ಮೂಲಕ ಆ ವಿಷಯವನ್ನು ಬಗೆಹರಿಸಲು ಅಸಾಧ್ಯವಾದರೆ, ರಾಷ್ಟ್ರಪತಿಯವರ ಅಜ್ಞೆಯ ಪ್ರಕಾರ, ಮೂರು ವರ್ಷಗಳ ನಂತರ, ಅದನ್ನು ಸರಿಪಡಿಸಲಾಗುವುದು. ಈ ಮಸೂದೆಯನ್ನು ತಿದ್ದುಪಡಿ ಮಾಡ ಬಯಸುವವರ ಮುಖ್ಯ ಗುರಿ ಎಕೆಂದರೆ, ನಿರ್ಣಹಣೆ ಮತ್ತು ಕಾರ್ಯಾಚರಣೆಯ ವಿಷಯವು ಮೈಸೂರು ಸರ್ಕಾರವೇ ವಹಿಸಿಕೊಳ್ಳಬೇಕು. ಬಳ್ಳಾರಿಯು, ಮೈಸೂರು ರಾಜ್ಯದ ಭಾಗವಾಗಿರುವುದರಿಂದ, ತಿದ್ದುಪಡಿಯನ್ನು ಬಯಸುವ ಸದಸ್ಯರ ಪ್ರಕಾರ, ನಿರ್ವಹಣೆಯ ಪ್ರಶ್ನೆಯು, ಸಂಪೂರ್ಣ ಮೈಸೂರು ರಾಜ್ಯಕ್ಕೆ ತೀರ್ಮಾನಿಸಲು ಬಿಡಬೇಕು. ಈ ಅಶ್ವಾಸನೆಯ ಪ್ರಕಾರ, ಮಾನ್ಯ ಸದಸ್ಯರು ತಮ್ಮ ತಿದ್ದುಪಡಿ ವಾಪಸ್ಸು ತಗೆದುಕೊಳ್ಳಬೇಕು.

## 19: ಮೈಸೂರು ಗ್ರಾಮ ಪಂಚಾಯತಿ ಮತ್ತು ಜಿಲ್ಲಾ ಬೋರ್ಡ್ (ತಿದ್ದುಪಡಿ) ಮಸೂದೆ 1954 ಕುರಿತು ಶ್ರೀ ಕಡಿದಾಳ ಮಂಜಪ್ಪನವರ ಹೇಳಿಕೆಗಳು ಜನವರಿ 20, 1954.

ಶ್ರೀ ಕಡಿದಾಳ ಮಂಜಪ್ಪ :

ಶಾಸನ ಸಭಾ ಸದಸ್ಯರ ಮೂಲಕ ವಿಷಯಗಳನ್ನು ತಿಳಿದುಕೊಳ್ಳಬಹುದು. ಮಂತ್ರಿಗಳು ಸಂಚಾರ ಹೋದಾಗ ದೇಶದ ನಾನಾ ಕಡೆಗಳಿಂದ ಈ ಬಗ್ಗೆ ಜನರ ಅಭಿಪ್ರಾಯವೇನೆಂಬುದನ್ನು ತಿಳಿದುಕೊಳ್ಳಬಹುದು. ವರ್ತಮಾನ ಪತ್ರಿಕೆಗಳಲ್ಲಿ ಬರತಕ್ಕ ಪ್ರಕಟಣೆಗಳಿಂದ ತಿಳಿದುಕೊಳ್ಳಬಹುದು. ಹೀಗೆ ಒಂದೇ ಮಾರ್ಗವಲ್ಲ. ಮಂತ್ರಿಗಳಿಗೆ ವಿಚಾರಗಳನ್ನು ತಿಳಿದುಕೊಳ್ಳಲು ನಾನಾ ಮಾರ್ಗಗಳಲ್ಲಿ ಅವಕಾಶವಿದೆ.

ಆದರೆ ಈಗ ಈ ಬಿಲ್ಲಿನ ವಿಚಾರವಾಗಿಯೇ ಹೇಳುವುದಾದರೆ ಸಾರ್ವಜನಿಕರಿಂದ ಬಂದಿದ್ದಂಥ ಅನೇಕ ಅಭಿಪ್ರಾಯಗಳನ್ನು ನಾವು ಮೂಲೆಗೊತ್ತಿ ಸುಮಾರು ಒಂದೂವರೆ ವರ್ಷದ ಮೇಲಾಗುತ್ತದೆ. and we had with stood the public opinion for over one half years. Iknow which it is. ಸಾರ್ವಜನಿಕರ ಅಭಿಪ್ರಾಯವೂ ಮತ್ತು ಶಾಸನ ಸಭಾ ಸದಸ್ಯರುಗಳ ಎಂದರೆ ಕೆಳಮನೆಯ ಮತ್ತು ಈ ಸಭೆಯ ಸದಸ್ಯರುಗಳ ಅಭಿಪ್ರಾಯಗಳೂ ಈ ಸಂಬಂಧವಾಗಿ ಯಾವ ರೀತಿಯಾಗಿದ್ದವು ಎಂಬುದು ತಮಗೂ, ನಮಗೂ ಎಲ್ಲರಿಗೂ ಗೊತ್ತೇ ಇದೆ. ಈ ಮನೆಯ ಮತ್ತು ಕೆಳಮನೆಯ ಸದಸ್ಯರುಗಳಲ್ಲಿ ಶೇಕಡ 90 ರಷ್ಟು ಮಂದಿ ಸದಸ್ಯರುಗಳು "ಈ ಜಿಲ್ಲಾ ಬೋರ್ಡುಗಳು ಬಹಳ ವರ್ಷದಿಂದಲೂ ಕೆಲಸ ಮಾಡುತ್ತಿದೆ, ಇವುಗಳು ತಮ್ಮ ಪ್ರಾತಿನಿಧ್ಯವನ್ನು ಕಳೆದುಕೊಂಡಿರುವುದರಿಂದ ಇವುಗಳು ತಮ್ಮ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಆಗುವುದಿಲ್ಲ" ಎಂದು ಹೇಳಿದ್ದಾರೆ.

Sri Revanna or somebody else referred to the conflict in the party and said that there is no unity. ನಾನು ಧೈರ್ಯವಾಗಿ ಹೇಳಬಲ್ಲೆ, ಈ ಮಸೂದೆಯ ವಿಚಾರದಲ್ಲಿ ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ.

1949ನೆಯ ಇಸವಿಯಲ್ಲಿ ಶ್ರೀಮಾನ್ ವೆಂಕಟಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿ ರಚಿತವಾಯಿತು. 1950ನೆಯ ಇಸವಿಯಲ್ಲಿ ಆ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೊಪ್ಪಿಸಿದರು. ಆ ವರದಿಗನುಸಾರವಾಗಿ ಒಂದು ಮಸೂದೆ ರಚನೆಯಾಯಿತು. ಅದರ ಪ್ರಕಾರ ಈಗಿರತಕ್ಕ 1952ನೆಯ ಡಿಸ್ಟಿಕ್ಟ್ ಬೋರ್ಡ್ ಆ್ಯಕ್ಟು ಜಾರಿಗೆ ಬಂದಿತು. ಇದು ಜಾರಿಗೆ ಬಂದುದು 1952ರ ಫೆಬ್ರವರಿ ತಿಂಗಳಿನಲ್ಲಿ. ಈ ಆ್ಯಕ್ಟು ಜಾರಿಗೆ ಬಂದ ತರುವಾಯ ಆ ಆ್ಯಕ್ಟಿಗನುಸಾರವಾಗಿ ಗ್ರಾಮ ಪಂಚಾಯಿತಿಗಳನ್ನು ರಚನೆಮಾಡುವುದಕ್ಕೆ ಸರ್ಕಾರದವರು ಪ್ರಯತ್ನಪಟ್ಟರು. ಆ ಬಗ್ಗೆ ಎಲ್ಲಾ ಕಾರ್ಯಕ್ರಮಗಳನ್ನೂ ಸರ್ಕಾರದವರು ತೆಗೆದುಕೊಂಡರು. ಆಗ ದೇಶದ ನಾನಾ ಕಡೆಗಳಿಂದ ಪ್ರತಿಭಟನೆಗಳು ಬರುವುದಕ್ಕೆ ಷುರುವಾಯಿತು. ಗ್ರೂಪ್ .ಪಂಚಾಯಿತಿಗಳಿರುವುದು ಅನಾವಶ್ಯಕ, ಮೊದಲಿದ್ದ ಹಾಗೆ ಒಂದೊಂದು ಹಳ್ಳಿಗೆ ಒಂದೊಂದು

ಪಂಚಾಯಿತಿಯಿರಬೇಕಾದ್ದು ಅಗತ್ಯ ಎಂಬವಾದ ಪ್ರಾರಂಭವಾಯಿತು. ಈ ವಾದಕ್ಕನುಸಾರವಾಗಿ, ಪ್ರಜಾಭಿಪ್ರಾಯಕ್ಕನುಗುಣವಾಗಿ ಈ ಆ್ಯಕ್ಟನ್ನು ತಿದ್ದುಪಡಿ ಮಾಡಬೇಕೆಂದು ಮಸೂದೆ ಬಂದದ್ದೂ ಮಾನ್ಯ ಸದಸ್ಯರಿಗೆ ನೆನಪಿನಲ್ಲಿರಬಹುದು. ಆ ಆ್ಯಕ್ಟು ತಿದ್ದುಪಡಿಯಾದನಂತರ ಚುನಾವಣೆ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೆವು. ಅಷ್ಟು ಹೊತ್ತಿಗೆ ಶಾಸನ ಸಭಾ ಸದಸ್ಯರಲ್ಲಿ ಚುನಾವಣೆಯ ಕ್ರಮದ ವಿಚಾರದಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು.

ಭಿನ್ನಾಭಿಪ್ರಾಯಗಳಿರುವುದು ಸ್ವಾಭಾವಿಕ. ನಿಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯವಿಲ್ಲವೆ? ಅದನ್ನು ದೊಡ್ಡದು ಮಾಡಬೇಕಾಗಿಲ್ಲ. ಅಂದಮಾತ್ರಕ್ಕೆ ನಮ್ಮ ಪಕ್ಷದಲ್ಲೇ ಭಿನ್ನಾಭಿಪ್ರಾಯವಿದೆಯೆಂದು ಭಾವಿಸಕೂಡದು. ಯಾವ ಪಕ್ಷದಲ್ಲಿಯೇ ಆಗಲಿ - ನಮ್ಮ ಪಕ್ಷವೇ ಆಗಲಿ, ತಮ್ಮ ಪಕ್ಷವೇ ಆಗಲಿ- ನಾವು ಸರ್ಕಾರ ನಡೆಸತಕ್ಕವರಾಗಿರುವಾಗ ನಮ್ಮ ಪಕ್ಷದವರು ಬಹು ಮಂದಿ ಜಿಲ್ಲಾ ಬೋರ್ಡುಗಳು ಇರಬಾರದು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿರುವಾಗ.

ಛೇರಮನ್ You were telling about direct and indirect elections.

ಶ್ರೀ ಕಡಿದಾಳ ಮಂಜಪ್ಪ:- ಇಲ್ಲಿ ಅಪ್ರತ್ಯಕ್ಷವಾದ ಚುನಾವಣೆ ಬೇಕಾಗಿಲ್ಲ; ಪ್ರತ್ಯಕ್ಷವಾದ ಚುನಾವಣೆ ಬೇಕೆಂದು ಶಾಸನ ಸಭೆಯ ಬಹುಮಂದಿ ಸದಸ್ಯರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಛೇರಮನ್ **Why do you say** "ಶಾಸನ ಸಭೆಯ ಸದಸ್ಯರು"

say, there is difference of opinion in the public.

ಶ್ರೀ ಕಡಿದಾಳ ಮಂಜಪ್ಪನವರು :- Yes, in the public.

ಅದಕ್ಕನುಗುಣವಾಗಿ ಒಂದು ಮಸೂದೆಯನ್ನು ಕೂಡ ತಯಾರು ಮಾಡಿದೆವು. ಅಷ್ಟು ಹೊತ್ತಿಗೆ ಮದ್ರಾಸಿನಲ್ಲಿ ಜಿಲ್ಲಾಬೋರ್ಡುಗಳಿರುವುದಕ್ಕಿಂತ ತಾಲ್ಲೂಕು ಬೋರ್ಡುಗಳಿರುವುದೇ ವಾಸಿಯೆಂಬ ಒಂದು ಅಭಿಪ್ರಾಯ ವ್ಯಕ್ತಪಟ್ಟಿತು. ಇಲ್ಲಿಯೂ ಕೂಡ ಅವರ ಗಾಳಿ ಬೀಸಿತು. ಸಾರ್ವಜನಿಕ ಅಭಿಪ್ರಾಯ ತಾಲ್ಲೂಕು ಬೋರ್ಡುಗಳ ಕಡೆಗೆ ಸ್ವಲ್ಪ ವಾಲಿದ ಹಾಗೆ ತೋರಿತು. ಆದ್ದರಿಂದ ತಾಲ್ಲೂಕು ಬೋರ್ಡ್‌ಗಳಿರಬೇಕೇ ಜಿಲ್ಲಾ ಬೋರ್ಡ್‌ಗಳಿರಬೇಕೇ ಎಂಬುದರ ಬಗ್ಗೆ ಭಿನ್ನಾಭಿಪ್ರಾಯ ವಿರುವಾಗ ಚುನಾವಣೆ ನಡೆಸುವುದು ಸೂಕ್ತವೇ ಎಂಬುದನ್ನು ಮಾನ್ಯ ಸದಸ್ಯರೇ ಯೋಚನೆ ಮಾಡಬಹುದು.

ಶ್ರೀ ಟಿ.ಎನ್.ಕೆಂಪಹೊನ್ನಯ್ಯ - ಆದರೂ ಆ ಆ್ಯಕ್ಟ್ ಜಾರಿಗೆ ಬಂದಾಗ ಆ ರೀತಿಯೇ ಮಾಡಬಾರದು.

ಶ್ರೀ ಕಡಿದಾಳ ಮಂಜಪ್ಪ: - ನಮ್ಮದು ಸಾರ್ವಜನಿಕ ಹಣ. ಅಷ್ಟು ಸುಲಭವಾಗಿ ಖರ್ಚುಮಾಡಬಾರದು.

ಛೇರಮನ್:- Elections will cost a few lakhs of rupees and the district boards have functioned so well that many people have risen in the taluks and are aspiring for a hand in the administration.

ಶ್ರೀ **ಕಡಿದಾಳ** ಮಂಜಪ್ಪ:- Perhaps I cannot definitely say.

ಹೀಗಾಗಿ, ಈ ಕಾರಣಗಳಿಂದ ಚುನಾವಣೆಗಳನ್ನು ನಡೆಸುವುದಕ್ಕೆ ಸರ್ಕಾರದವರಿಗೆ ಕಷ್ಟವಾಯಿತು. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚಿನ ಟೀಕೆ ಟಿಪ್ಪಣಿಗಳನ್ನು ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ಹೇಳಬೇಕಾಗಿದೆ. ಮಾನ್ಯ ಸದಸ್ಯರು ಕೆಲವರು ಮಾತನಾಡಬೇಕಾದರೆ, ಈ ಸರ್ಕಾರ ತಾನು ಮಾಡಿದ ಕಾನೂನನ್ನು ತಾನೇ ಉಲ್ಲಂಘಿಸಬೇಕೆಂಬ ನೀತಿಯನ್ನು ಅವಲಂಬಿಸಿದೆಯೆಂದು ಹೇಳಿದರು. 1952ನೆಯ ಇಸವಿಯ ಆ್ಯಕ್ಟು ಜಾರಿಗೆ ಬಂದನಂತರ ಅದರಂತೆ ನಡೆದುಕೊಳ್ಳ ಬೇಕಾದದ್ದು ಸರ್ಕಾರದ ಕರ್ತವ್ಯವೇನೋ ಸರಿ. ಆದರೆ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗಿ ವರ್ತಿಸಿದ್ದಾರೆಂದು ಆ ಕಡೆಯ ಸದಸ್ಯರೇ ಹೇಳಬಹುದು. ಆದ್ದರಿಂದ ಪ್ರಜಾಪ್ರಭುತ್ವ ನೀತಿಗೆ ಅನುಸಾರವಾಗಿ ಈ ಮಸೂದೆಯನ್ನು ತಮ್ಮ ಮುಂದಿಟ್ಟಿದ್ದೇವೆ.

**ಒಬ್ಬ ಸದಸ್ಯರು : ಹೇಗೆ ?**

ಶ್ರೀ **ಕಡಿದಾಳ** ಮಂಜಪ್ಪನವರು :- ಹೇಗೆಂದರೆ, ಹೀಗೊಂದು ಕಾನೂನು ತರಬೇಕೆಂದು ಮನಸ್ಸು ಮಾಡಿದೆ. ಸರ್ವಾಧಿಕಾರದ ಮನೋಭಾವವನ್ನು ತಾಳಿದ್ದರೆ ಈ ಮಸೂದೆ ತಮ್ಮ ಮುಂದೆ ಬರುತ್ತಿರಲಿಲ್ಲ. ಇದೇ ಕುರುಹು, ಪ್ರಜಾಪ್ರಭುತ್ವ ನೀತಿಯನ್ನನುಸರಿಸುತ್ತಿದ್ದೇವೆ ಎನ್ನುವುದಕ್ಕೆ, ಈ ಘುಸೂದೆಯನ್ನು ತಮ್ಮ ಮುಂದೆ ತಂದಿರುವುದೇ ಒಂದು ಸಾಕ್ಷಿ. ಆದ್ದರಿಂದ ಪ್ರಜಾಪ್ರಭುತ್ವ ತತ್ವ, ಟ್ರೆಡಿಷನ್, ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ - ಇತ್ಯಾದಿ ಇತ್ಯಾದಿ ತಾವು ಏನೇನು ಹೇಳುತ್ತಿದ್ದೀರೋ ಅದಕ್ಕೆಲ್ಲಾ ಒಂದೇ ಉತ್ತರ ಏನೆಂದರೆ, ನಾವು ಸಾರ್ವಜನಿಕ ಅಭಿಪ್ರಾಯಕ್ಕನುಸಾರವಾಗಿ ಈ ಮಸೂದೆಯನ್ನು ತಮ್ಮ ಮುಂದಿಟ್ಟಿದ್ದೇವೆ. ಅಲ್ಲದೆ ಕೆಳಸಭೆಯ ಅನುಮತಿಯನ್ನು ಕೂಡ ಇದು ಪಡೆದಿದೆ.

ಆಮೇಲೆ, ಸರ್ಕಾರದವರು ತಮ್ಮ ಅಧಿಕಾರವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಈ ಮಸೂದೆಯನ್ನು ತಂದಿದ್ದಾರೆ ಎಂದು ಒಂದು ವಾದ ಬಂತು. ಸರ್ಕಾರದವರಿಗೆ ಈಗಾಗಲೇ ಬೇಕಾದಷ್ಟು ಕೆಲಸವಿದೆ. If I may say so, most of us are over- worked.

**ಛೇರಮನ್** It is obvious. The very sight of the Hon'ble Minister shows that he is over - worked. (Laughter).

ಶ್ರೀ **ಕಡಿವಾಳ** ಮಂಜಪ್ಪ ಅಲ್ಲದೇ, ಅಲ್ಲಿ powers ಇರುವುದೂ ಅಷ್ಟೇ ಇದೆ. ಮಾನ್ಯ ಸದಸ್ಯರುಗಳನೇಕರು ಹೇಳುತ್ತಿರುವುದನ್ನು ತಾವೇ ಕೇಳಿದ್ದೀರಿ; ಜಿಲ್ಲಾ ಬೋರ್ಡುಗಳಲ್ಲಿ ಹಣವಿಲ್ಲ. ಸಾಕಷ್ಟು ವ್ಯವಸ್ಥೆಯಿಲ್ಲ. ಸಿಬ್ಬಂದಿಯಿಲ್ಲ ಎಂದು ಅನೇಕ ಸಂದರ್ಭಗಳಲ್ಲಿ ಸದಸ್ಯರುಗಳು ಹೇಳಿದ್ದಾರೆ. ಬಹುಶ: ಈಗ ಮರೆತು ಹೋಗಿದೆ.

ಶ್ರೀ. ಟಿ. ಎನ್. ಕೆಂಪಹೊನ್ನಯ್ಯ :- ಅದನ್ನೆಲ್ಲಾ ತಾವು ಮಾಡಿಕೊಡುತ್ತೀರಾ, ಈಗ ?

ಶ್ರೀ **ಕಡಿವಾಳ** ಮಂಜಪ್ಪ :- ಇದು ತಾತ್ಕಾಲಿಕವಾದ ಒಂದು ವ್ಯವಸ್ಥೆ. ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಬೇಕೆಂದು ಲವಲೇಶವೂ ನಮ್ಮ ಮನಸ್ಸಿನಲ್ಲಿಲ್ಲ. ನಮ್ಮ ಸಂಪೂರ್ಣ ಇಷ್ಟವಿಲ್ಲದೆ ಈ ಒಂದು ಕಾರ್ಯನೀತಿಯನ್ನು ಅನುಸರಿಸಬೇಕಾಗಿ ಬಂತೆಂದು ಇದುವರೆಗೆ ನಾನು ಹೇಳಿರುವುದರಿಂದ ತಾವು ತಿಳಿದುಕೊಳ್ಳಬಹುದು. ಇದು ಬಹುಶ: ಒಂದು ವರ್ಷ ಕಾಲದಲ್ಲಿ ಸುಮಾರು ಒಂದು ವರ್ಷದಲ್ಲಿ,......

ಒಬ್ಬ ಸದಸ್ಯರು ಒಂದು ವರ್ಷ, ಇದು;;

**ಶ್ರೀ ಕಡಿದಾಳ** ಮಂಜಪ್ಪ That is the maximum limit I put.

ಸುಮಾರು ಒಂದು ವರ್ಷಕಾಲ ಇದು ಇರಬಹುದೆಂದು ಹೇಳಿದ್ದೇನೆ. ಮೊದಲೇ ಹೆಚ್ಚು ಹೇಳಿಬಿಟ್ಟರೆ ಒಳ್ಳೆಯದು. ಅದಕ್ಕಿಂತಲೂ ಕಡಿಮೆ ಕಾಲದಲ್ಲಿಯೇ ಆದರೂ ಆಗಬಹುದು. ಶ್ರೀಮಾನ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟಿರುವ ಈ ಸಮಿತಿ ಆದಷ್ಟು ಜಾಗ್ರತೆ ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸುತ್ತಾರೆಂದು ನಂಬಿದ್ದೇನೆ. ಏಕೆಂದರೆ Questionnaire ಮುಂತಾದವುಗಳನ್ನು ಕಳುಹಿಸಿ ವಿವರಗಳನ್ನೇನೂ ಸಂಗ್ರಹಿಸಬೇಕಾಗಿಲ್ಲ. ಬೇಕಾದಷ್ಟು ಸಾಹಿತ್ಯವಿದೆ. ಈ ಸಾಹಿತ್ಯವನ್ನು ಉಪಯೋಗಿಸಿಕೊಂಡೇ ಅವರ ವರದಿಯನ್ನು ಕಳುಹಿಸಿದರೆ ಸಾಕು. ಆದ್ದರಿಂದ ಅದು ಆದಷ್ಟು ಜಾಗ್ರತೆ ಬರುವುದಕ್ಕೆ ಏರ್ಪಾಡು ಮಾಡುತ್ತೇನೆ.

ಕಾಂಗ್ರೆಸ್ ವ್ಯಕ್ತಿಗಳನ್ನು ಸಮಿತಿಗಳಲ್ಲಿ ತಂದುಕೂಡಿಸುವುದಕ್ಕೆ ಈಹಂಬಿಕೆ ಹಿಡಿದಿದ್ದಾರೆಂದು ಅಪಾದನೆ ಮಾಡಿದರು. ಈಗಿರತಕ್ಕ ಜಿಲ್ಲಾ ಬೋರ್ಡುಗಳಲ್ಲಿ ಶೇಕಡ 60 ರಷ್ಟು ಸದಸ್ಯರು ಕಾಂಗ್ರೆಸ್‌ನವರೆಂಬುದನ್ನು ಅವರು ಮರೆಯಬಾರದು. ಇದಕ್ಕಿಂತಲೂ ಜಾಸ್ತಿಯೇ ಇದ್ದಾರೆ. ಆದುದರಿಂದ ಅಲ್ಲಿನತಕ್ಕ ನಮ್ಮ ಕಾಂಗ್ರೆಸ್ ಸದಸ್ಯರನ್ನು ಹೊರದೂಡಿ ಹೊಸಬರನ್ನು ತರುವುದಕ್ಕೆ ಪ್ರಯತ್ನ ಮಾಡಿಲ್ಲವೆಂದು ಆತ್ಮಪೂರ್ವಕವಾಗಿ, ಪುನಃಪೂರ್ವಕವಾಗಿ ಹೇಳುತ್ತೇನೆ. ಆಮೇಲೆ, ಹಿಂದೆ ಜಿಲ್ಲಾ ಬೋರ್ಡುಗಳ ಚುನಾವಣಾ ನಡುಸುತ್ತೇವೆಂದು ವಾಗ್ದಾನ ಮಾಡಿದ್ದರು, ಅದಕ್ಕೆ ತಕ್ಕ ಹಾಗೆ ನಡೆದಿಲ್ಲವೆಂದು ಹೇಳಿದರು. ವಾಗ್ದಾನ ಮಾಡಿದ್ದುದು ನಿಜ. ಆದರೆ ಅದನ್ನು ಯಾವ ಕಾರಣದಿಂದ ನಡೆಸುವುದಕ್ಕಾಗಲಿಲ್ಲ ಎಂಬುದನ್ನು ಈಗಾಗಲೇ ತಿಳಿಸಿದ್ದೇನೆ. ಸಾರ್ವಜನಿಕಾಭಿಪ್ರಾಯ ದಿನೇ ದಿನೇ ರೂಪುಗೊಳ್ಳುತ್ತದೆ. ಈ ಹೊತ್ತು ಇರತಕ್ಕ ಅಭಿಪ್ರಾಯ ಇನ್ನು ಕೆಲವು ತಿಂಗಳಲ್ಲಿ ಇರಲಾರದು. ಕಾಲ ಸನ್ನಿವೇಶಗಳಿಗನುಗುಣವಾಗಿ ಸಾರ್ವಜನಿಕರ ಅಭಿಪ್ರಾಯ ಬದಲಾವಣೆಯಾಗುತ್ತಾ ಇರುತ್ತದೆ. ಜಿಲ್ಲಾ ಬೋರ್ಡುಗಳ ವಿಷಯದಲ್ಲಿ ನೋಡಿದರೆ ಸಾರ್ವಜನಿಕಾಭಿಪ್ರಾಯ ಮೊದಲಿನಿಂದಲೂ ಬದಲಾವಣೆ ಯಾಗುತ್ತಾ ಬಂದಿದೆ. ಇದು ಸರ್ಕಾರದ ತಪ್ಪಲ್ಲ. ಪ್ರಜಾಸರ್ಕಾರದ ಕರ್ತವ್ಯ ಪ್ರಜೆಗಳ ಇಂಗಿತವೇನೆಂಬುದನ್ನು ತಿಳಿದು ಅದರಂತೆ ಕೆಲಸ ನಡೆಸಬೇಕು. ಅದರಂತೆ ಈ ದಿವಸ ಮಾಡಿದ್ದೇವೆ.

ಇನ್ನೊಂದು ವಿಷಯವೇನೆಂದರೆ, ."you have condemned the district board presidents" ಆ ರೀತಿಯೇನೂ ಇಲ್ಲ. ಇದನ್ನು ನಿನ್ನೆಯ ದಿವಸ ಸ್ಪಷ್ಟವಾಗಿ ತಿಳಿಸಿದ್ದೇನೆ. ಕೆಲವು ಜಿಲ್ಲಾ ಬೋರ್ಡ್ ಅಧ್ಯಕ್ಷರುಗಳು ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಅಭಿನಂದನೆಗಳನ್ನು ಕೂಡ ಸಲ್ಲಿಸಿದ್ದೇವೆ. ಅದಕ್ಕೆ ನಾವೇನು ಮಾಡುವುದು? ಸಾರ್ವಜನಿಕರ ಅಭಿಪ್ರಾಯ ಜಿಲ್ಲಾ ಬೋರ್ಡುಗಳ ವಿರುದ್ಧವಾಗಿದೆ. ಇಷ್ಟು ಹೇಳಿದನಂತರ ಇನ್ನು ದೀರ್ಘ ಭಾಷಣ ಅನಾವಶ್ಯಕವೆಂದು ನಾನು ತಿಳಿಯುತ್ತೇನೆ.

ಪ್ರಶ್ನೆ ಶ್ರೀ ಟಿ.ಎನ್ ವೆಂಕಟಹೊಣ್ಣಯ್ಯ ವಿಷಯವೇ ಇಲ್ಲದಿರುವಾಗ ದೀರ್ಘ ಭಾಷಣ ಮಾಡುವುದು ಹೇಗೆ ?

**ಉತ್ತರ ಶ್ರೀ ಕಡಿದಾಳ ಮಂಜಪ್ಪ** ಸರ್ಕಾರಕ್ಕೆ ತಮ್ಮಲ್ಲೇ ಅಧಿಕಾರವನ್ನು ಕೇಂದ್ರೀಕರಿಸಿಕೊಳ್ಳಬೇಕೆಂಬ ಭಾವನೆ ಇದ್ದಿದ್ದರೆ ಅಥವಾ ತಮ್ಮ ಪಕ್ಷದ ಜನರಿಗೇ ಕೆಲಸಗಳನ್ನೂ ಸ್ಥಾನಗಳನ್ನೂ ಗಳಿಸಿಕೊಳ್ಳುವ ಉದ್ದೇಶವಿದ್ದಿದ್ದರೆ ಅವರು ಅಧಿಕಾರಕ್ಕೆ ಬಂದ ಕೂಡಲೇ ಒಂದು ಆರ್ಡಿನೆನ್ಸ್ ಮಾಡಿ ಈಗ ತಂದಿರತಕ್ಕ ಮಸೂದೆಯನ್ನು ತರುತ್ತಿದ್ದರು. 1952ನೆಯ ಇಸವಿಯಿಂದ ಸರ್ಕಾರದವರು ಅನುಸರಿಸುತ್ತಿರುವ ನೀತಿಯನ್ನೂ ಕಾರ್ಯಕ್ರಮಗಳನ್ನೂ ವಿಮರ್ಶೆಮಾಡಿದರೆ ಸರ್ಕಾರಕ್ಕೆ ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿ ಅಧಿಕಾರವನ್ನು ತಾವೇ ತೆಗೆದುಕೊಳ್ಳಬೇಕೆಂಬ ಅಧಿಕಾರ ಲಾಲಸೆಯಿಲ್ಲವೆಂಬುದು ಸ್ಪಷ್ಟವಾಗುತ್ತದೆ.

**ಪ್ರಶ್ನೆ : ಶ್ರೀ ಆರ್. ಪಿ. ೀರಪ್ಪ** ಈಗ ಬಂದಿದೆ.

**ಉತ್ತರ : ಶ್ರೀ ಕಡಿದಾಳ ಮಂಜಪ್ಪ** ಬಂದೂ ಇಲ್ಲ, ಮುಂದೆ ಬರುವುದೂ ಇಲ್ಲ. ಇನ್ನೊಂದು ಮಾತು, ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಸ್ಥಳೀಯ ಸಂಸ್ಥೆಗಳಿಗೆ ಈಗಿಗಿಂತ ಹೆಚ್ಚಿನ ಪ್ರಾಮುಖ್ಯತೆಯಿತ್ತು. ಬ್ರಿಟಿಷರು ನಮ್ಮನ್ನಾಳುತ್ತಿದ್ದಾಗ ಪ್ರಜಾಪ್ರಭುತ್ವ ಸ್ವಲ್ಪಮಟ್ಟಿಗೆ ಜಾರಿಯಲ್ಲಿದ್ದುದು ಸಳೀಯ ಸಂಸ್ಥೆಗಳಲ್ಲಿ. ಆದುದರಿಂದ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಲಾಗಿತ್ತು. ಅಲ್ಲೇ democratic traditions ಬೆಳೆಯುವುದೆಂಬ ಉದ್ದೇಶದಿಂದ ಹಾಗಿತ್ತು. ಸ್ವಾತಂತ್ರ್ಯ ಬಂದನಂತರ ಸಾರ್ವಜನಿಕರ ಪ್ರತಿನಿಧಿಗಳಾದ ತಮ್ಮ ಕೈಗೇ ಸರ್ಕಾರದ ಆಡಳಿತ ಬಂದನಂತರ ಸ್ಥಳೀಯ ಸಂಸ್ಥೆಗಳಿಗೆ ಇದ್ದ ಪ್ರಾಮುಖ್ಯತೆ ಕಡಿಮೆಯಾಯಿತು. ಈ ಜಿಲ್ಲಾ ಬೋರ್ಡುಗಳಿಗಿಂತ ತಾವು ಸಾರ್ವಜನಿಕರ ಪ್ರತಿನಿಧಿಗಳೆಂದು ಧೈರ್ಯವಾಗಿ ಹೇಳುತ್ತೇನೆ. ಸ್ಥಳೀಯ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ ತತ್ವ ಅನುಷ್ಠಾನದಲ್ಲಿರುವುದು ನಿಜ. ಆದರೆ ನ್ಯಾಯವಾಗಿ ನಿಜವಾಗಿಯೂ ಪ್ರಜಾಪ್ರಭುತ್ವ ಅನುಷ್ಠಾನದಲ್ಲಿ ಜಾರಿಯಲ್ಲಿ ಇರುವುದು ಸರ್ಕಾರದಲ್ಲಿ. ನಾನು ಮೊದಲೇ ಹೇಳಿದಹಾಗೆ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡತಕ್ಕ ವ್ಯವಸ್ಥೆ ಬಹಳ ತಾತ್ಕಲಿಕವಾದುದು. ಈ ಅಧಿಕಾರಿಗಳು- ಅವರು ಜಿಲ್ಲಾಧಿಕಾರಿಗಳಾಗಿರಲಿ, ಯಾರೇ ಆಗಿರಲಿ - ಸರ್ಕಾರದ ಕೈಕೆಳಗೆ ಕೆಲಸ ಮಾಡುವವರು. ಒಂದೊಂದು ಜಿಲ್ಲೆಯಲ್ಲಿಯೂ ಡೆಪ್ಯೂಟಿ ಕಮೀಷನರು, ಎಗ್ಸಿಕ್ಯುಟಿವ್ ಇಂಜಿನಿಯರು ಮುಂತಾದ ಅಧಿಕಾರಿಗಳಿಗೆ ಆಯಾ ಇಲಾಖೆಗೆ ಸಂಬಂಧಪಟ್ಟಂತಹ ಕೆಲಸಕಾರ್ಯಗಳ ಜವಾಬ್ದಾರಿಯನ್ನು ವಹಿಸಿದ್ದೇವೆ. ಹೀಗಿರುವಾಗ ಒಂಭತ್ತು ತಿಂಗಳು ಅಥವಾ ಒಂದು ವರ್ಷಕಾಲ ಜಿಲ್ಲಾ ಬೋರ್ಡುಗಳ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿದರೆ ಏನು ಅನಾಹುತವಾಗುತ್ತದೆ ?

**ಪ್ರಶ್ನೆ : ಶ್ರೀ ಎಸ್. ಪಿ. ಗೋವಿಂದಗೌಡ** ಖಾಯಂ ಆಗಿ ವಹಿಸಿದರೂ ಏನೂ ಅನಾಹುತವಾಗುವುದಿಲ್ಲ.

**ಉತ್ತರ : ಶ್ರೀ ಕಡಿದಾಳ ಮಂಜಪ್ಪ :** ಆ ಪ್ರಶ್ನೆಯಿಲ್ಲ. ಪ್ರಜೆಗಳಿಂದ ಚುನಾಯಿತರಾಗಿರುವವರು ಅವರ ಮೇಲಿದ್ದಾರೆಂಬುದನ್ನು ಮಾನ್ಯ ಸದಸ್ಯರು ಮರೆಯಬಾರದು.

ಕೊನೆಯದಾಗಿ ಇನ್ನೊಂದು ಮಾತು. ಯಾವ ಅಧಿಕಾರಕ್ಕೇ ಆಗಲಿ ಒಂದು ಅವಧಿ ಇದೆ. ಈಗ ನಾನು ಮಂತ್ರಿಯಾಗಿದ್ದೇನೆ. ಐದು ವರ್ಷದ ನಂತರವೂ ನಾನು ಇಲ್ಲೇ ಇರುತ್ತೇನೆಂದು ಹೇಳಿದರೆ, ಆಗ ಆಗಿರುವದಕ್ಕೆ ನನಗೆ ಅಧಿಕಾರವಿಲ್ಲ. ಪುನ: ಚುನಾಯಿತನಾಗಿ ಬರಬೇಕೆಂದು ತಾವೇ ಹೇಳುತ್ತೀರಿ...

ಶ್ರೀ ಆರ್. ಪಿ. ರೇವಣ್ಣ ನಾವು ಹೇಳುವುದಿಲ್ಲ.

**ಶ್ರೀ ಕಡಿದಾಳ ಮಂಜಪ್ಪ** : ತಮ್ಮಲ್ಲನೇಕರಿಗೆ ನನ್ನಲ್ಲಿ ವಿಶ್ವಾಸವಿದೆ. ಆದರೂ ಐದು ವರ್ಷದನಂತರ ನಾನು ಕುಳಿತರೆ, ಬೇಡವೆಂದು ತಾವೇ ಹೇಳುತ್ತೀರಿ; ಚುನಾವಣೆಯಾಗಿ ಬರಬೇಕಾಗುತ್ತದೆ. ಹಾಗೆ ಜಿಲ್ಲಾ ಬೋರ್ಡು ಎಷ್ಟೇ ಒಳ್ಳೆಯದಾಗಿರಲಿ, ಸಾರ್ವಜನಿಕರ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಕಾಲಕ್ಕೆ ಸರಿಯಾಗಿ ವರ್ತಿಸುವುದು ಅವಶ್ಯಕವೆಂದು ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿದುದರಿಂದ ಸಮಾಧಾನ ಹೊಂದುತ್ತಾರೆಂದು ಭಾವಿಸಿದ್ದೇನೆ. ಈ ಮಸೂದೆಗೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಧಾರ - ವಿಧಾನಮಂಡಲದ ನಡುವಳಿಕೆಗಳು.

## ಭಾ ಗ - 3

# ರಾಜ್ಯದ ಮುಖ್ಯಮಂತ್ರಿಗಳಾಗಿ

# ಭಾಗ - 3

## (ರಾಜ್ಯದ ಮುಖ್ಯಮಂತ್ರಿಯಾಗಿ.)

1. 1956(ಸೆಪ್ಟೆಂಬರ್, 20)

ವಿಷಯ : ಶ್ರೀ ಕೆ.ಟಿ. ಭಾಷಂ ಅವರ ನಿಧನದ ನಂತರ ಸಂತಾಪ ಸೂಚಕ ನಿರ್ಣಯದ ಮೇಲೆ ಭಾಷಣ.

2. 1956 (ಸೆಂಪ್ಟೆಂಬರ್, 22)

ವಿಷಯ : ಮೈಸೂರು ರಜಿಸ್ಟ್ರಾರ್ ಜನರಲ್ (ಜನನ, ಮರಣ ಮತ್ತು ವಿವಾಹಗಳು ವಸೂದೆ 1956 ನಿಲುವಳಿಯ ಮಂಡನೆಯ ಮೇಲಿನ ಸ್ಪಷ್ಟೀಕರಣ.

3. 1956 (ಸೆಪ್ಟೆಂಬರ್, 26)

ವಿಷಯ : ಸಂವಿಧಾನದ (7ನೇ ತಿದ್ದುಪಡಿ) ಮಸೂದೆ 1956 ಕುರಿತು ಅಧಿಕೃತ ನಿರ್ಣಯದ ಬಗ್ಗೆ ಸ್ಪಷ್ಟೀಕರಣ.

4. 1956 (ಸೆಪ್ಟೆಂಬರ್, 27)

ವಿಷಯ : ಜೋನಲ್ ವಿಭಾಗಗಳ ಕುರಿತು ಸ್ಪಷ್ಟೀಕರಣ.

5. 1956 (ಸೆಪ್ಟೆಂಬರ್, 27)

ವಿಷಯ : ಸಂವಿಧಾನದ ಅನುಮೋದನೆ (7ನೇ ತಿದ್ದುಪಡಿ) ಮಸೂದೆ 1956ರ ಸ್ಪಷ್ಟೀಕರಣ.

6. 1956 (ಸೆಪ್ಟೆಂಬರ್, 27)

ವಿಷಯ : ರಾಜ್ಯಗಳ ಪುನರ್ವಿಂಗಡಣೆ ಕುರಿತು ಸ್ಪಷ್ಟೀಕರಣ.

7. 1956 (ಸೆಪ್ಟೆಂಬರ್, 28)

ವಿಷಯ : ಮೈಸೂರು ವಿಧಾನಸಭೆಯ ನೂತನ ಮೈಸೂರು ರಾಜ್ಯ (ಸಿಬ್ಬಂದಿ ವರ್ಗದ ಆಸ್ತಿ ಮತ್ತು ಹೊಣೆಗಳ ಮರು ಹಂಚಿಕೆ) ಬಗ್ಗೆ ಸ್ಪಷ್ಟೀಕರಣ.

8. 1956 (ಅಕ್ಟೋಬರ್, 01)

ವಿಷಯ : ಇತರ ಜಾತಿ ಹಿಂದುಗಳು, (ಸಹಕಾರದ ಸೇವೆಯಲ್ಲಿ ನೇಮಕಾತಿಗಳು) ಕುರಿತು ಪ್ರಶ್ನೋತ್ತರಗಳು.

9. 1956 (ಅಕ್ಟೋಬರ್, 17)

ವಿಷಯ : ಹಣಕಾಸು ವಿಚಾರಣಾ ಸಮಿತಿಯ ವರದಿಯ ಮೇರೆಗೆ ಚರ್ಚೆಗೆ ಸ್ಪಷ್ಟೀಕರಣ.

## 1. ಶ್ರೀ ಕೆ.ಟಿ. ಭಾಷ್ಯಂರ ನಿಧನದ ನಂತರ ಸಂತಾಪ ಸೂಚಕ ನಿರ್ಣಯದ ಮೇಲೆ ಶ್ರೀ ಕಡಿದಾಳ ಮಂಜಪ್ಪನವರ ಭಾಷಣ (ಸೆಪ್ಟೆಂಬರ್ 20, 1956).

ಶ್ರೀ ಕಡಿದಾಳ ಮಂಜಪ್ಪ (ಸಭಾ ನಾಯಕರು ಮತ್ತು ಮುಖ್ಯಮಂತ್ರಿಗಳು)

ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯಿಂದ ಈ ಮಾನ್ಯ ಸಭೆಯ ಮುಂದೆ ಒಂದು ದು:ಖಕರವಾದ ಸೂಚನೆಯನ್ನೊಳಗೊಂಡ ಒಂದು ನಿರ್ಣಯವನ್ನು ಇಡಬೇಕೆಂದು ತೀರ್ಮಾನ ಮಾಡಿಕೊಂಡು ಕೆಲವು ಮಾತುಗಳನ್ನಾಡಲು ನಾನೀಗ ನಿಂತಿದ್ದೇನೆ. ನನ್ನ ನಿರ್ಣಯವು ಈ ರೀತಿಯಾಗಿದೆ :

" This house do stand adjourned as a mark of respect to the memory of shri K.T. Bhashyam, Chairman, Legislative Council, who passed away on the 24th may 1956. This House requests the speaker to convey to the members of the bereaved family its sincere condolencec ".

ಸ್ವಾಮಿ, ದಿವಂಗತ ಶ್ರೀ ಭಾಷ್ಯಂ ಅವರು ಈ ಮಾನ್ಯ ಸಭೆಯ ಸದಸ್ಯರೆಲ್ಲರಿಗೂ ಸ್ನೇಹಿತರಾಗಿದ್ದವರು ಮತ್ತು ನಮ್ಮೆಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದವರು. ಅವರ ನಿಧನದಿಂದ ನಮ್ಮೆಲ್ಲರಿಗೂ ಬಹಳ ದು:ಖವುಂಟಾಗಿದೆ. ಮೈಸೂರಿನ ರಾಜಕೀಯ ಜೀವನದಲ್ಲಿ ಶ್ರೀ ಭಾಷ್ಯಂ ಅವರ ಪಾತ್ರ ಬಹಳ ಅಮೋಘವಾದದ್ದು. ಅವರು ಮಹಾತ್ಮಾ ಗಾಂಧೀಜಿಯವರ ಸಮಕಾಲೀನರಾಗಿದ್ದುದು ಅವರ ಒಂದು ಪುಣ್ಯವೆಂತಲೇ ಹೇಳಬಹುದು. ಅದರಲ್ಲೂ ಅವರು ಗಾಂಧೀಜಿಯವರ ಸಂಗಾತಿಗಳಾಗಿದ್ದುಕೊಂಡು, ಅವರ ಶಿಷ್ಯರಾಗಿ, ಅವರ ಅಜ್ಞೆಯ ಮೇರೆಗೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಕೆಲಸ ಮಾಡಿದುದು ಅವರ ಜೀವನದಲ್ಲಿ ಒಂದು ಅತ್ಯಂತ ಪುಣ್ಯಕರವಾದ ಸಂಗತಿಯೆಂದು ಹೇಳಬಹುದು. ಶ್ರೀ ಭಾಷ್ಯಂ ಅವರದು ಅಂಥ ಒಂದು ಪುಣ್ಯದ ಜೀವನ. ಯಾವೊಂದು ಕಾಲದಲ್ಲಿ ಹಿಂದೆ ಸ್ವದೇಶ- ಸ್ವದೇಶೀ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುವುದು ಒಂದು ದೊಡ್ಡ ಅಪರಾಧವಾಗಿತ್ತೋ ಅಂಥ ಕಾಲದಲ್ಲಿ ಕಾಂಗ್ರೆಸ್ ಸಂದೇಶಗಳನ್ನು ಮೈಸೂರು ದೇಶದಲ್ಲಿ ಸಾರಲು ಶ್ರೀ ಭಾಷ್ಯಂ ಅವರು ಬಹಳ ಪ್ರಭಾವವನ್ನು ಬೀರಿದ್ದರು. ಅವರಲ್ಲಿ ನಾಯಕರಿಗಿರುವಂಥ ಅನೇಕ ಸದ್ಗುಣಗಳಿದ್ದವು. ಅವರು ಜನರನ್ನು ದೇಶದ ಸ್ವಾತಂತ್ರ್ಯಕ್ಕಾಗಿ ಹೊಡೆದೆಬ್ಬಿಸುವ, ಹುರಿದುಂಬಿಸುವ ಚಮತ್ಕಾರವುಳ್ಳಂಥ ವಾಗ್ಮಿಗಳಾಗಿದ್ದರು. ಅವರ ದೇಶ ಸೇವೆಯು ನಾನಾ ಮುಖವಾಗಿತ್ತು. ಇಷ್ಟೇ ಅಲ್ಲದೆ ಅವರು ಒಬ್ಬ ದೊಡ್ಡ ನ್ಯಾಯವಾದಿಗಳೆಂಬ ಹೆಸರನ್ನೂ ಗಳಿಸಿದ್ದರು. ಅವರು ಕಾರ್ಮಿಕರ ಹಿತಸಾಧನೆಗಾಗಿ ಬಹಳವಾಗಿ ದುಡಿದಿದ್ದಾರೆ. ಶಾಸನ ಸಭೆಗಳ ಸದಸ್ಯರಾಗಿ ಹನ್ನೆರಡು ವರ್ಷಗಳ ಕಾಲ ಸತತವಾಗಿ ದುಡಿದಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯ ನ್ಯಾಯಾಂಗ ಮತ್ತು ಕಾರ್ಮಿಕ ಕ್ಷೇತ್ರಗಳ ಮಂತ್ರಿಗಳಾಗಿದ್ದು ಕೊಂಡು ಸಂಸ್ಥಾನಕ್ಕೆ ಬಹಳ ಸೇವೆ ಸಲ್ಲಿಸಿದ್ದಾರೆ. ಮೈಸೂರು ದೇಶದ ಕಾರ್ಮಿಕರು ಶ್ರೀ ಭಾಷ್ಯಂ ಅವರಿಗೆ ಚಿರಋಣಿಗಳಾಗಿರಬೇಕು. ಶ್ರೀ ಭಾಷ್ಯಂ ಅವರ ಮಂತ್ರಿತ್ವದ ಅವಧಿಯಲ್ಲಿ ಕಾರ್ಮಿಕ

ವರ್ಗಕ್ಕೆ ಅನುಕೂಲವಾದಂಥ ಅನೇಕ ಕಾನೂನುಗಳು ಜಾರಿಗೆ ಬಂದವು. ಅವರು ಬಹಳ ಕಾಲ ಕಾರ್ಮಿಕವರ್ಗದ ಮುಖಂಡರಾಗಿದ್ದುಕೊಂಡು ಅವರ ಏಳಿಗೆಗಾಗಿ ಬಹಳ ತೃಪ್ತಿಕರವಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

1940ನೇ ಇಸವಿಯಲ್ಲಿ ನಾನಿನ್ನೂ ಹುಡುಗ. ಆಗ ತಾನೇ ವಕೀಲ ವೃತ್ತಿಯನ್ನು ಅರಂಬಿಸಿದ್ದೆ. ಆಗತಾನೇ ರಾಜಕೀಯ ಜೀವನವನ್ನು ಕೂಡ ಪ್ರಾರಂಭಿಸಿದ್ದೆ. ಶ್ರೀಯುತ ಕೆ.ಟಿ. ಭಾಷ್ಯಂ ಅವರು ಶಿವಮೊಗ್ಗ ಕಾಂಗ್ರೆಸ್ ಅಧಿವೇಶನದಲ್ಲಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾದರು. ಅವರನ್ನು ಮೆರವಣಿಗೆಯಲ್ಲಿ, ಶಿವಮೊಗ್ಗ ನಗರದಲ್ಲಿ ಕರೆದುಕೊಂಡು ಹೋಗಲಾಯಿತು. ಅವರಿಗೆ ದೊರೆತ ಸ್ವಾಗತ ಶಿವಮೊಗ್ಗೆಯಲ್ಲಿ ಯಾವ ವೈಸ್‌ರಾಯ್ ಅಥವಾ ಮಹಾರಾಜರಿಗೂ ಆಗ ದೊರೆತಿರಲಿಲ್ಲ. ಅವರದು ಧೀರವಾಣಿ. ಅವರು ಮಾತನಾಡುತ್ತಿದ್ದ ಕೆಲವು ಶಬ್ದಗಳು ಈಗಲೂ ಕಿವಿಯಲ್ಲಿ ಕೇಳುವಂತೆ ನನಗೆ ತೋರುತ್ತಿದೆ. ಅವರು ಜನರನ್ನು ಬಹಳ ಮುಗುಳನಗೆಯಿಂದ ಮಾತನಾಡಿಸಿ, ಮನಸ್ಸಿಗೆ ನೋವಾಗದಂತೆ ವರ್ತಿಸುತ್ತಿದ್ದರು. ಅವರ ಹತ್ತಿರ ಮನಸ್ಸಿನಲ್ಲಿ ಒಂದು, ಬಾಯಲ್ಲಿ ಇನ್ನೊಂದು, ಕಾರ್ಯತಃ ಮತ್ತೊಂದು, ಈ ರೀತಿಯ ಸ್ವಭಾವವಿರಲಿಲ್ಲ. ಸಿಟ್ಟು ಬಂದರೆ ಯಾವಾಗಲಾದರೂ ರೇಗಿಕೊಳ್ಳುತ್ತಿದ್ದರು. ಆದರೆ ತಕ್ಷಣವೇ ಮರೆತುಬಿಡುತ್ತಿದ್ದರು. ಪುನ: ಬಹಳ ಸ್ನೇಹದಿಂದ ಮಾತನಾಡಿಸುತ್ತಿದ್ದರು. ಇಂಥ ಮಧುರ ಸ್ವಭಾವ ಅವರದು. ಅವರು ನಾನಾ ಕ್ಷೇತ್ರಗಳಲ್ಲಿ ದುಡಿದು ಹೆಚ್ಚಿನ ಜ್ಞಾನ ಮತ್ತು ಅನುಭವವನ್ನು ಸಂಪಾದಿಸಿದ್ದರು. ಅದರಲ್ಲೂ ಆಗಿನ ಕಾಲದಲ್ಲಿ ರಾಜಕೀಯದಲ್ಲಿ ದುಡಿಯುವುದು ಸಲಭವಾದ ಕೆಲಸವಾಗಿರಲಿಲ್ಲ. ಈಗ ಯಾವ ಪಾರ್ಟಿಗೆ ಯಾರು ಬೇಕಾದರೂ ಸುಲಭವಾಗಿ ಸದಸ್ಯರಾಗಬಹುದು; ಮಾತನಾಡಬಹುದು; ಇತರ ಕಾರುಬಾರುಗಳನ್ನು ಮಾಡಬಹುದು. ಆಗಿನ ಕಾಲದಲ್ಲಿ ಕಾಂಗ್ರೆಸ್ ಸದಸ್ಯನಾಗಿ, ಕಾಂಗ್ರೆಸ್ ಪಕ್ಷಕ್ಕೆ ಸೇರುವುದೆಂದರೆ ತ್ಯಾಗವನ್ನು ಸ್ವೀಕಾರ ಮಾಡುವುದು, ತ್ಯಾಗ ಜೀವನಕ್ಕೆ ಸಿದ್ಧನಾಗುವುದು ಎಂದು ಅರ್ಥ. ಆಗಿನ ಕಾಲದಲ್ಲಿ ಹಳೆಯ ಕಾಂಗ್ರೆಸ್ಸಿನವರು ಯಾವ ಪ್ರತಿಫಲದ ಅಪೇಕ್ಷೆಯೂ ಇಲ್ಲದೆ ಕಾಂಗ್ರೆಸ್ ಸಂಸ್ಥೆಗೆ ಸೇರಿ ದೇಶದ ಸ್ವಾತಂತ್ರ್ಯಕ್ಕೋಸ್ಕರ ದುಡಿದರು. ಆ ವ್ಯಕ್ತಿಗಳಲ್ಲಿ ಶ್ರೀಯುತ ಭಾಷ್ಯಂ ಅವರು ಒಬ್ಬರು. ಅಂಥವರ ಅನುಭವ ಮತ್ತು ಅವರ ಜ್ಞಾನ ನಮ್ಮೆಲ್ಲರಿಗೂ ವಿಶೇಷವಾಗಿ ಬೇಕಾಗಿದೆ. ಇಂಥ ಕಾಲದಲ್ಲಿ ಅವರು ನಮ್ಮನ್ನಗಲಿ ಹೋಗಿರುವುದು ನಮ್ಮ ದುರ್ದೈವ. ಅವರ ಆತ್ಮಕ್ಕೆ ಜಗದೀಶ್ವರನು ಶಾಂತಿಯನ್ನೀಯಲಿ, ಮತ್ತು ಅವರ ನಿಧನದಿಂದ ಉಂಟಾದ ವ್ಯಥೆಯನ್ನು ಸಹಿಸಿಕೊಳ್ಳಲು ಶಕ್ತಿಯನ್ನು ಅವರ ಕುಂಟುಂಬ ವರ್ಗದವರಿಗೆ ಭಗವಂತನು ನೀಡಲಿ ಎಂದು ಹಾರೈಸಿ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

## 2. ಮೈಸೂರು ರಜಿಸ್ಟ್ರಾರ್ - ಜನರಲ್-ಜನನ, ಮರಣ ಮತ್ತು ವಿವಾಹಗಳ ಮಸೂದೆ 1956 ಮುಖ್ಯಮಂತ್ರಿಗಳಾಗ ಶ್ರೀ ಕಡಿದಾಳ ಮಂಜಪ್ಪನವರಿಂದ 22ನೇ ಸೆಪ್ಟೆಂಬರ್ 1956.

ಮಾನ್ಯರೆ, ನಿಮ್ಮ ಅಪ್ಪಣೆಯ ಮೇರೆಗೆ, ಮೈಸೂರು ರಜಿಸ್ಟಾರ್-ಜನರಲ್ - ಜನನ, ಮರಣ ಮತ್ತು ವಿವಾಹಗಳ ಮಸೂದೆ, 1956, ವಿಧಾನ ಸಭೆಯಲ್ಲಿ ಅಂಗೀಕರಿಸಿದ್ದನ್ನು, ಈ ಸದನದಲ್ಲಿ ಪರಿಶೀಲಿಸಬೇಕೆಂದು, ನಾನು ಆ ಮಸೂದೆಯನ್ನು ಇಲ್ಲಿ ಮಂಡಿಸುತ್ತೇನೆ :

ಇದೊಂದು ಬಹಳ ಉಪಯುಕ್ತವಾದ ಉಪಾಯ ಅಥವಾ ಕ್ರಮವಾಗಿರುತ್ತದೆ. ಗುರಿಗಳ ಮತ್ತು ಕಾರಣಗಳ ಹೇಳಿಕೆಯ ಪ್ರಕಾರ, ಈ ಕ್ರಮವು ಕೇವಲ ಸರಳವಾಗಿರದೇ ಬಹಳ ಉಪಯುಕ್ತತೆಯದ್ದೂ ಆಗಿದೆ. ಭಾರತೀಯ ಕ್ರಿಶ್ಚನ್ ವಿವಾಹ ಕಾಯ್ದೆ, 1872 (ಕೇಂದ್ರ ಕಾಯ್ದೆ 15ರ 1872) ಪಾರ್ಸಿ ವಿವಾಹ ಮತ್ತು ವಿಚ್ಛೇದನ ಕಾಯ್ದೆ, 1936 (ಕೇಂದ್ರ ಕಾಯ್ದೆ 3ರ 1936), ಮತ್ತು ವಿಶೇಷ ವಿವಾಹ ಕಾಯ್ದೆ 1954 ( ಕೇಂದ್ರ ಕಾಯ್ದೆಯ 43-1954),ಗಳು ಮೈಸೂರು ರಾಜ್ಯದಲ್ಲಿ ಜಾರಿಯಲ್ಲಿ ಬಂದುದರ ಪರಿಣಾಮವಾಗಿ, ವಿವಾಹ ರಜಿಸ್ಟಾರನ್ನು ಈ ರಾಜ್ಯದಲ್ಲಿ, ಆ ಕಾಯ್ದೆಗಳು ಕೆಲವು ಮಾಹಿತಿಯನ್ನು, ಜನನ, ಮರಣ ವಿವಾಹ ನೊಂದಣಿಯ ಕಾಯ್ದೆ 1886 (ಕೇಂದ್ರ ಕಾಯ್ದೆ 6 ರ 1886),ಯ ಸಲುವಾಗಿ ನೇಮಿಸಲ್ಪಟ್ಟ ರಜಿಸ್ಟಾರ್ -ಜನರಲ್‌ರಿಗೆ, ಒದಗಿಸಲು, ನೇಮಕ ಮಾಡಲಾಗಿದೆ. ಆದರೆ, ಆ ಕಾಯ್ದೆಯನ್ನು ಈ ರಾಜ್ಯಕ್ಕೆ ವಿಸ್ತರಿಸಲಾಗಿಲ್ಲ. ಏಕೆಂದರೆ ಮೈಸೂರು ರಾಜ್ಯದಲ್ಲಿ, ಆ ರೀತಿಯ ಕಾನೂನಿನ ಬದ್ಧ ಇರುವ ರಜಿಸ್ಟಾರ್- ಜನರಲ್ (ಜನನ - ಮರಣ ಮತ್ತು ವಿವಾಹಗಳ)ರನ್ನು ನೇಮಕ ಮಾಡಲು ಯಾವ ಉಪಬಂಧ ವಿರುವುದಿಲ್ಲ. ಅದಕ್ಕಾಗಿ, ಕೇಂದ್ರ ಸರಕಾರವು ಕೇಂದ್ರ ಕಾಯ್ದೆಯನ್ನು ರಾಜ್ಯಕ್ಕೆ ವಿಸ್ತರಿಸಲು ವಿನಂತಿಸಿಕೊಳ್ಳಲಾಗಿದೆ. ಆದರೆ, ಕೇಂದ್ರ ಸರಕಾರವು, ರಾಜ್ಯದ ಶಾಸನವನ್ನು ಕೈಕೊಳ್ಳಬೇಕೆಂದು ಸೂಚಿಸಿದ್ದಾರೆ. ಅದಕಾರಣ, ನಾನು ಈ ಮಸೂದೆಯನ್ನು (measure) ಮಂಡಿಸಿ, ಎಲ್ಲ ಸದಸ್ಯರು, ಅದಕ್ಕೆ ತಮ್ಮ ಬೆಂಬಲ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

## 3. ಸಂವಿಧಾನದ ( ಏಳನೆತಿದ್ದುಪಡಿ) ಮಸೂದೆ 1956ರ ಕುರಿತು ಅಧಿಕೃತ ನಿರ್ಣಯದಬಗ್ಗೆ ಮುಖ್ಯಮಂತ್ರಿಗಳಾದ ಶ್ರೀ ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ. (26ನೇ. ಸೆಪ್ಟೆಂಬರ್ 1956)

ಶ್ರೀ ಕಡಿದಾಳ ಮಂಜಪ್ಪ (ಮುಖ್ಯ ಮಂತ್ರಿಗಳು) :

ನಿಮ್ಮ ಅನುಮತಿಯ ಮೇರೆಗೆ, ನಾನು 368 ವಿಧಿಯ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ರಾಜ್ಯಗಳ ಮರು ವಿಂಗಡಣಾ ಮಸೂದೆಯು ಕಾಯ್ದೆಯಾಗಿ ಅಂಗೀಕರಿಸಲಾಗಿದೆ. ಆದರೆ ರಾಜ್ಯಗಳ ಮರುವಿಂಗಡಣೆಯ ಕಾರ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರಲು, ಪ್ರಥಮ ಮತ್ತು 7ನೇ ಅನುಸೂಚಿಗಳನ್ನೊಳಗೊಂಡ ಸಂವಿಧಾನದ ಕೆಲವು ಉಪಬಂಧಗಳನ್ನು ತಿದ್ದುಪಡಿ ಮಾಡಲು ಅವಶ್ಯಕವಾಗಿದೆ. ಮರು ವಿಂಗಡಣೆಯ ಕಾರ್ಯ ಯೋಜನೆಯು, ರಾಜ್ಯಗಳ ಪ್ರದೇಶದಲ್ಲಿ, ಅನೇಕ ರಾಜ್ಯಗಳ ಸರಹದ್ದುಗಳಲ್ಲಿ ಬದಲಾವಣೆಯನ್ನು ಮಾಡಲು ಮತ್ತು ರಾಜ್ಯಗಳ ವಿವಿಧ ವರ್ಗಗಳ ವ್ಯತ್ಯಾಸವನ್ನು ರದ್ದು ಮಾಡಲು ತಿಳಿಸುತ್ತದೆ. ಕೆಲವು ರಾಜ್ಯಗಳನ್ನು ಹೊಸದಾಗಿ ರಚಿಸುವ ಬಗ್ಗೆಯು ಅದು ತಿಳಿಸುತ್ತದೆ. ಕಾರಣ, ಸಂವಿಧಾನವನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. 368ನೇ ವಿಧಿ ಪ್ರಕಾರ, ಸಂವಿಧಾನ ತಿದ್ದುಪಡಿ ಮಾಡಲು, ಆ ಉದ್ದೇಶಕ್ಕಾಗಿ, ಮೊದಲು ಮಸೂದೆಯನ್ನು ಸಂಸತ್ತಿನ ಯಾವುದೇ ಸದನದಲ್ಲಿ ಮಂಡಿಸಬೇಕು. ಸಂಸತ್ತು ಅಂಗೀಕರಿಸಿದ ಆ ಮಸೂದೆಯು ರಾಷ್ಟ್ರಪತಿಯವರ ಒಪ್ಪಿಗೆ ಪಡೆಯಬೇಕು. ಒಂದು ವೇಳೆ, ಅಂಥ ತಿದ್ದುಪಡಿಯು, ಸಂವಿಧಾನದ ಕೆಲವು ವಿಧಿಗಳಲ್ಲಿ ಬದಲಾವಣೆಗಳನ್ನು ಮಾಡಬೇಕಾದರೆ, ಅಂಥ ತಿದ್ದುಪಡಿಯನ್ನು ಒಂದು ಅರ್ದದಷ್ಟು ರಾಜ್ಯಗಳು, ಅನುಮೋದಿಸಿದರೆ, ರಾಷ್ಟ್ರಪತಿಯ ಒಪ್ಪಿಗೆ ಪಡೆಯಬೇಕು. ಅದಕ್ಕಾಗಿಯೇ, ಈ ನಿರ್ಣಯವನ್ನು ಮಂಡಿಸಲಾಗಿದೆ.

ಶ್ರೀ ಎ. ಭೀಮಪ್ಪ ನಾಯಕ (ಮೊಳಕಾಲ್ಮೂರು):

ಅದು ಕೂಡ ಪೂರ್ಣವಾಗಿದೆ. ಅರ್ಧಕ್ಕಿಂತ ಹೆಚ್ಚು ರಾಜ್ಯಗಳು ಅದಕ್ಕೆ ಅನುಮೋದನೆ ನೀಡಿದೆ.

ಶ್ರೀ ಕಡಿದಾಳ ಮಂಜಪ್ಪ :

368ವಿಧಿಯು ಪ್ರಕಾರ, ಆ ನಿರ್ಣಯುವನ್ನು ರಾಜ್ಯ ಶಾಸಕಾಂಗದ ಎದುರು ಮಂಡಿಸಲಾಗಿದೆ. ಆ ತಿದ್ದುಪಡಿಯು ರಾಜ್ಯಗಳಿಂದ ಅನುಮೋದಿಸಲ್ಪಡಬೇಕು. ಅದಕ್ಕಾಗಿಯೇ, ಮಾನ್ಯರೆ, ಆ ನಿರ್ಣಯವನ್ನು ಸದನದಲ್ಲಿ ಪ್ರಸ್ತಾಪಿಸಿದ್ದೇನೆ.

## 3(a) ಸಂವಿಧಾನದ ( ಏಳನೆತಿದ್ದುಪಡಿ) ಮಸೂದೆ 1956 ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಶ್ರೀ ಕಡಿದಾಳ ಮಂಜಪ್ಪ (ಮುಖ್ಯಮಂತ್ರಿ) ನವರ ಉತ್ತರಗಳ ಸ್ಪಷ್ಟೀಕರಣ. (26ನೇ. ಸೆಪ್ಟೆಂಬರ್ 1956).

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ, ಮಾನ್ಯ ಸದಸ್ಯರು, ಅನಾವಶ್ಯಕವಾಗಿ ಕೆಲವು ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ. ನನ್ನ ಮಿತ್ರರಾದ ಶ್ರೀ ಇಮಾಮರು ತಮ್ಮ ಅಂಶಗಳನ್ನು ವ್ಯಕ್ತಪಡಿಸುವಾಗ, ಸಂವಿಧಾನ ಬಾಹೀರದ ಮನೋವೃತ್ತಿಯನ್ನು ತಾಳಿದ್ದಾರೆ. ಆ ಎಲ್ಲ ಅಂಶಗಳಿಗೆ ನನ್ನ ಮಿತ್ರ ಶ್ರೀ ಪಟ್ಟಾಭಿರಾಮನ್‌ರು ಸ್ಪಷ್ಟೀಕರಣ ನೀಡಿದ್ದಾರೆ. ಯಾವಾಗ, ಒಂದು ರಾಜ್ಯ ರಚಿಸಬೇಕಾದರೆ, ಅಥವಾ ರಾಜ್ಯಗಳ ಸರಹದ್ದುಗಳನ್ನು ಬದಲಿಸಬೇಕಾದರೆ ಅಥವಾ ಒಂದು ರಾಜ್ಯವನ್ನು ನಾಮಕರಣ ಮಾಡಬೇಕಾದರೆ, ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಮೊದಲು, ಸಂಬಂಧಪಟ್ಟ ರಾಜ್ಯದ ಶಾಸಕಾಂಗದೊಡನೆ ಸಮಾಲೋಚಿಸಬೇಕಾಗುತ್ತದೆ. ಸಂವಿಧಾನವನ್ನು ತಿದ್ದುಪಡಿ ಮಾಡಲು, 368ನೇ ವಿಧಿಯ ಪ್ರಕಾರ, ವಿಧಾಸವನ್ನು ಅನುಸರಿಸಬೇಕಾಗುತ್ತದೆ. ಎಲ್ಲಾ ತಿದ್ದುಪಡಿಗಳ ಅನುಮೋದನೆ ಅವಶ್ಯವಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ, ತಿದ್ದುಪಡಿಗಳು ರಾಜ್ಯ ಶಾಸಕಾಂಗದಿಂದ ಅನುಮೋದನೆ ಪಡೆಯಬೇಕಾಗುತ್ತದೆ. 368ನೇ ವಿಧಿ ಪ್ರಕಾರ, "ಸಂವಿಧಾನದ ತಿದ್ದುಪಡಿಯ ಮಸೂದೆಯನ್ನು ಸಂಸತ್ತಿನ ಯಾವುದೇ ಸದನದಲ್ಲಿ ಮಂಡಿಸಬೇಕು. ಮಸೂದೆಯು ಪ್ರತಿದಿನದ ಒಟ್ಟು ಸದಸ್ಯರ ಬಹುಮತದಿಂದ ಅಂಗೀಕರಿಸಬೇಕು ಮತ್ತು 2:3ಕ್ಕೆ ಕಡಿಮೆ ಇಲ್ಲದಂತೆ ಆ ಸದನದ ಬಹುಮತದಿಂದ ಅಂಗೀಕರಿಸಲ್ಪಡಬೇಕು. ನಂತರ ಆ ಮಸೂದೆಯನ್ನು ರಾಷ್ಟ್ರಪತಿಯವರ ಒಪ್ಪಿಗೆಗೆ ಕಳುಹಿಸಿ ಅದು ಅವರ ಒಪ್ಪಿಗೆಯನ್ನು ಪಡೆಯಬೇಕು."

"ತಿದ್ದುಪಡಿಯು ಒಂದು ವೇಳೆ ವಿಧಿ 54,55,73,162 ಅಥವಾ 241 ಅಥವಾ ಭಾಗ 5ರ ಅಧ್ಯಾಯ 4, ಭಾಗ 6ರ ಅಧ್ಯಾಯ 5, ಭಾಗ 11ರ ಅಧ್ಯಾಯ 1, ಅಥವಾ 7ನೇ ಅನುಸೂಚಿಯಲ್ಲಿನ ಯಾವುದೇ ಪಟ್ಟಿ ಅಥವಾ ಸಂಸತ್ತಿನಲ್ಲಿ ರಾಜ್ಯಗಳ ಪ್ರಾತಿನಿಧ್ಯತೆಯ ಉಪಬಂಧಗಳನ್ನು ಬದಲಾವಣೆ ಮಾಡಬೇಕಾದರೆ, ಒಂದು ಅರ್ಧದಷ್ಟು ರಾಜ್ಯ ಶಾಸಕಾಂಗಗಳ ಅನುಮೋದನೆ ಅವಶ್ಯಕತೆಯಿರುತ್ತದೆ. ನಂತರ. ರಾಷ್ಟ್ರಪತಿಗಳ ಒಪ್ಪಿಗೆ ಪಡೆಯಬೇಕು.

ಈ ದಿಶೆಯಲ್ಲಿ ಈ ನಿರ್ಣಯಕ್ಕೆ ನಮ್ಮ ಅಭಿಪ್ರಾಯಗಳನ್ನು ನಾವು ವ್ಯಕ್ತಪಡಿಸಬೇಕಾಗುತ್ತದೆ.

ನನ್ನ ಸ್ನೇಹಿತರಾದ ಶ್ರೀ ಇಮಾಮರು ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅವರ ಹೇಳಿಕೆಯ ಪ್ರಕಾರ, ರಾಜ್ಯಗಳಲ್ಲಿ ವಿಧಾನ ಪರಿಷತ್ತಿನ ಅವಶ್ಯಕತೆಯಿಲ್ಲ. ವಿಧಾನ ಪರಿಷತ್ತು ಇರಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಆದರೆ, ಬಹಳಷ್ಟು ಜನರ ಅಭಿಪ್ರಾಯದ ಪ್ರಕಾರ, ತಾತ್ಕಾಲಿಕವಾಗಿ, ವಿಧಾನಪರಿಷತ್ತು ಇರಬೇಕು.

ಶ್ರೀ ಇಮಾಮರು, ನ್ಯಾಯಾಧೀಶರನ್ನು, ತಮ್ಮ ವೃತ್ತಿಯನ್ನು ಪ್ರಾರಂಭಿಸುವ (ನಿವೃತ್ತಿ ಹೊಂದಿದ ನಂತರ), ಬಗ್ಗೆ ಆಕ್ಷೇಪಣೆ ಮಾಡಿದ್ದಾರೆ ರಾಯರೇ, ನ್ಯಾಯಾಧೀಶರು (ಅದರಲ್ಲಿ ಹೈಕೋರ್ಟುಗಳು), ಆಳವಾದ ಅನುಭವ ಮತ್ತು ಪಾಂಡಿತ್ಯ ಹೊಂದಿರುವುದರಿಂದ, ಅವರಿಗೆ ವೃತ್ತಿಯನ್ನು ಪ್ರಾರಂಭಿಸಲು ಅನುಮತಿ ಕೊಡಬೇಕಾಗುತ್ತದೆ. ಆದರೆ, ಯಾವ ಹೈಕೋರ್ಟಿನಲ್ಲಿ ನ್ಯಾಯಾಧೀಶರು ಸೇವೆ ಸಲ್ಲಿಸಿರುತ್ತಾರೆಯೋ, ಅಲ್ಲಿ, ಅವರನ್ನು ವೃತ್ತಿ ಪ್ರಾರಂಭಿಸಲು ಅನುಮತಿ ಕೊಡಬಾರದು.

ಶ್ರೀ ಲಿಂಗಾರೆಡ್ಡಿಯವರು ತಿಳಿಸಿದಂತೆ, ಹೈಕೋರ್ಟಿಗಳ ನ್ಯಾಯಾಧೀಶರಿಗೆ ಒಂದೇ ತೆರನಾದ ಸಂಬಳ ಇರಬೇಕು. ಸರಕಾರಿ ನೌಕರರ ಸಂಬಳದಲ್ಲಿ, ಏರುಪೇರು ಗಳಿರಬಾರದೆಂಬುದನ್ನು ನಮ್ಮ ಮಿತ್ರರು ತಿಳಿಸಿದ್ದನ್ನು ನಾನು ಒಪ್ಪುತ್ತೇನೆ. ಈ ಪ್ರಶ್ನೆಯ ಇತ್ಯರ್ಥಕ್ಕೆ ವೇತನ ಆಯೋಗದ ನೇಮಕದಿಂದ ಪರಿಹಾರ ಸಿಗುತ್ತದೆ. ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ, ನಮ್ಮ ದೇಶದಲ್ಲಿ ಯಾರಿಗೂ ರೂ. 1500 ಕ್ಕಿಂತ ಹೆಚ್ಚಿನ ಸಂಬಳ ಕೊಡುವ ಅವಶ್ಯಕತೆಯಿಲ್ಲ. ಈ ಪ್ರಶ್ನೆಯನ್ನು, ಆ ಮೇಲೆ ಪರಿಹರಿಸಬೇಕು.

ನಮ್ಮ ಸ್ನೇಹಿತರ ಅಭಿಪ್ರಾಯದ ಪ್ರಕಾರ, ಹೈಕೋರ್ಟಿನ ನ್ಯಾಯಾಧೀಶರು ಉತ್ತಮ ರೀತಿಯಾಗಿ ಪರಿಗಣಿಸಲು ಅರ್ಹರಿರುವರು. ಅವರು ಕೆಲವು ಉತ್ತಮ ಸಂಪ್ರದಾಯಗಳ ಮೂಲಕ, ತಮ್ಮ ಹುದ್ದೆಗಳಿಗೆ ಅತ್ಯಂತ ಗೌರವ ಮತ್ತು ಘನತೆಗಳನ್ನು ಹೆಚ್ಚಿಸಿದ್ದಾರೆ. ಸದನದಲ್ಲಿ ತಿಳಿಸಿದ ಈ ವಿಷಯವನ್ನು ಕೇಂದ್ರ ಸರಕಾರ ಗಣನೆಗೆ ತೆಗೆದುಕೊಳ್ಳುವದೆಂಬ ಭರವಸೆ ನನಗಿದೆ.

ಶ್ರೀ ಹೆಚ್.ಸಿ. ಲಿಂಗಾರೆಡ್ಡಿಯವರ ಪ್ರಕಾರ, ಈ ರಾಜ್ಯವನ್ನು ದಕ್ಷಿಣ ವಲಯದಲ್ಲಿ ಸೇರಿಸಬಾರದಾಗಿತ್ತು. ಈ ಪ್ರಶ್ನೆಯ ಮೇಲೆ ಕೆಲವು ಭಿನ್ನಾಭಿಪ್ರಾಯಗಳಿವೆ. ಆದರೂ ಇದಕ್ಕೆಲ್ಲ ಸಂಸತ್ತಿನ ಕಾಯ್ದೆಯಿದೆ. ಅದಕ್ಕಾಗಿ ನಾವು ಸ್ವಲ್ಪ ಕಾದು ನೋಡೋಣ. ಒಂದು ವೇಳೆ ಪಶ್ಚಿಮ ವಲಯವು ನಮ್ಮ ಹಿತಾಸಕ್ತಿಯ ಪ್ರಕಾರ ಇಲ್ಲದಿದ್ದರೆ, ಅದನ್ನು ಅನಂತರ ಪರಿಶೀಲಿಸೋಣ. ಕಾಯ್ದೆಗೆ ಸೂಕ್ತವಾದ ಮಾರ್ಪಾಡು ಮಾಡಲು, ನಾವು ಕೇಂದ್ರ ಸರಕಾರಕ್ಕೆ ವಿನಂತಿಸಿಕೊಳ್ಳಬಹುದು. ಮುಂದುವರೆದು,

ಶ್ರೀ ಪಟ್ಟಾಭಿರಾಮನ್‌ರ ಸೂಕ್ತ ಅಭಿಪ್ರಾಯ ವ್ಯಕ್ತಪಡಿಸಿದಂತೆ, ಹೊಸ ರಾಜ್ಯದ ಉದ್ಘಾಟನೆಯನ್ನು ಒಳ್ಳೆಯ ಸದ್ಭಾವನೆಯಿಂದ ಮತ್ತು ಭಾತೃತ್ವದಿಂದ ಆಚರಿಸಬೇಕು. ಅವರ ಅಭಿಪ್ರಾಯಕ್ಕೆ ನಿಜವಾಗಿಯೂ ನಾನು ಒಪ್ಪುತ್ತೇನೆ. ನಮ್ಮ ಹೊಸ ರಾಜ್ಯವು ಒಳ್ಳೆಯ ಸದ್ಭಾವನೆಯ ಸನ್ನಿವೇಶದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಅದನ್ನು ಸಂಭ್ರಮದಿಂದ ಮತ್ತು ಅತೀ ಸಂತೋಷದಿಂದ ಉದ್ಘಾಟನೆ ಮಾಡಲು, ನವೆಂಬರ್, 1 ರಂದು ನಮ್ಮ ರಾಷ್ಟ್ರಪತಿಗಳು ಒಪ್ಪಿಸಿದ್ದಾರೆ.

ಕೆಲವು ನನ್ನ ಮಿತ್ರರು, ಭಾಷಾ - ಅಲ್ಪಸಂಖ್ಯಾತರ ರಕ್ಷಣೆಗಳ ಉಪಬಂಧದ ಬಗ್ಗೆ ತಿಳಿಸಿರುವರು ಎಲ್ಲ ರಾಜ್ಯ ಸರಕಾರಗಳು (ಮೈಸೂರು), ತಮ್ಮ ಜವಾಬ್ದಾರಿಗಳನ್ನು ಅರಿತು, ಭಾಷಾ - ಅಲ್ಪ ಸಂಖ್ಯಾತರ ಹಿತಕ್ಕಾಗಿರುವ ಎಲ್ಲ ಉಪಬಂಧಗಳನ್ನು ಅನುಷ್ಠಾನಕ್ಕೆ ತರುವವೆಂದು ನನಗೆ ವಿಶ್ವಾಸವಿದೆ.

ಸರಕಾರವು 6ನೇ ತಿದ್ದುಪಡಿಯ ಮಸೂದೆಯ ಬಗ್ಗೆ ನಿರ್ಣಯವನ್ನು ಮಂಡಿಸದೇ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಅದು ನಿಜ. ಸದನದಲ್ಲಿ ಆ ತಿದ್ದುಪಡಿಯ ಮಸೂದೆಯನ್ನು ಸದನದಲ್ಲಿ ಮಂಡಿಸಲು, ನಾವು ವಿಫಲರಾದೆವು. ಸಂಸತ್ತು ಆ ಮಸೂದೆಯನ್ನು 29 ಮೇ, 1956ರಲ್ಲಿ ಅಂಗೀಕರಿಸಿತು. ಅದನ್ನು ವಿಧಾನ ಪರಿಷತ್ತಿನಲ್ಲಿ 31ನೇ ಮೇ, 1956ರಲ್ಲಿ ಅಂಗೀಕರಿಸಲಾಯಿತು.

ಅದರ ಪ್ರಕಾರ, ನಾವು 2 ಜೂನ್, 1956ರಂದು, ಪ್ರಥಮ ಸುವಾರ್ತೆ ಪಡೆದೆವು. ನಂತರ, 20 ಜೂನ್ 1956ರಂದು, ನಾವು ಕಾರ್ಯಕಲಾಪಗಳ ಪ್ರತಿಗಳನ್ನು ಪಡೆದೆವು. ಸದನದ

ಅಧಿವೇಶನದಲ್ಲಿ, ಈ ನಿರ್ಣಯಗಳನ್ನು ಮಂಡಿಸಬೇಕೆಂದು ವಿಚಾರ ಮಾಡಿದೆವು. ಆದರೆ, 11ನೇ ಸೆಪ್ಟೆಂಬರ್ 1956ರಂದು, ಮಸೂದೆಯು ರಾಷ್ಟ್ರಪತಿಯವರ ಅಂಕಿತ (ಒಪ್ಪಿಗೆ) ಪಡೆದಿತ್ತು. ಕಾರಣ, ಆ ಮಸೂದೆಯನ್ನು ಸದನದಲ್ಲಿ ಮಂಡಿಸಲು ಸಾಧ್ಯವಾಗಲಿಲ್ಲ.

ಶ್ರೀ ಗೋಪಾಲಗೌಡರ ಪ್ರಕಾರ, ಬೊಂಬೈ ಮತ್ತು ಇತರ ಸ್ಥಳಗಳಲ್ಲಿ ಕಾಂಗ್ರೆಸಿನ ಸರ್ವಾಧಿಕಾರದ ಮೂಲಕ, ಕೆಲವು ಅಹಿತಕರ ಘಟನೆಗಳು ಸಂಭವಿಸಿದೆ. ಕಾಂಗ್ರೆಸ್ಸಿನ ಅಂಥ ಆಡಳಿತವು ಇತಿಹಾಸದಲ್ಲಿ ದಾಖಲಾತಿಯಾಗುತ್ತದೆ ಎಂದು ಟೀಕಿಸಿದ್ದಾರೆ. ಅದರೂ, ನಾನು ಅತೀ ಸಂತೋಷದಿಂದ ಹೇಳುವುದೇನೆಂದರ "ಇತಿಹಾಸವು ಕಾಂಗ್ರೆಸ್ಸಿನ ವೈಭವದ ಆಳ್ವಿಕೆಯನ್ನು, ದಾಖಲಾತಿ ಮಾಡುತ್ತದೆ. "

## 4. ಅಧಿಕೃತ ನಿರ್ಣಯ - ಸಂವಿಧಾನದ ಅನುಮೋದನೆ (7ನೇ ತಿದ್ದುಪಡಿ) ಮಸೂದೆ ಬಗ್ಗೆ - ಮುಖ್ಯಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ-(ವಿಧಾನ ಪರಿಷತ್ತು 27ನೇ ಸೆಪ್ಟೆಂಬರ್ 1956).

ಶ್ರೀ ಕಡಿದಾಳ ಮಂಜಪ್ಪ (ಮುಖ್ಯಮಂತ್ರಿಗಳು) :

" ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿದ ಸಂವಿಧಾನಕ್ಕೆ ಮಾಡಿದ ಏಳನೇ ತಿದ್ದುಪಡಿ ಮಸೂದೆಗೆ, 1956, ಈ ಸದನವು ಅನುಮೋದಿಸುತ್ತದೆ " ಎಂದು ಮಂಡಿಸುತ್ತೇನೆ.

ಈ ಮಸೂದೆಯನ್ನು ಮಂಡಿಸಲು ಇರುವ ಕಾರಣಗಳನ್ನು ತಿಳಿಸುವುದು ನನಗೆ ಅನಾವಶ್ಯಕ ವೆನಿಸುತ್ತದೆ. ರಾಜ್ಯಗಳ ಮರುವಿಂಗಡಣೆಯ ಮಸೂದೆ ಉಪಬಂಧಗಳನ್ನು ಚರ್ಚಿಸುವಾಗ, ಮಾನ್ಯ ಸದಸ್ಯರು ಅದರ ಬಗ್ಗೆ ತಿಳಿದುಕೊಂಡಿದ್ದಾರೆ. ಕೆಲವು ವಿಷಯಗಳಲ್ಲಿ, ರಾಜ್ಯಗಳ ಏಕೀಕರಣದ ಕಾರ್ಯ ವಿಧಾನವು ಸಂವಿಧಾನದ ತಿದ್ದುಪಡಿ ಮಾಡುವ ಅವಶ್ಯಕತೆಗೆ ಅವಕಾಶ ನೀಡುತ್ತದೆ. ರಾಜ್ಯಗಳ ಮರುವಿಂಗಡಣಾ ಕಾರ್ಯವಿಧಾನದಲ್ಲಿ, ಹೊಸ ರಾಜ್ಯಗಳ ರಚನೆಗೆ ಮತ್ತು ಅವುಗಳ ಸರಹದ್ದುಗಳನ್ನು ಬದಲಿಸುವ ಅವಕಾಶವಿದೆ. ಹಾಗೆಯೇ, ವಿವಿಧ ರಾಜ್ಯಗಳಲ್ಲಿಯ ವೈಷಮ್ಯತೆಯನ್ನು ರದ್ದು ಪಡಿಸಲು ಸೂಚಿಸಲಾಗಿದೆ. ಇನ್ನು ಮೇಲೆ. ಒಂದೇ ವರ್ಗದ ರಾಜ್ಯಗಳು ಮತ್ತು ಕೆಲವು ಕೇಂದ್ರಾಡಳಿತ ಪ್ರದೇಶಗಳಿರುತ್ತವೆ. ರಾಜ್ಯಗಳ ಅಖಂಡತೆಗಾಗಿ ಸಂವಿಧಾನದ ಕೆಲವು ಉಪಬಂಧಗಳನ್ನು ತಿದ್ದುಪಡಿ ಮಾಡಬೇಕು. ಅದಕ್ಕಾಗಿಯೇ ಸಂಸತ್ತಿನಲ್ಲಿ ಆ ಮಸೂದೆಯನ್ನು ಮಂಡಿಸಲಾಗಿತ್ತು. ಮಸೂದೆಯನ್ನು ಸಂಸತ್ತಿನ ಎರಡೂ ಸದನಗಳು ಅಂಗೀಕರಿಸಿದವು. ಸಂವಿಧಾನದ 368ನೇ ವಿಧಿ ಪ್ರಕಾರ, ತಿದ್ದುಪಡಿ ಮಾಡುವ ಮಸೂದೆಯನ್ನು ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಕಳುಹಿಸುವ ಮುನ್ನ ಅದಕ್ಕೆ ಒಂದು ಅರ್ಧದಷ್ಟು ಕಡಿಮೆ ಇಲ್ಲದೆ ರಾಜ್ಯಗಳು, ಅಂಥ ಸೂಚಿಸಿದ ತಿದ್ದುಪಡಿಗಳಿಗೆ ಅನುಮೋದಿಸಬೇಕು. ರಾಜ್ಯ ಮರುವಿಂಗಡಣಾ ಮಸೂದೆಯ ವಿಷಯದಲ್ಲಿ, ಸಂವಿಧಾನದ ವಿಧಿ 3ರ ಪ್ರಕಾರ, ಸಂಸತ್ತಿನಲ್ಲಿ ಈ ಮಸೂದೆಯನ್ನು ಮಂಡಿಸುವ ಮೊದಲು, ಈ ಸದನದೊಡನೆ ಸಮಾಲೋಚಿಸಲಾಗಿತ್ತು. ಈ ಸದನವು ರಾಜ್ಯಗಳ ಮರು ವಿಂಗಡಣಾ ಮಸೂದೆಯ ಉಪಬಂಧಗಳನ್ನು ಚರ್ಚಿಸುವ ಅವಕಾಶ ಹೊಂದಿತ್ತು. ಸಂಸತ್ತು ಅಂಗೀಕರಿಸಿದ ತಿದ್ದುಪಡಿಯು ರಾಜ್ಯಗಳ ಮರು ವಿಂಗಡಣೆಯ ಕಾಯ್ದೆಯ ಕಾರ್ಯವಿಧಾನವನ್ನು ಅನುಷ್ಠಾನಕ್ಕೆ ತರಲು, ಅವಕಾಶ ಮಾಡಿಕೊಡುತ್ತದೆ. ಈ ನಿರ್ಣಯದ ಬಗ್ಗೆ ಯಾವ ತರಹದ ವಾದ- ವಿವಾದಗಳಿರುವುದಿಲ್ಲ ವೆಂಬುದು ನನ್ನ ಅಶ್ವಾಸನೆ. ಸದನವು ಈ ನಿರ್ಣಯವನ್ನು ಒಪ್ಪಿಕೊಂಡಿದ್ದಕ್ಕಾಗಿ ನಾನು ಹೆಮ್ಮೆ ಪಡುತ್ತೇನೆ.

ಎಂ.ಪಿ.ಎಲ್. ಶಾಸ್ತ್ರಿಗಳ ಪ್ರಶ್ನೆಗೆ ಉತ್ತರಿಸುತ್ತ :

ಮಾನ್ಯ ಸದಸ್ಯರು, ರಾಜ್ಯಗಳ ಮರು ವಿಂಗಡಣೆಯ ಸಮಿತಿಯ ವರದಿಯ ಸಂಬಂಧದ ಕೆಲವು ಸೂಚನೆಗಳ ಬಗ್ಗೆ, ಕೆಲವು ಘಟನೆಗಳು ಸಂಭವಿಸಿದರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಕೆಲವು ಸ್ಥಳಗಳಲ್ಲಿ, ಸಂಘರ್ಷವಾದ ವಿವಾದಗಳು ಮತ್ತು ಬಲದ ಪ್ರಯೋಗವಾಗಿದ್ದುಂಟು. ಆ

ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು ಸಹಜ. ನನ್ನ ಮಿತ್ರ ಶಾಸ್ತ್ರೀಯವರು ತಿಳಿಸಿದಂತೆ, ನಾವು ಮೈಸೂರಿನಲ್ಲಿ, ಅತೀ ಘನತೆಯಿಂದ ನಡೆದೆವು. ನಾವು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾ, ಅಧಿಕಾರಿಗಳ ಸಂಗಡ ವಾದ ವಿವಾದ ಮಾಡಿದೆವು. ನಮ್ಮ ವಿಚಾರಗಳನ್ನು ಸಾರ್ವಜನಿಕ ಮುಂದೆ ಇಟ್ಟೆವು. ಕೊನೆಗೆ, ಅಂತಿಮ ನಿರ್ಧಾರಕ್ಕಾಗಿ, ನಾವು ಬದ್ಧರಾದೆವು. ಇದಕ್ಕಾಗಿ ನಾನು ಬಹಳ ಹೆಮ್ಮೆ ಪಡುತ್ತೇನೆ. ಶ್ರೀ ಶಾಸ್ತ್ರಿ ಮತ್ತು ಇತರ ಸದಸ್ಯರು ತಿಳಿಸಿದಂತೆ, ನಮ್ಮ ನೂತನ ಮೈಸೂರು ರಾಜ್ಯದಲ್ಲಿ, ವಿಧಾನ ಪರಿಷತ್ತಿನಲ್ಲಿ ನಿಗದಿಪಡಿಸಿದ ಸ್ಥಾನಗಳು ಸಂವಿಧಾನದಲ್ಲಿನ ಉಪಬಂಧಗಳಲ್ಲಿ, ತಿಳಿಸಿದಕ್ಕಿಂತಲೂ, ಬಹಳ ಕಡಿಮೆ. ವಿಧಾನ ಸಭೆಯ ಸ್ಥಾನಗಳ ಸಂಖ್ಯೆಯನ್ನು 182 ರಿಂದ 208ಕ್ಕೆ ಏರಿಸಲಾಯಿತು. ಆದರೆ, ವಿಧಾನ ಪರಿಷತ್ತಿನ ಸ್ಥಾನಗಳಿಗಾಗಿ ಏನನ್ನೂ ಮಾಡಲಾಗಲಿಲ್ಲ. ಕಾರಣ, ಎಲ್ಲ ಸದಸ್ಯರ ನ್ಯಾಯಯುತವಾದ ಬೇಡಿಕೆ ಏನೆಂದರೆ, ಈ ಸದನದ ಸ್ಥಾನಗಳನ್ನು ಹೆಚ್ಚಿಸಬೇಕು. ಈ ದಿಶೆಯಲ್ಲಿ, ಪರಿಷತ್ತಿನ ಸ್ಥಾನಗಳನ್ನು 60 ರಿಂದ 65ರ ನಡುವೆ ಏರಿಸಲು, ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀರಲಾಗುತ್ತದೆ.

ನ್ಯಾಯಾಧೀಶರ ಸಂಬಳ ಕುರಿತು ಪ್ರಶ್ನೆಗಳಿಗೆ ಉತ್ತರಿಸುತ್ತ, ನ್ಯಾಯಾಧೀಶರ ಸಂಬಳ ಕುರಿತು ನನ್ನ ಸ್ನೇಹಿತರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ನಾನು ಒಪ್ಪುತ್ತೇನೆ. ಅವರ ಹೇಳಿಕೆಯ ಪ್ರಕಾರ, ನಮ್ಮ ದೇಶದಲ್ಲಿ ಶ್ರೀ ಸಾಮಾನ್ಯನ ಜೀವನಮಟ್ಟ ಬಹಳ ಕೆಳಮಟ್ಟದ್ದು. ಸಾಮಾನ್ಯ ಮನುಷ್ಯನ ಜೀವಮಟ್ಟದಲ್ಲಿ ಮತ್ತು ಸಾರ್ವಜನಿಕ ನೌಕರರ ನಡುವೆ ಸ್ವಲ್ಪ ಸಂಬಂಧ ಇರಬೇಕು. ನನ್ನ ಅಭಿಪ್ರಾಯದ ಪ್ರಕಾರವೂ, ಕಡಿಮೆ ಸಂಬಳದ ಸರಕಾರಿ ನೌಕರರ ಮತ್ತು ಹೆಚ್ಚು ಸಂಬಳದ ಸರಕಾರಿ ನೌಕರರ ನಡುವೆ, ಬಹಳ ವೈಷಮ್ಯ ಇರಬಾರದು. ಶ್ರೀ ಶಾಸ್ತ್ರೀಯವರ ಪ್ರಕಾರ, ಪ್ರತಿ ತಿಂಗಳಿಗೆ, 2000 ರೂ. ಕ್ಕಿಂತ ಹೆಚ್ಚು ಸಂಬಳ ಯಾರಿಗೂ ನೀಡಬಾರದು. ಆದರೆ, ಈಗ ಸಂಬಳದ ಬಗ್ಗೆ ಚರ್ಚಿಸುತ್ತಿಲ್ಲ. ಅದನ್ನು ಅನಂತರ ಪರಿಶೀಲಿಸೋಣ. ನನ್ನ ಅಭಿಪ್ರಾಯದ ಪ್ರಕಾರ, ದೇಶದಾದ್ಯಂತ, ಒಂದೇ ತೆರನಾದ ಸಂಬಳ ಇರಬೇಕು. ಅದರ ಜೊತೆಗೆ ಭತ್ಯವನ್ನು ಕೊಡಲು ಅವಕಾಶವಿರಬೇಕು.

ಈ ವಿಷಯ, ಬೇರೆಯಿದ್ದರೂ, ನನಗೆ ಸಂತೋಷದ ಸಂಗತಿಯೆಂದರೆ, ದೇಶದಾದ್ಯಂತ ಹೈಕೋರ್ಟಿನ ನ್ಯಾಯಾಧೀಶರಿಗೆ, ಒಂದೇ ರೀತಿಯ ಸಂಬಳ ಕೊಡಲಾಗಿದೆ. ಈ ಮೊದಲು, ಅವರ ಸಂಬಳ, ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿತ್ತು. ಈಗ ಆ ವೈಷಮ್ಯತೆಯನ್ನು ಹೋಗಲಾಡಿಸಲಾಗಿದೆ. ಮದ್ರಾಸ್ ಮತ್ತು ಬಾಂಬೆ ಹೈಕೋರ್ಟುಗಳ ನ್ಯಾಯಾಧೀಶರು ಪಡೆಯುವ ಸಂಬಳವೇ, ನಮ್ಮ ಮೈಸೂರು ಹೈಕೋರ್ಟಿನ ನ್ಯಾಯಾಧೀಶರು ಪಡೆಯುತ್ತಾರೆ. ಶ್ರೀ ಶಾಸ್ತ್ರೀಯವರು 258 ವಿಧಿಯ ಕ್ಲೌಜ್ 18ನ್ನು ತಿದ್ದುಪಡಿ ಮಾಡಲು ಸೂಚಿಸಿದ್ದಾರೆ. ಅವರು, ರಾಜ್ಯಪಾಲರ ಅಧಿಕಾರಗಳ ಮತ್ತು ಸರಕಾರದ ಅಧಿಕಾರಗಳ ನಡುವಿನ ವೈಷ್ಯಮ್ಯತೆಯ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಒಂದು ವೇಳೆ, ನನ್ನ ಮಿತ್ರರು ಸಂವಿಧಾನದ ಭಾಗ- 6ನ್ನು ಕೂಲಂಕುಷವಾಗಿ ತಿಳಿದುಕೊಂಡರೆ, ಅವರಿಗೆ, ರಾಜ್ಯಪಾಲರ ಸ್ಥಾನ, ಅಧಿಕಾರ ಮತ್ತು ಇತರ ವಿಷಯಗಳ ಬಗ್ಗೆ ಚೆನ್ನಾಗಿ ಅರ್ಥವಾಗುತ್ತದೆ. ಸರಕಾರದ ಅಧಿಕಾರವು ರಾಜ್ಯಪಾಲರ ಹೆಸರಿನಲ್ಲಿಯೇ ಚಲಾಯಿಸಲಾಗುತ್ತದೆ. ಸರಕಾರದ ಯಾವುದೇ ನಿರ್ಣಯ ಅಥವಾ ನಿರ್ಧಾರ ರಾಜ್ಯಪಾಲರ ಹೆಸರಿನಲ್ಲಿಯೇ ತಗೆದುಕೊಳ್ಳಬೇಕಾಗುತ್ತದೆ. ಅಲ್ಲದೆ, ರಾಜ್ಯದ ಕಾರ್ಯಾಂಗದ ಅಧಿಕಾರವು ರಾಜ್ಯಪಾಲರಲ್ಲಿರಬೇಕೆಂದು,

ಸಂವಿಧಾನವು ತಿಳಿಸುತ್ತದೆ. ರಾಜ್ಯಪಾಲರು, ಮಂತ್ರಿಮಂಡಲದ ಸಲಹೆಯ ಪ್ರಕಾರ, ಅಧಿಕಾರವನ್ನು ಚಲಾಯಿಸಲು, ದೇಶದಲ್ಲಿ ಒಳ್ಳೆಯ ಸಂಪ್ರದಾಯಗಳನ್ನು, ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿವೆ.

ಮುಂದುವರಿದು, ರಾಜ್ಯ ಅಧಿಕಾರಿಗಳಿಗೆ ಮತ್ತು ರಾಜ್ಯ ಸರಕಾರಕ್ಕೆ ಕೇಂದ್ರ ಸರಕಾರದಿಂದ ಅಧಿಕಾರದ ನಿಯೋಜನೆಗೆ ಸಂಬಂಧಿಸಿದ ಶ್ರೀ ಶಾಸ್ತ್ರಿಯವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತ :

"ನಾನು ಆ ವಿಷಯವನ್ನು ವಿವರಿಸುತ್ತೇನೆ. ಮಸೂದೆಯ ಗುರಿಗಳ ಮತ್ತು ಕಾರಣಗಳ ಹೇಳಿಕೆಯ ಬಗ್ಗೆ, ನಾನು ಸದಸ್ಯರ ಗಮನಕ್ಕೆ ತರುತ್ತೇನೆ. 18ನೇ ಕ್ಲಾಜಿನಲ್ಲಿ, ಉಲ್ಲೇಖಿಸಿದ ವಿವರಣೆಯು ಹೀಗಿರುತ್ತದೆ:" 258, ವಿಧಿ (1)ರ ಪ್ರಕಾರ, ರಾಷ್ಟ್ರಪತಿಯವರು ಕೇಂದ್ರ ಕಾರ್ಯವನ್ನು ರಾಜ್ಯ ಸರಕಾರಕ್ಕೆ ವಹಿಸಿಕೊಡಬಹುದು. ಆದರೆ, ರಾಜ್ಯದ ರಾಜ್ಯಪಾಲರು, ಕೇಂದ್ರ ಸರಕಾರಕ್ಕೆ ಅಥವಾ ಅದರ ಅಧಿಕಾರಿಗಳಿಗೆ ಅಂಥ ಕಾರ್ಯವನ್ನು ವಹಿಸಿಕೊಡಲು ಬರುವುದಿಲ್ಲ. ಅದೊಂದು ನ್ಯೂನ್ಯತೆ. ಅದನ್ನು ಸರಿಪಡಿಸಲು, ವಿಧಿ 258-ಎ, ಸೂಚಿಸಲಾಗಿದೆ. ಕೆಲವು ಕಠಿಣತೆಗಳ ಮತ್ತು ರಾಜ್ಯ ರಾಜ್ಯಗಳಲ್ಲಿನ ಭಿನ್ನಾಭಿಪ್ರಾಯದ ಕಾರಣ, ಕೆಲವು ಸಂದರ್ಭಗಳಲ್ಲಿ, ಕೆಲವು ಪ್ರಾಜೆಕ್ಟ್‌ಗಳನ್ನು ಅನುಷ್ಠಾನಕ್ಕೆ ತರಲು, ಅವುಗಳನ್ನು ಕೇಂದ್ರ ಸರಕಾರಕ್ಕೆ ಅಥವಾ ಕೇಂದ್ರ ಸರಕಾರದ ಅಧಿಕಾರಿಗಳಿಗೆ ವಹಿಸಿಕೊಡಲು ಅವಶ್ಯಕವಾಗಿದೆ. ಕಾರಣ, ಆ ರೀತಿಯಾಗಿ ಮಾಡಲು, ಮಸೂದೆಯಲ್ಲಿ ಅವಕಾಶ ಮಾಡಲಾಗಿದೆ. ನಮ್ಮ ಪರವಾಗಿ(ರಾಜ್ಯದ) ನಾವು ಕೆಲವು ಆಣೆಕಟ್ಟುಗಳನ್ನು ಅನುಷ್ಠಾನಕ್ಕೆ ತರಲು, ಕೇಂದ್ರ ಸರಕಾರಕ್ಕೆ ಒಪ್ಪಿಸಬಹುದು. ಕೇಂದ್ರ ಸರಕಾರವು, ಸಂವಿಧಾನದಲ್ಲಿ ಉಲ್ಲೇಖಿಸಿದಂತೆ, ಸಾಕಷ್ಟು ಅಧಿಕಾರಗಳನ್ನು ಹೊಂದಿದೆ. ನಾವು ಆ ರೀತಿಯಾಗಿ ಮಾಡಲು ಪ್ರಯತ್ನಸದಿದ್ದರೂ, ಕೇಂದ್ರ ಸರಕಾರವು ರಾಜ್ಯಗಳ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುತ್ತದೆ.

ವಲಯ ಪರಿಷತ್ತುಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತ,

" ದಕ್ಷಿಣ ಅಥವಾ ಪಶ್ಚಿಮ ವಲಯದಲ್ಲಿ, ರಾಜ್ಯವನ್ನು ಸೇರಿಸಬೇಕೆಂಬ ವಿಷಯದ ಅಂಶವು ಅತೀ ಪ್ರಾಮುಖ್ಯವಾಗಿದೆ. ಇದರ ಬಗ್ಗೆ ರಾಜ್ಯದಲ್ಲಿ ಭಿನ್ನಾಭಿಪ್ರಾಯವಿದೆ. ಈ ವಲಯ ಸಮಿತಿಗಳು ಬಹಳ ಮಿತವಾದ ಕಾರ್ಯಗಳನ್ನು ನಿರ್ವಹಿಸುತ್ತವೆ. ಅನುಭವದ ಪ್ರಕಾರ, ನಮ್ಮ ಹಣಬರಹ ದಕ್ಷಿಣದ ರಾಜ್ಯಗಳಿಂದ ಕೂಡಿದೆ. ಕಾರಣ, ಕೇಂದ್ರ ಸರಕಾರವು ನಮ್ಮನ್ನು ದಕ್ಷಿಣ, ಪರಿಷತ್ತಿನಲ್ಲಿ, ಸೇರಿಸಬೇಕೆಂದು, ವಾದ ಮಾಡಬಹುದು"

ಮುಂದುವರಿದು ಪ್ರಶ್ನೆಗಳಿಗೆ ಉತ್ತರಿಸುತ್ತ,

" ಆಂಧ್ರ ಪ್ರದೇಶ, ಮದ್ರಾಸ್ ಮತ್ತು ಕೇರಳಗಳ ಜೊತೆ, ನಾವು ಸರ್ವಸಾಮಾನ್ಯದ ಪ್ರಶ್ನೆಗಳನ್ನು ಹೊಂದಿದ್ದೇವೆ. ಆದರ ಅರ್ಥ, ನಾವು ದಕ್ಷಿಣ ವಲಯದಲ್ಲಿ ಇದ್ದುದರಿಂದ ಆ ಎಲ್ಲ ಪ್ರಶ್ನೆಗಳನ್ನು ಬಗೆಹರಿಸಬೇಕೆಂದಲ್ಲ. ನಾವು ಆ ವಲಯಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಕಾದು ನೋಡಬೇಕಾಗುತ್ತದೆ".

ಕ್ಲಾಜ್ -21ರ ತಿದ್ದುಪಡಿಯ ಮಸೂದೆಯಲ್ಲಿ ಯಾವುದೇ ರೀತಿಯ ವಾದ ವಿರುವುದಿಲ್ಲ. ಈ ಕ್ಲಾಜ್‌ನ್ನು ತಿದ್ದುಪಡಿಯ ಮಸೂದೆಯಲ್ಲಿ ಸೇರಿಸಿ, ಭಾಷಾ-ಅಲ್ಪ ಸಂಖ್ಯಾತರ, ಹಿತಾಸಕ್ತಿಗಳನ್ನು

(ರಕ್ಷಣೆಗಳನ್ನು) ಕಾಪಾಡಲು ಸಹಾಯವಾಗುತ್ತದೆ. ಭಾಷೆಯ ಸಮಸ್ಯೆಗೆ, ನಾವು ಅಷ್ಟು ಪ್ರಾಮುಖ್ಯತೆ ಕೊಡುವುದು ಅವಶ್ಯವಿಲ್ಲ. "ಈ ದೇಶ ಒಂದು ಮನೆಯಿದ್ದ ಹಾಗೆ. ನಾನು ಈ ವಿಶಾಲವಾದ ದೇಶದ ಸಮಸ್ಯೆಯನ್ನು ಅವಿಭಕ್ತ ಕುಟುಂಬಕ್ಕೆ ಹೋಲಿಸುತ್ತೇನೆ. ನಾನು ಎಲ್ಲ ಪ್ರಾಂತ್ಯಗಳನ್ನು ಒಂದೇ ಮನೆಯಲ್ಲಿರುವ ಅನೇಕ ಕೋಣೆಗಳಿಗೆ ಹೋಲಿಸುತ್ತೇನೆ. ಈ ಕುಟುಂಬದ ಸದಸ್ಯರಾಗಿ, ನಾವು ಒಂದು ಕೋಣೆ ಅಥವಾ ಮತ್ತೊಂದು ಕೋಣೆಯಲ್ಲಿರಬಹುದು, ಆದರೆ ನಾವೆಲ್ಲರೂ, ಒಂದೇ ಮನೆಯಲ್ಲಿಯೇ ವಾಸಿಸುತ್ತೇವೆ. ಅದರಂತೆಯೇ, ನಾವು ಈ ಪ್ರಾಂತ್ಯದಲ್ಲಿ ಅಥವಾ ಇನ್ನೊಂದು ಪ್ರಾಂತ್ಯದಲ್ಲಿ ವಾಸಿಸದರೇನು? ನಾವು ಭಾರತದಲ್ಲಿ ವಾಸಿಸುತ್ತೇವೆ. ನಾವು ಭಾರತೀಯರು, ನಾವು ಭಾಷೆಯ ಸಮಸ್ಯೆಗೆ ಅಷ್ಟು ಪ್ರಾಮುಖ್ಯತೆ ಕೊಡಬಾರದು".

"ನಾವು, ಜಾತಿ, ಭಾಷೆಗಳ ವ್ಯತ್ಯಾಸಗಳನ್ನು ಮರೆತು, ಅಣ್ಣ ತಮ್ಮಂದಿರಂತೆ ವರ್ತಿಸುತ್ತಿದ್ದೇವೆ. ಆದರೂ, ಭಾಷಾ- ಅಲ್ಪ ಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡಬೇಕು".

" ಸಂಸತ್ತಿನಲ್ಲಿ, ರಾಜ್ಯಗಳ ಪ್ರಾತಿನಿಧ್ಯತೆಗೆ ಸಂಬಂಧಿಸಿದ ವಿಷಯದ ಬಗ್ಗೆ ಒಂದು ಅಂಶವೇನೆಂದರೆ, ಈ ರಾಜ್ಯಗಳನ್ನು, ಉಳಿದ ರಾಜ್ಯಗಳಂತೆ ಪರಿಗಣಿಸುತ್ತಿರುವುದಿಲ್ಲ".

"ಕೆಲವು ಸಣ್ಣ ದ್ವೀಪಗಳು ಇವೆ. ಅವುಗಳಿಗೆ ಸರಕಾರದಿಂದ ವಿಶೇಷವಾದ ಗಮನ ಬೇಕು. ಕಾರಣ, ರಾಷ್ಟ್ರಪತಿಗಳಿಗೆ, ಆ ದಿಶೆಯಲ್ಲಿ, ವಿಶೇಷ ಅಧಿಕಾರಗಳನ್ನು ಕೊಟ್ಟು ಅವುಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸದಂತೆ, ಕ್ರಮ ಕೈಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ಈ ಮಸೂದೆಯಲ್ಲಿ ಅಂಥ ವ್ಯವಸ್ಥೆಗಳನ್ನು ಸೂಚಿಸಲಾಗಿದೆ".

" ನನ್ನ ಮಿತ್ರ ಶ್ರೀ ಪಿ.ಸೀತಾರಾಮಯ್ಯನವರು, ತಿಳಿಸಿದಂತೆ, ಕೇಂದ್ರ ಸರಕಾರವು ಕೆಲವು ಪ್ರದೇಶಗಳ ಸಂಬಂಧದ ಸಾರ್ವಜನಿಕರ ಹಿತಾಶಕ್ತಿಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ (ಉದಾಹರಣೆಗೆ, ಮಡಕಾಸೀರದ ಹೊಸ ರಾಜ್ಯದಲ್ಲಿನ ಕೆಲವು ಪ್ರದೇಶಗಳ ಸೇರಿಸುವಿಕೆ), ಅವರ ವಿಚಾರಕ್ಕೆ ನನ್ನ ಒಪ್ಪಿಗೆ ಇದೆ. ನಮ್ಮ ರಾಜ್ಯದಲ್ಲಿಯೂ, ಮಡಕಾಸೀರ್, ಕಾಸರಗೋಡ ಮತ್ತು ಹೊಸೂರುಗಳನ್ನು ಸೇರಿಸಬೇಕಿತ್ತು. ಆದರೆ, ಸಂದರ್ಭವು ಆ ರೀತಿಯಾಗಿ ಮಾಡಲು ಕೇಂದ್ರ ಸರಕಾರಕ್ಕೆ ಮತ್ತು ಸಂಸತ್ತಿಗೆ ಅವಕಾಶ ನೀಡಲಿಲ್ಲ. ಆದರೂ, ಮುಂದೆ, ಆ ದಿಶೆಯಲ್ಲಿ ಕೇಂದ್ರ ಸರಕಾರವು, ಆ ಎಲ್ಲ ಬೇಡಿಕೆಗಳನ್ನು ಈಡೇರಿಸಬಹುದೆಂಬ ಆಶೆ ನನಗಿದೆ".

## 5. ಜೋನಲ್ ವಿಭಾಗಗಳ ಕುರಿತು ಪ್ರಶ್ನೋತ್ತರಗಳು : (27ನೇ ಸೆಪ್ಟೆಂಬರ್ 1956. )

ಪ್ರಶ್ನೆ : ಶ್ರೀ ಎಂ.ಲಿಂಗಣ್ಣಾ ( ನಂಜನಗೂಡು):

ಜೋನಲ್ ವಿಭಾಗಳನ್ನು ರಚಿಸುವಲ್ಲಿ, ಜೋನ್ಸಗಳನ್ನು ರಚಿಸುವಾಗ, ಸರಕಾರಕ್ಕೆ ಹೆಚ್ಚಿನ ಖರ್ಚು ಎಷ್ಟು ತಗಲುತ್ತದೆ ಎಂಬುದನ್ನು ತಿಳಿಸುವಿರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ ( ಮುಖ್ಯ ಮಂತ್ರಿಗಳು):

ನಾಲ್ಕು ಕಮೀಷನರ್‌ರ ವಿಭಾಗಗಳನ್ನು (ಜೋನಲ್ ವಿಭಾಗಗಳು), ರಚಿಸಲು ಯೋಚಿಸಲಾಗಿದೆ. ಪ್ರತಿ ಜ್ಹೋನಿಗೆ ತಗಲುವ ಖರ್ಚು ಸುಮಾರು 1 ಲಕ್ಷ ರೂಪಾಯಿಗಳು.

ಪ್ರಶ್ನೆ : ಶ್ರೀ ಲಿಂಗಣ್ಣಾ :

ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ, ಈ ಕಮೀಷನರರ ವಿಭಾಗಗಳಿಂದ ಲಾಭಗಳೇನು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಮಾನ್ಯರೇ, ತುಲನಾತ್ಮಕವಾಗಿ ಅವಲೋಕಿಸಿದಾಗ ಪ್ರದೇಶವು ಬಹಳ ದೊಡ್ಡದಾಗಿದೆ. ಎಲ್ಲ ಜನರು, ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ, ರಾಜಧಾನಿಯ ಸ್ಥಳಕ್ಕೆ ಬರಲು ಬಹಳ ಕಷ್ಟವಾಗುತ್ತದೆ. ಕಾರಣ ಅವರಿಗೆ ನ್ಯಾಯ ಒದಗಿಸಲು, ಅವರ ಸ್ಥಳದಲ್ಲಿಯೇ ಇಂಥ ವಿಭಾಗಗಳು ಇರುವುದು ಸಮಂಜಸ.

ಪ್ರಶ್ನೆ : ಎಂ. ಲಿಂಗಣ್ಣ :

ಕೆಲವು ಜಿಲ್ಲಾ ಹೆಡ್ ಕ್ವಾರ್ಟರ್ಸ್‌ಗಳು, ವಿಭಾಗೀಯ ಹೆಡ್ ಕ್ವಾರ್ಟರ್ಸಗಳಿಂದ, ದೂರವಿರುವುದರಿಂದ, ಅವುಗಳ ರಚನೆಯ ಉದ್ದೇಶ ಸಾಧಿಸಿದಂತಾಗುತ್ತದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಈ ಮೊದಲೇ ನಾನು ತಿಳಿಸಿದಂತೆ, ಇದೆಲ್ಲಾ ತಾತ್ಕಾಲಿಕವಾದ ವ್ಯವಸ್ಥೆ. ಈ ರೀತಿಯ ತಾತ್ಪೂರ್ತಿಕ ವ್ಯವಸ್ಥೆಗಳನ್ನು ಕೆಲವು ಆಡಳಿತಾತ್ಮಕ ಕಠಿಣತೆಗಳ ಅನುಸಾರ ಮಾಡಲಾಗಿದೆ. ಮಾನ್ಯ ಸದಸ್ಯರಿಗೆ, ಹೈದರಾಬಾದ್, ಬಾಂಬೆ ಮತ್ತು ಮೈಸೂರುಗಳಲ್ಲಿರುವ ಕಾನೂನುಗಳು ವ್ಯತ್ಯಾಸ ಹೊಂದಿವೆಯೆಂಬುದು ಗೊತ್ತಿರಬೇಕು. ಆಡಳಿತ ವ್ಯವಸ್ಥೆಯಲ್ಲಿಯೂ, ಸ್ವಲ್ಪ ಸೂಕ್ಷ್ಮ ವ್ಯತ್ಯಾಸ ಇರುತ್ತದೆ. ಕಾರಣ, ಅವುಗಳ ಪ್ರದೇಶಗಳ ಅನುಸಾರ ನಿರ್ಧರಿಸಲಾಗಿದೆ. ಅಂದರೆ, ಬೊಂಬೆ ಮತ್ತು ಹೈದರಾಬಾದ್‌ಗಳಿಗೆ ಒಂದೊಂದು ವಿಭಾಗ ಮತ್ತು ಮೈಸೂರಿಗೆ ಎರಡು ವಿಭಾಗಗಳು.

ಪ್ರಶ್ನೆ : ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ :

ಮೈಸೂರನ್ನು ಡಿವಿಜನ್‌ಗಳಾಗಿ ವಿಂಗಡಿಸಿದ್ದೀರಿ. ಅದನ್ನು ಸರಿಯಾದ ರೀತಿಯಲ್ಲಿ ದೂರದಲ್ಲಿರುವ ಪ್ರದೇಶಗಳಿಗೆ ಅನುಕೂಲವಾಗುವ ಹಾಗೆ ಮಾಡಿದ್ದೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಎಲ್ಲರಿಗೂ ಸರಿಯಾಗಿರುವಂತೆ ದೂರ ಒಂದೇ ಸಮನಾಗಿರುವಂತೆ ಮಾಡಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಡಿವಿಜನಲ್ ಹೆಡ್ ಕ್ವಾರ್ಟರ್ ಮಾಡುವಾಗ ಅನೇಕ ವಿಷಯಗಳನ್ನು ಗಮನಿಸಬೇಕು. ಮೊದಲನೆಯದು ದೂರ ಎಷ್ಟಿದೆಯೆಂಬುದು, ಎರಡನೆಯದು ಸ್ಥಳದಲ್ಲಿರತಕ್ಕ ಸೌಕರ್ಯಗಳು, ಆಮೇಲೆ ಆಡಳಿತ ಸೌಕರ್ಯಗಳು ಇವನ್ನೆಲ್ಲಾ ಗಮನಿಸಿ ಡಿವಿಜನಲ್ ಹೆಡ್‌ಕ್ವಾಟರ್ಸ್‌ನ್ನು ನಿರ್ಧರಿಸಬೇಕು. ಈಗ ನಿರ್ಧರಿಸುವುದು ತಾತ್ಕಾಲಿಕ. ಇವುಗಳ ವಿಚಾರದಲ್ಲಿ ಹೊಸ ಸಂಸ್ಥಾನ ಪ್ರಾರಂಭವಾದ ಮೇಲೆ ಹೊಸ ಸರ್ಕಾರ ತೀರ್ಮಾನ ಕೈಕೊಳ್ಳಬೇಕು.

ಪ್ರಶ್ನೆ : ಶ್ರೀ ಎಸ್. ಗೋಪಾಲ್ ಗೌಡ :

ನಾಲ್ಕು ಯಾವ ವಿಭಾಗಗಳಿಗೆ ಕಮೀಷನರ್‌ರನ್ನು ನೇಮಿಸಲು ಸೂಚಿಸಲಾಗಿದೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಮೈಸೂರು, ಬೆಂಗಳೂರು, ಬೆಳಗಾಂವ ಮತ್ತು ಗುಲಬರ್ಗಾ.

ಪ್ರಶ್ನೆ : ಶ್ರೀ ಎಸ್. ಗೋಪಾಲ ಗೌಡ :

ಶಿವಮೊಗ್ಗೆಯಲ್ಲಿ ಒಂದು ವಿಭಾಗ ಸ್ಥಾಪಿಸಲು ಸರ್ಕಾರಕ್ಕೆ ಶಿವಮೊಗ್ಗ ಜಿಲ್ಲೆಯಿಂದ ಮನವಿ ಬಂದಿದೆಯೇ?

ಉತ್ತರ : ಕಡಿದಾಳ ಮಂಜಪ್ಪ :

ಹೌದು, ಅಲ್ಲಿ ಸಾಕಷ್ಟು ಮನವಿಗಳಿದ್ದವು.

ಪ್ರಶ್ನೆ : ಶ್ರೀ ಎಸ್. ಗೋಪಾಲಗೌಡ :

ಈ ಡಿವಿಜನ್‌ಗಳನ್ನು ತಾತ್ಕಾಲಿಕವಾಗಿ ಮಾತ್ರ ಆರಂಭ ಮಾಡಿದ್ದೇವೆ. ಅದರಲ್ಲಿ ಬದಲಾವಣೆಯಾಗುತ್ತದೆ ಎಂದು ಹೇಳಿದ್ದೀರಿ. ಈಗ ತಾತ್ಕಾಲಿಕವಾಗಿ ಎಷ್ಟು ಕಾಲದವರೆಗೆ ಮಾಡಿದೆ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹೊಸ ಪ್ರಾಂತ್ಯ ಪ್ರಾರಂಭವಾದ ನಂತರ ಕೆಲವು ಕಾಲದವರೆಗೆ ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧಾವಾದ ಕಾನೂನು ಒಂದೊಂದು ವಿಧವಾದ ಆಡಳಿತ ವ್ಯವಸ್ಥೆ ಇರುತ್ತದೆ. ಆದ್ದರಿಂದ ಒಂದೊಂದು ವಿಧವಾದ ಆಡಳಿತ ವ್ಯವಸ್ಥೆ ಇರುವ ಕಡೆ ಒಂದೊಂದು ಡಿವಿಜನ್ ತಾತ್ಕಾಲಿಕವಾಗಿ ಏರ್ಪಾಡು ಮಾಡಿದೆ.

ಪ್ರಶ್ನೆ : ಶ್ರೀ ಜಿ. ಶಿವಪ್ಪ

ತಾತ್ಕಾಲಿಕವಾಗಿ ತೀರ್ಮಾನ ತೆಗೆದುಕೊಳ್ಳುವ ಅವಶ್ಯಕತೆ ಏನಿತ್ತು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಅದಕ್ಕೆ ಕಾರಣ ಹೇಳಿದೆ. ಬೊಂಬಾಯಿ ಪ್ರಾಂತ್ಯದ ಪ್ರದೇಶದಲ್ಲಿರತಕ್ಕ ಕಾನೂನು ಮೈಸೂರಿನಲ್ಲಿಲ್ಲ, ಮೈಸೂರು ಸಂಸ್ಥಾನದಲ್ಲಿರುವ ಕಾನೂನು, ಹೈದರಾಬಾದು, ಮದರಾಸುಗಳಲ್ಲಿಲ್ಲ. ಆದ್ದರಿಂದ ಯಾವ ಪ್ರದೇಶದಲ್ಲಿ ಯಾವ ಕಾನೂನಿದೆಯೋ ಯಾವ ಆಡಳಿತವಿದೆಯೋ, ಅದನ್ನೇ ಸ್ವಲ್ಪ ಕಾಲ ಮುಂದುವರಿಸಿಕೊಂಡು ಹೋಗಬೇಕಾದದ್ದು ಅಗತ್ಯ. ಇಡೀ ಸಂಸ್ಥಾನಕ್ಕೆ ಅನ್ವಯಿಸುವಂತೆ ಒಂದೇ ವಿಧವಾದ ಆಡಳಿತ ವ್ಯವಸ್ಥೆ ಒಂದೇ ವಿಧವಾದ ಕಾನೂನುಗಳು ಜಾರಿಗೆ ಬರುವವರೆಗೆ ತಾತ್ಕಾಲಿಕವಾಗಿ ಡಿವಿಜನಲ್ ಹೆಡ್‌ಕ್ವಾರ್ಟರುಗಳನ್ನು ಆಯಾ ಪ್ರದೇಶಕ್ಕೆ ಒಂದೊಂದರಂತೆ ನಿಗದಿ ಮಾಡುವುದು ಸೂಕ್ತವೆಂದು ಕಂಡುಬಂದುದರಿಂದ ಈ ರೀತಿ ತೀರ್ಮಾನ ಕೈಕೊಂಡಿದೆ.

ಪ್ರಶ್ನೆ : ಶ್ರೀ ಎಚ್. ಪರಮೇಶ್ವರಪ್ಪ :

ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಇವುಗಳನ್ನು ಸೇರಿಸಿ ಒಂದು ಡಿವಿಜನಲ್ ಹೆಡ್‌ಕ್ವಾರ್ಟರ್ ಮಾಡಿದರೆ ನೆಟ್ಟಗಿರುತ್ತದಲ್ಲವೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹೌದು, ನೆಟ್ಟಗಿರುತ್ತದೆಂದು ಹೇಳಿದರು.

ಪ್ರಶ್ನೆ : ಶ್ರೀ ಟಿ. ಹನುಮಯ್ಯ :

ಚಿತ್ರದುರ್ಗ ಮಧ್ಯ ಪ್ರದೇಶವಾಗಿಯೂ ಪಾಳೆಯಗಾರರಿದ್ದ ಜಾಗವಾಗಿಯೂ ಇರುವುದರಿಂದ ಅಲ್ಲೊಂದು ಡಿವಿಜನಲ್ ಹೆಡ್ ಕ್ವಾರ್ಟರನ್ನು ತೆರೆಯಲು ಯೋಚಿಸುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನಾವು ಪಾಳೆಯಗಾರರ ಆಡಳಿತವನ್ನು ಪುನಃ ಸ್ಥಾಪನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಪ್ರಶ್ನೆ : ಶ್ರೀ ವೈ. ಎಂ. ಚಂದ್ರಶೇಖರಯ್ಯ :

ಹಳೆಯ ಮೈಸೂರನ್ನು 2 ಡಿವಿಜನ್ ಮಾಡಿ ಹೊಸದಾಗಿ ಬರುವ ಕರ್ನಾಟಕ ಪ್ರದೇಶವನ್ನು 2 ಡಿವಿಜನ್ ಮಾಡಿರುವುದೇಕೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಆದಕ್ಕಾಗಲೇ ಉತ್ತರ ಹೇಳಿದ್ದೇನೆ.

ಪ್ರಶ್ನೆ : ಶ್ರೀ ವೈ. ಯಂ. ಚಂದ್ರಶೇಖರಯ್ಯ :

ತಾವಿಲ್ಲಿ ಕೇವಲ ತಾತ್ಕಾಲಿಕವೆಂದು ಹೇಳಿದ್ದೀರಿ. ಆದ್ದರಿಂದ ನಾವು ಕೇಳುತ್ತಿರುವ ರೀತಿ ಮಾಡಿದ್ದರೆ ಆಗ ನಿಮ್ಮ ರಾಜ್ಯವೇನೂ ಬದಲಾವಣೆಯಾಗುತ್ತಿರಲಿಲ್ಲ ಅಲ್ಲವೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಸಾರ್ವಜನಿಕರುಗಳಿಗೆ ಹೆಚ್ಚಿನ ಉಪಯೋಗವಾಗತಕ್ಕ ರೀತಿಯಲ್ಲಿ ನಾವೀಗ ತೀರ್ಮಾನ ಮಾಡಿದ್ದೇವೆ.

ಪ್ರಶ್ನೆ : ಶ್ರೀ ಟಿ. ಶಾಂತಪ್ಪ :

ತಾವು ಈ ಚಿಕ್ಕಮಗಳೂರು ಜಿಲ್ಲೆಯನ್ನೇ ಒಂದು ಪ್ರತ್ಯೇಕ ಡಿವಿಜನ್ನಾಗಿ ಏಕೆ ಮಾಡ ಬಾರದಾಗಿತ್ತು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹೊಸ ಸರ್ಕಾರ ಬಂದ ಮೇಲೆ ತಾವು ಅವರ ಮುಂದೆ ತಮ್ಮ ಮನೋಭಿಪ್ರಾಯವನ್ನಿಡಬಹುದು.

Qstn. Sri Mulka Govinda Reddy :-

May I know the powers and functions of these zonal commissioners ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಇದು ಒಂದು ದೊಡ್ಡ ಹೇಳಿಕೆ. ಇದನ್ನು ಸದನದಲ್ಲಿ ಮಂಡಿಸಬೇಕು. ಸಂಕ್ಷಿಪ್ತದಲ್ಲಿ ಹೇಳುವಾದರೆ, ಅವರು ಸ್ಥಳೀಯ ಸರಕಾರದ ಮತ್ತು ರೆವಿನ್ಯೂ ಕಮೀಷನರ್‌ರ ಸಲುವಾಗಿ ಅಧಿಕಾರಗಳನ್ನು ಚಲಾಯಿಸುತ್ತಾರೆ.

ಪ್ರಶ್ನೆ : ಶ್ರೀ ಮುಲ್ಕಾ ಗೋವಿಂದ ರೆಡ್ಡಿ :

ಪ್ರಜಾ ಸತ್ತಾತ್ಮಕ ವ್ಯವಸ್ಥೆಯಲ್ಲಿ ಸ್ಥಳೀಯ ಸರ್ಕಾರದ ಸಲುವಾಗಿ ಪ್ರತ್ಯೇಕ ಕಮೀಷನರ್‌ರಿರುವುದು ಸಮಂಜಸವಲ್ಲ.

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನಾವು ಅದರ ಸಲುವಾಗಿಯೇ, ಖರ್ಚನ್ನು ಹೆಚ್ಚಿಸುವಂತಿಲ್ಲ. ವಿಭಾಗಗಳು ಮತ್ತು ವಿಭಾಗೀಯ ಕಮೀಷನರ್‌ರು ಇರುವಾಗ ಎಸ್.ಜಿ. ಕಮೀಷನರ್ ಮತ್ತು ಕಂದಾಯ ಕಮೀಷನರ್‌ರ ಹುದ್ದೆಗಳನ್ನು ಪುನಃ ಹೊಂದಲು ಅರ್ಥವಿಲ್ಲ.

ಪ್ರಶ್ನೆ : ಶ್ರೀ ಹುಚ್ಚೇಗೌಡ :

ತಾವು ಖರ್ಚನ್ನು ಮಾಡಲು ಹೇಗೆ ಮಾಡಿದ್ದೇವೆಂದು ತಿಳಿಸಿದ್ದೀರಿ. ಈ ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಜ್ ಬಾಬುಗಳಿಗೇಕೆ ಒಂದು ಪ್ರತ್ಯೇಕ ಇಲಾಖೆಯಿಟ್ಟಿದ್ದೀರಿ ? ಇವುಗಳನ್ನು ಇದರಲ್ಲೇ ಏಕೆ ಸೇರಿಸಬಾರದಿತ್ತು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನನ್ನ ಅಭಿಲಾಷೆಯು ಅದೇ ಆಗಿತ್ತು. ಆದರೆ ಹೈದರಾಬಾದಿನಲ್ಲಿಯೂ ಈಗ ಒಂದು ಪ್ರತ್ಯೇಕ ಎಕ್ಸೈಜ್ ಇಲಾಖೆ ಇದೆ. ಅದೇ ರೀತಿ ನಮ್ಮ ಮೈಸೂರಿನಲ್ಲೂ ಒಂದಿದೆ. ಅದಕಾರಣ ಇದು ಹಣದ ವಹಿವಾಟಕ್ಕೆ ಸಂಬಂಧ ಪಟ್ಟಿದ್ದರಿಂದ ಇದನ್ನೊಂದು ಪ್ರತ್ಯೇಕ ಇಲಾಖೆಯನ್ನಾಗಿಡುವುದೇ ಸೂಕ್ತವೆಂದು ಭಾವಿಸಿ ಹೀಗೆ ಮಾಡಲಾಗಿದೆ.

## 6. ರಾಜ್ಯಗಳ ಮರುವಿಂಗಡಣೆಯ ಬಗ್ಗೆ ( ಹೊಸ ರಾಜ್ಯಕ್ಕೆ ಅಧಿಕಾರಿಗಳ ಆಯ್ಕೆ) ಕುರಿತು ಶ್ರೀ ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ. ವಿಧಾನ ಪರಿಷತ್ತು 27ನೇ ಸೆಪ್ಟೆಂಬರ್ 1956.

ಪ್ರಶ್ನೆ : ಶ್ರೀ ಗೋರುರು ರಾಮಸ್ವಾಮಿ ಅಯ್ಯಂಗಾರ (ನಾಮಕರಣ ಹೊಂದಿದ):

ಅ) ರಾಜ್ಯಗಳ ಮರುವಿಂಗಡಣೆ ಪ್ರಕಾರ, ಬೇರೆ ರಾಜ್ಯಗಳಲ್ಲಿರುವ ಅಧಿಕಾರಿಗಳನ್ನು ಹೊಸ ರಾಜ್ಯಕ್ಕೆ ಆಯ್ಕೆ ಮಾಡಲು, ಸರಕಾರವು ಯಾವ ವ್ಯವಸ್ಥೆಗಳನ್ನು ಮಾಡುತ್ತಿರುವುದು ಎಂಬುದರ ಬಗ್ಗೆ,

ಬ) ಬೇರೆ ರಾಜ್ಯಗಳಲ್ಲಿರುವ ಅಧಿಕಾರಿಗಳ ಪಟ್ಟಿ ಇದೆಯೇ ಎಂಬುದರ ಬಗ್ಗೆ,

ಕ) ಈ ಅಧಿಕಾರಿಗಳ ಆಯ್ಕೆಯು ಮೈಸೂರು ರಾಜ್ಯ ಅಥವಾ ಸಂಪೂರ್ಣ ರಾಜ್ಯದಿಂದ ವರ್ಗಾವಣೆಯಾದ ಸರಹದ್ದುಗಳಿಗೆ, ಅನ್ವಯವಾಗುತ್ತದೆ ಎಂಬುದರ ಬಗ್ಗೆ,

ಡ) ಈ ರಾಜ್ಯಕ್ಕೆ ಸಂಬಂಧಿಸಿದ ಬೇರೆ ರಾಜ್ಯಗಳಲ್ಲಿರುವ ಅಧಿಕಾರಿಗಳ ಪಟ್ಟಿಯನ್ನು ತಯಾರಿಸಲಾಗಿದೆಯೇ, ಈ ಮೈಸೂರು ರಾಜ್ಯಕ್ಕೆ ಆಯ್ಕೆ ಯಾಗಲು ಇಚ್ಚಿಸುವ ಅಧಿಕಾರಿಗಳ ವಿಷಯವನ್ನು ತನಿಖೆ ನಡೆಸಲಾಗಿದೆಯೇ ಎಂಬುದರ ಬಗ್ಗೆ,

ಇ) ಮೈಸೂರಿನ ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ, ಬೇರೆ ರಾಜ್ಯಗಳ ಮಂತ್ರಿಗಳ ಸಮ್ಮೇಳನದಲ್ಲಿ ಈ ವಿಷಯಗಳನ್ನು ಚರ್ಚಿಸಲಾಯಿತೇ? ಎಂಬುದರ ಬಗ್ಗೆ ತಿಳಿಸುವಿರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ ( ಮುಖ್ಯ ಮಂತ್ರಿಗಳು):

ಪ್ರಶ್ನೆಗಳು ಅ) ದಿಂದ ಇ), ಸ್ಪಷ್ಟವಿಲ್ಲ, ಸೆಕ್ಷನ್ 115 (1)ರ, 1956ರ ರಾಜ್ಯಗಳ ಮರುವಿಂಗಡಣಾ ಕಾಯ್ದೆಯ ಪ್ರಕಾರ, ಈಗಿರುವ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ, ವ್ಯಕ್ತಿಗಳನ್ನು, ಯಾವುದೇ ಪ್ರಸ್ತುತದಲ್ಲಿರುವ, ರಾಜ್ಯಗಳ ಉತ್ತರಾಧಿಕಾರಿ ರಾಜ್ಯಗಳಿಗೆ ಹಂಚಲಾಗುವುದು. ಕಾರಣ, ಹೊಸ ಮೈಸೂರು ರಾಜ್ಯದ ಮೂಲ ಸ್ಥಳದ ವ್ಯಕ್ತಿಗಳನ್ನು ಹೊಸ ರಾಜ್ಯದ ಸೇವೆಗಾಗಿ ತೆಗೆದುಕೊಳ್ಳುವುದು ಮತ್ತು ವ್ಯಕ್ತಿಗಳು ಐದು ರಾಜ್ಯಗಳಲ್ಲಿನ ಒಂದು ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳನ್ನು, ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ.

ಪ್ರಶ್ನೆ : ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ.

ಈಗ ಬೆಳಗಾಂನಲ್ಲಿ ಕನ್ನಡ ಅಧಿಕಾರಿಗಳಿದ್ದರೆ, ಅವರನ್ನು ನವೆಂಬರ್ 1ನೇ ತಾರೀಖು ಆದ ಮೇಲೆ ಇಲ್ಲಿಗೆ ಕರೆಸಿಕೊಳ್ಳುತ್ತೀರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಉತ್ತರದಲ್ಲಿ ತಿಳಿಸುರುವಂತೆ ಈ ಕಾನೂನಿನ 115ನೇ ಸೆಕ್ಷನನಲ್ಲಿ ಈ ಅಧಿಕಾರಿಗಳನ್ನು ಯಾವ ರೀತಿ ಹೊಸ ರಾಜ್ಯಕ್ಕೆ ವರ್ಗಾಯಿಸಬೇಕೆಂಬುದು ವಿಧಾಯಕವಾಗಿದೆ. ಈಗ ಕೆಲವು

ತತ್ವಗಳನ್ನು ಕೇಂದ್ರ ಸರ್ಕಾರ ಮತ್ತು ಸಂಸ್ಥಾನ ಸರ್ಕಾರಗಳು ಒಪ್ಪಿಕೊಂಡಿದ್ದಾರೆ, ಈ ತತ್ವಗಳ ರೀತಿ ಯಾವ ಯಾವ ಪ್ರದೇಶದಲ್ಲಿ ಯಾವ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಅವರು ಅಯಾ ಪ್ರದೇಶದ ಜೊತೆಗೆ ಹೊಸ ಪ್ರಾಂತ್ಯಕ್ಕೆ ಬರುತ್ತಾರೆ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಅಧಿಕಾರಿಗಳಿದ್ದಾರೋ, ಅವರು ನಮ್ಮ ಸಂಸ್ಥಾನಕ್ಕೆ ಬರುತ್ತಾರೆ. ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಅಧಿಕಾರಿಗಳು ಸರಕಾರದ ಆದೇಶದಂತೆ, ಹೊಸ ಮೈಸೂರು ರಾಜ್ಯದ ಅಧಿಕಾರಿಗಳಾಗುವರು. ಈಗ ಕೊಡಗಿನಲ್ಲಿರುವವರು ಪೂರ್ತಿ ಎಲ್ಲರೂ ಬರುತ್ತಾರೆ. ಸೆಕ್ರೆಟೆರಿಯೇಟ್ ಸಿಬ್ಬಂದಿಗಳಲ್ಲಿ ದಾಮಾಷಾ ಪ್ರಕಾರ ಹಂಚಿಕೆ ಮಾಡುತ್ತಾರೆ.

ಪ್ರಶ್ನೆ : ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ್ :

ಹೈದರಾಬಾದಿನಲ್ಲಿರುವ ಕನ್ನಡ ಅಧಿಕಾರಿಗಳು ಕೂಡ ಇಲ್ಲಿಗೇ ಬರುತ್ತಾರೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಯಾರು ಯಾರು ಕನ್ನಡ ಅಧಿಕಾರಿಗಳು ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದಾರೋ, ಆ ಎಲ್ಲ ಕನ್ನಡ ಅಧಿಕಾರಿಗಳನ್ನು ಈ ಮೈಸೂರು ಸಂಸ್ಥಾನಕ್ಕೆ ತೆಗೆದುಕೊಳ್ಳುಗುವುದಕ್ಕಾಗುವುದಿಲ್ಲ. ಕೇಂದ್ರ ಸರಕಾರ ಗೊತ್ತು ಮಾಡಿರುವ ನಿಯಮಗಳು ಮತ್ತು ತತ್ವಗಳಿಗನುಸಾರವಾಗಿ, ಈಗ ಅಧಿಕಾರಿಗಳು ಯಾವ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೋ, ಆ ಪ್ರದೇಶದ ಜೊತೆಗೇ ಆ ರಾಜ್ಯಕ್ಕೆ ಬರುತ್ತಾರೆ.

ಪ್ರಶ್ನೆ : ಶ್ರೀಗೋರೂರು ರಾಮಸ್ವಾಮಿ ಐಯ್ಯಂಗಾರ್ :

ಈಗ ಬೊಂಬಾಯಿಯಲ್ಲಿರುವ ಕೆಲವು ಕನ್ನಡ ಅಧಿಕಾರಿಗಳನ್ನು ವಿಶಾಲ ಮೈಸೂರಾದ ಮೇಲೆ ಅಲ್ಲಿಗೆ ಹೋಗುತ್ತಾರೆಂದು ಆ ಸರ್ಕಾರ ಕೇಳಿರುವುದು ನಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಕೆಲವರನ್ನು ನಮ್ಮ ಮೈಸೂರು ಸಂಸ್ಥಾನಕ್ಕೆ 'ಅಲಾಟ್' ಮಾಡಿದ್ದಾರೆ. ರಾಜ್ಯ ಪುನರ್ವಿಂಗಡಣೆ ಕಾನೂನಿನ ಪ್ರಕಾರ, ನಾನು ಆಗಲೇ ಹೇಳಿದ ಹಾಗೆ, ನಾವೂ ಕೇಂದ್ರ ಸರ್ಕಾರದವರೂ ತೀರ್ಮಾನ ಮಾಡಿರುವ ತತ್ವಗಳ ಪ್ರಕಾರ ಹೊಸ ಮೈಸೂರು ರಾಜ್ಯಕ್ಕೆ ಯಾವ ಯಾವ ಅಧಿಕಾರಿಗಳು ಬರಬೇಕೆಂಬುದನ್ನು ಬೊಂಬಾಯಿ ಸರ್ಕಾರದವರು ಹಂಚಿಕೆ ಮಾಡಿದ್ದಾರೆ.

ಪ್ರಶ್ನೆ : ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ್ :

ಮೈಸೂರು ಪ್ರಾಂತ್ಯಕ್ಕೆ ಸೇರದೇ ಇರುವ ಪ್ರದೇಶದ ಕನ್ನಡ ಅಧಿಕಾರಿಗಳನ್ನೂ ಕೇಳಿದ್ದಾರೆ. ಉದಾಹರಣೆಗೆ, ಗುಜರಾತಿಯವರನ್ನು ಮೈಸೂರಿಗೆ ಹೋಗುತ್ತೀರಾ ಎಂದು ಬೊಂಬಾಯಿ ಸರ್ಕಾರದವರು ಕೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಕೇಳಿರಬಹುದು.

ಪ್ರಶ್ನೆ : ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ್ :

ಹಾಗಿದ್ದರೆ, ಮೈಸೂರಿಗೆ ಸೇರದೇ ಇರುವ ಬೊಂಬಾಯಿ ಪ್ರಾಂತದ ಅಧಿಕಾರಿಗಳನ್ನೂ ಇಲ್ಲಿಗೆ ತೆಗೆದುಕೊಳ್ಳುತ್ತೀರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನವೆಂಬರ್ ಒಂದರೊಳಗೆ, ಬೊಂಬಾಯಿ ಸರ್ಕಾರದವರು ಒಪ್ಪಿರತಕ್ಕ ರೂಲ್ಸ್ ಪ್ರಕಾರ ಇಲ್ಲಿಗೆ ಬರುವ ಅಧಿಕಾರಿಗಳ್ಯಾರು ಎಂಬುದನ್ನು ತೀರ್ಮಾನ ಮಾಡುತ್ತಾರೆ. ಅವರು ಇಲ್ಲಿಗೆ ಬರುವುದಕ್ಕೆ ಸಿದ್ಧವಾಗಿದ್ದರೆ ಬರುತ್ತಾರೆ.

ಪ್ರಶ್ನೆ : ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ್

ಗುಜರಾತಿನ ಕನ್ನಡಿಗರು ಇಲ್ಲಿಗೆ ಬಂದರೆ ತೆಗೆದುಕೊಳ್ಳುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಅವರೂ ನಾವೂ ಒಪ್ಪಿರತಕ್ಕ ನಿಯಮಗಳ ಪ್ರಕಾರ, ತತ್ವಗಳ ಪ್ರಕಾರ ಅಲ್ಲಿರುವ ಅಧಿಕಾರಿಗಳು ಬರುವುದಕ್ಕೆ ಸಿದ್ಧವಾಗಿದ್ದರೆ ತೆಗೆದುಕೊಳ್ಳಬಹುದು. ಇದನ್ನು ಬಿಟ್ಟು ಎಲ್ಲರನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಪ್ರಶ್ನೆ : ಗುಜರಾತಿನಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು, ಮೈಸೂರಕ್ಕೆ ಹೋಗುವ ಬಗ್ಗೆ ಬಾಂಬೆ ಸರಕಾರವು ಕೇಳಿದೆ, ಎಂಬ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅದು ಹೇಗೆ ಕಲ್ಪಿತ ಪ್ರಶ್ನೆ ಯಾಗುತ್ತದೆ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಕೇಂದ್ರ ಸರಕಾರದ ತತ್ವಗಳ ಒಪ್ಪಿಗೆಯ ಪ್ರಕಾರ ಮತ್ತು ರಾಜ್ಯಗಳ ಮರುವಿಂಗಡಣೆಯ ಕಾಯ್ದೆಯ ಪ್ರಕಾರ, ನಾವು ಅಧಿಕಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ನಾವು ಎಲ್ಲ ಅಧಿಕಾರಿಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ, ಅವರು ಭಾರತದಲ್ಲಿ ಸೇವೆ ಸಲ್ಲಿಸುತ್ತಿರುವ ಕನ್ನಡಿಗರಿರಬಹುದು. ಕೇಂದ್ರ ಸರಕಾರದ ತತ್ವಗಳ ಪ್ರಕಾರ, ಒಂದು ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳನ್ನು, ಒಂದು ವೇಳೆ ವರ್ಗಾವಣೆ ಮಾಡಿದಲ್ಲಿ ಅವರು ಈ ರಾಜ್ಯದ ಅಧಿಕಾರಿಗಳಾಗುತ್ತಾರೆ. ಸೆಕ್ರೆಟರಿಯೆಟ್ ಸಿಬ್ಬಂದಿಗೆ ಸಂಬಂಧಿಸಿದಂತೆ, ಪರಸ್ಪರ ಸಮಾಲೋಚನೆಯ ನಂತರ, ಅವರನ್ನು ಹಂಚಲಾಗುವುದು.

ಪ್ರಶ್ನೆ : ಶ್ರೀ ಗೋರೂರು ರಾಮಸ್ವಾಮಿ ಐಯ್ಯಂಗಾರ :

ಮೈಸೂರಿಗೆ ಸೇರುವ ಇತರ ಪ್ರಾಂತಗಳ ಕನ್ನಡ ಭಾಗಗಳಿಂದ ಬರುವುದೇನೋ ಸರಿ, ಆ ಪ್ರಾಂತದವರು ಕೇಳಿರುವಂತೆ ಇತರರನ್ನು ಇಲ್ಲಿಗೆ ತೆಗೆದುಕೊಳ್ಳುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಈ ವಿಷಯವನ್ನು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಇಂಟರ್ ಸ್ಟೇಟ್ ಆಫೀಸರ್‌ಗಳ ಸಮಿತಿ ಇದೆ. ಅವರು ಚರ್ಚೆ ಮಾಡಿ ಯಾರು ಯಾರು ಎಲ್ಲೆಲ್ಲಿಗೆ ಹೋಗಬೇಕೆಂಬುದನ್ನು

ನಿಗದಿ ಮಾಡಿದ್ದಾರೆ. ಭಾಷೆಯನ್ನು ಅಧಾರವಾಗಿಟ್ಟುಕೊಂಡು, ಸಾಮಾನ್ಯವಾಗಿ, ಕನ್ನಡ ಮಾತನಾಡುವವರು ಮೈಸೂರಿಗೆ ಬರಬಹುದೆಂಬ ತತ್ವವನ್ನು ಒಪ್ಪಿಕೊಂಡಿದ್ದಾರೆ. ಇಂಟರ್ ಸ್ಟೇಟ್ ಅಧಿಕಾರಿಗಳ ಸಮಿತಿ ಮಾಡಿರುವ ತೀರ್ಮಾನಗಳು ಇಂಟರ್ ಸ್ಟೇಟ್ ಮಂತ್ರಿಗಳ ಸಮಿತಿಯ ಮುಂದೆ ಬಂದು ಪರಿಶೀಲನೆಯಾಗಿ ತೀರ್ಮಾನವಾಗುತ್ತದೆ. ಆದುದರಿಂದ, ಇವರು ಬೇಕು, ಅವರು ಬೇಡ ಎನ್ನುವ ಹಾಗಿಲ್ಲ. ಈ ಅಧಿಕಾರಿಗಳನ್ನು ಆ ರಾಜ್ಯಕ್ಕೆ ಸೇರಿಸಿಕೊಳ್ಳುವುದು ಬಾಂಬೆ ಸರ್ಕಾರದ ನಿರ್ಧಾರಕ್ಕೆ ಬಿಡಲಾಗಿದೆ.

ಪ್ರಶ್ನೆ : ಶ್ರೀ **ಗೋರೂರು** ರಾಮಸ್ವಾಮಿ ಐಯ್ಯಂಗಾರ್ :

ಏಕೆಂದರೆ, ಬಾಂಬೆ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಜನರು ಮೈಸೂರಿಗೆ ಹೋಗಲು ಒಪ್ಪಿದರೆ, ಮತ್ತು ಬಾಂಬೆ ಸರಕಾರವು, ಮೈಸೂರು ರಾಜ್ಯವನ್ನು ಆ ರೀತಿ ಕೇಳಿದರೆ, ಆ ವೇಳೆಯಲ್ಲಿ ಮೈಸೂರು ಸರಕಾರವು ಎಲ್ಲ ಕನ್ನಡಿಗರನ್ನು ತೆಗೆದುಕೊಳ್ಳಲು ತಯಾರಿಲ್ಲ ಎಂದು ಹೇಳಬಹುದು. ಕೊನೆಯ ಪಕ್ಷ ಇದರ ಬಗ್ಗೆಯಾದರೂ ನಂತರ ಅದು ಅವರಿಗೆ ಗೊತ್ತಿರಬೇಕು.

ಪ್ರಶ್ನೆ : ಉಪ ಸಭಾಧ್ಯಕ್ಷರು :

ಇದು ಮೈಸೂರು ಸರಕಾರವು ನಿರ್ಧರಿಸುವುದಿಲ್ಲ ಅದರೆ, ಪರಸ್ಪರ ಒಪ್ಪಂದದ ಮೇರೆಗೆ ಅದನ್ನು ಎಲ್ಲ ಪ್ರದೇಶಗಳ ಮಂತ್ರಿಗಳ ಸಮಿತಿಯು ನಿರ್ಧರಿಸುತ್ತದೆ.

ಪ್ರಶ್ನೆ : ಶ್ರೀ ಕೆ. ರಂಗಪ್ಪ :

ಕೆಳದರ್ಜೆ ನೌಕರರನ್ನು ಯಾವ ರೀತಿ ಹಂಚಿಕೆ ಮಾಡುತ್ತೀರಿ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾರು ಯಾರು ಕೆಲಸಮಾಡುತ್ತಿದ್ದಾರೋ ಅವರು ಇಲ್ಲಿಗೆ ಬರುತ್ತಾರೆ, ಹೀಗೆ.

ಪ್ರಶ್ನೆ : ಶ್ರೀ ಕೆ. ರಂಗಪ್ಪಾ :

ಬಳ್ಳಾರಿ ಮೈಸೂರಿಗೆ ಬಂದ ಮೇಲೆ ಎಷ್ಟು ಜನ ಅಧಿಕಾರಿಗಳು ಬಂದರು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನನಗೆ ಗೊತ್ತಿಲ್ಲ, ನನಗೆ ನೋಟೀಸ್ ಬೇಕು.

ಪ್ರಶ್ನೆ : ಶ್ರೀ ಕೆ. ರಂಗಪ್ಪ ;

ಬಳ್ಳಾರಿಯಲ್ಲಿರುವ ಕೆಲವು ನಾನ್ ಗೆಜೆಟೆಡ್ ಆಫೀಸರುಗಳು ಇಲ್ಲಿಗೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಒಂದು ಪ್ರದೇಶ ಇನ್ನೊಂದು ಪ್ರದೇಶದೊಡನೆ ಸೇರುವಾಗ, ಕೆಲವು ನಿಯಮಗಳನ್ನಿಟ್ಟು ಕೊಂಡು ಅಧಿಕಾರಿಗಳನ್ನು ವರ್ಗಾಯಿಸುತ್ತಾರೆ. ಬಳ್ಳಾರಿ ಮೈಸೂರಿಗೆ ಸೇರುವುದಕ್ಕೆ ಮುಂಚೆ ಒಂದು ತೀರ್ಮಾನವಾಗಿದೆ. ಅದರಂತೆ ಮೈಸೂರಿಗೆ ಯಾರ್ಯಾರು ಬರಬೇಕೋ ಅವರು ಬಂದಿದ್ದಾರೆ. ಹೊಸದಾಗಿ ತೆಗೆದುಕೊಳ್ಳುವುದು ಕಷ್ಟ.

ಪ್ರಶ್ನೆ : ಶ್ರೀ ಕೆ. ರಂಗಪ್ಪ :

ಬಳ್ಳಾರಿಯವರು ಇಲ್ಲಿಗೆ ಬರಬೇಕೆಂದು ಕೇಳುತ್ತಿದ್ದಾರೆ, ಇದು ಸಾಧ್ಯವೇ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಹೀಗೆಯೇ ಕಲ್ಕತ್ತದಲ್ಲಿರುವವರು ನಾವೂ ಬರುತ್ತೇವೆಂದು ಕೇಳುಬಹುದು, ಬೊಂಬಾಯಿ ಅಥವಾ ಬೇರೆ ಕಡೆ ಹಿಂದುಸ್ತಾನದಲ್ಲಿರುವ ಕನ್ನಡಿಗರೂ ಕೇಳಬಹುದು, ಅವರನ್ನೆಲ್ಲ ತೆಗೆದುಕೊಂಡರೆ ನಮ್ಮ ಸ್ಥಾನವಿರಬೇಕಲ್ಲವೆ ?

(ಆಧಾರ : ವಿಧಾನ ಮಂಡಲದ ನಡಾವಳಿಕೆಗಳು)

## 7. ನೂತನ ಮೈಸೂರು ರಾಜ್ಯ - ( ಸಿಬ್ಬಂದಿ ವರ್ಗದ, ಆಸ್ತಿ ಮತ್ತು ಹೊಣೆಗಳ ಮರು ಹಂಚಿಕೆ ಮೈಸೂರು ವಿಧಾನ ಸಭೆ - 28ನೇ ಸೆಪ್ಟೆಂಬರ್ 1956.

ಪ್ರಶ್ನೆ : ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಳೂರು) :

ರಾಜ್ಯಗಳ ಮರುವಿಂಗಡಣಾ ಅಡಿಯಲ್ಲಿ, ನೂತನ ಮೈಸೂರು ರಾಜ್ಯದ ರಚನೆಗೆ ಸಂಬಂಧಿಸಿದ, ಸಿಬ್ಬಂದಿ ವರ್ಗದ ಆಸ್ತಿ ಮತ್ತು ಹೊಣೆಗಳ ಮರು ಹಂಚುವಿಕೆಯ ಸಲುವಾಗಿ, ಮತ್ತು ಆ ಹಂತದಲ್ಲಿ ಆದ ಪ್ರಗತಿಯ ಬಗ್ಗೆ ಸರಕಾರವು ತೆಗೆದುಕೊಂಡ ಕ್ರಮಗಳ ಬಗ್ಗೆ, ತಿಳಿಸುವಿರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ ( ಮುಖ್ಯ ಮಂತ್ರಿ):

ಅಖಿಲ ಬಾರತ ಸೇವೆಗಳ, ಹುದ್ದೆಗಳ ಮತ್ತು ಸಿಬ್ಬಂದಿ ವರ್ಗದ ಹಂಚುವಿಕೆಗಾಗಿ ಕ್ರಮ ತೆಗೆದುಕೊಳ್ಳಲಾಗಿದೆ. ಉಳಿದ ಸೇವೆಗಳಿಗೆ ಸಂಬಂಧಿಸಿದಂತೆ, ಮಾಹಿತಿಯು ಅಪೂರ್ಣವಿದೆ. ಆಸ್ತಿ ಮತ್ತು ಹೊಣೆಗಳ ಮರುಹಂಚುವಿಕೆಯ ಸಲುವಾಗಿ, ರಾಜ್ಯ ಮರು ವಿಂಗಡಣಾ ಕಾಯ್ದೆಯಲ್ಲಿಯೇ ಉಪ ಬಂಧವಿದೆ.

ಪ್ರಶ್ನೆ : ಶ್ರೀ ಹೆಚ್. ಸಿ. ಲಿಂಗಾರೆಡ್ಡಿ:

ನೇಮಕಾತಿ ಮಾಡಲು, ಅಧಿಕಾರಿಗಳಿಗೆ, ಏನಾದರೂ ಆಯ್ಕೆಯ ಸ್ವಾತಂತ್ರ್ಯ ಕೊಡಲಾಗಿತ್ತೋ ?

ಉತ್ತರ : ಶ್ರೀ ಕಡಿದಾಳ ಮಂಜಪ :

ಅದು ಆಯ್ಕೆಯ ಸ್ವಾತಂತ್ರ್ಯ ಕೊಡುವ ಪ್ರಶ್ನೆಗೆ ಸಂಬಂಧಿಸಿಲ್ಲ. ಮೈಸೂರು ರಾಜ್ಯಕ್ಕೆ ಆಯ್ಕೆಯಾದವರಿಗೆ ಒಂದು ಸ್ಥಳ ತೋರಿಸಬೇಕಷ್ಟೇ.

ಪ್ರಶ್ನೆ : ಶ್ರೀ. ಹೆಚ್. ಸಿ. ಲಿಂಗಾರೆಡ್ಡಿ :

ಹೊಸ ಮೈಸೂರು ರಾಜ್ಯಕ್ಕೆ ಜೇಷ್ಠತೆಯ ಪದ ವೃಂದದಲ್ಲಿ, ಎಷ್ಟು ಐ.ಎ.ಎಸ್. ಹುದ್ದೆಗಳನ್ನು ಕೊಡಲಾಗಿದೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ : ಐ.ಎ.ಎಸ್. 90 ಮತ್ತು ಐ.ಪಿ.ಎಸ್. 47.

ಪ್ರಶ್ನೆ : ಶ್ರೀ ಹೆಚ್. ಸಿ. ಲಿಂಗಾರೆಡ್ಡಿ :

ಪ್ರಸ್ತುತ ಮೈಸೂರು ರಾಜ್ಯದಲ್ಲಿ, ಸಿಬ್ಬಂದಿ ವರ್ಗದ ಆಯ್ಕೆಯಲ್ಲಿ ಕೆಲವು ಸೇವೆಗಳ, ಅತೃಪ್ತಿಯುಗ ಸರಕಾರದ ಗಮನಕ್ಕೆ ಬಂದಿರುವುದೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ : ಇಲ್ಲ.

ಪ್ರಶ್ನೆ : ಎಚ್.ಸಿ. ಲಿಂಗಾರೆಡ್ಡಿ.

ಕೆಲವು ಸೇವೆಗಳ ಸಂಬಂಧ, ಮಾಹಿತಿ ಬಂದಿಲ್ಲವೆಂದು ತಿಳಿಸಿದ್ದೀರಿ. ಹೊಸ ರಾಜ್ಯದ ರಚನೆಯ ಕಾಲದಲ್ಲಿ, ಆ ಮಾಹಿತಿ, ಸ್ವೀಕರಿಸಲು ಸಾಧ್ಯವೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹೌದು, ಗೆಜೆಟೆಡ್ ಅಧಿಕಾರಿಗಳ ಸಲುವಾಗಿ ಮಾಹಿತಿ ಪಡೆದಿದ್ದೇನೆ. ಅದು ಪರಿಶೀಲನೆಯಲ್ಲಿದೆ. ನಾನ್ - ಗೆಜೆಟೆಡ್ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪೂರ್ಣ ಮಾಹಿತಿ ಇಲ್ಲ.

ಪ್ರಶ್ನೆ : ಶ್ರೀ ಹೆಚ್. ಸಿ. ಲಿಂಗಾರೆಡ್ಡಿ:

ಆಸ್ತಿ ಮತ್ತು ಹೊಣೆಗಳ ಮರು ಹಂಚುವಿಕೆಯ ಬಗ್ಗೆ, ರಾಜ್ಯಗಳ ಮರು ವಿಂಗಡಣಾ ಕಾಯ್ದೆಯಲ್ಲಿಯೇ ಉಪಬಂಧ ವಿರುತ್ತದೆ ಎಂದು ತಾವು ತಿಳಿಸಿದ್ದೀರಿ. ಆದರೆ ಆ ಉಪಬಂಧಗಳ ಅಂದಾಜು ಮಾಡಲಾಗಿದೆಯೇ ? ಮತ್ತು ಆಸ್ತಿ ಮತ್ತು ಹೊಣೆಗಳನ್ನು ನಿರ್ಧರಿಸಲಾಗಿದೆಯೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಮಾನ್ಯ ಸದಸ್ಯರು ರಾಜ್ಯಗಳ ಮರು ವಿಂಗಡಣಾ ಕಾಯ್ದೆಯ ಭಾಗ 7 ಮತ್ತು ಪುಟ 37ನ್ನು ಗಮನಿಸಿರಿ. ಆಸ್ತಿ ಮತ್ತು ಹೊಣೆಗಳನ್ನು ಕಾಯ್ದೆಯಲ್ಲಿ ಉಲ್ಲೇಖಿಸಿದ ತತ್ವಗಳ ಆಧಾರದ ಮೇಲೆ ಖಚಿತ ಗೊಳಿಸಲಾಗುವುದು.

ಪ್ರಶ್ನೆ : ಶ್ರೀ ಹೆಚ್. ಸಿ. ಲಿಂಗಾರೆಡ್ಡಿ :

ನನ್ನ ಪ್ರಶ್ನೆ ಇಷ್ಟೇ. ಆ ತತ್ವಗಳ ಪ್ರಕಾರ, ಆಸ್ತಿ ಮತ್ತು ಹೊಣೆಗಳನ್ನು ನಿಗಧಿ ಪಡಿಸಲಾಗಿದೆಯೇ ಮತ್ತು ನಿರ್ಧರಿಸಲಾಗಿದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ: ಭೂಮಿ ಮತ್ತು ಸರಕುಗಳಿಗೆ ಸಂಬಂಧಿಸಿದಂತೆ, ಅವು ಪ್ರದೇಶದ ಜೊತೆ ಬರುತ್ತವೆ. ಆದರೆ, ರಾಜ್ಯಗಳ ಮರು ವಿಂಗಾಡಣಾ ಕಾಯ್ದೆಯ ಸೆಕ್ಷನ್ 76 ಉಪ ಬಂಧದಲ್ಲಿ ತಿಳಿಸಿದ ಆಸ್ತಿಗಳನ್ನು ಖಚಿತಗೊಳಿಸಬೇಕಾಗಿದೆ. ಆ ಬಗ್ಗೆ ನಂತರ ನಿರ್ಧಾರ ತೆಗೆದುಕೊಳ್ಳಬೇಕಾಗುವುದು.

ಪ್ರಶ್ನೆ : ಶ್ರೀ ಲಿಂಗಾರೆಡ್ಡಿ :

ಹೊಸ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದ ನಂತರ, ರೆವೆನ್ಯೂ ಕಮೀಷನರ್‌ರ ಹುದ್ದೆಯ ಬಗ್ಗೆ ಏನಾಗುವುದು ?

ಉತ್ತರ : ಶ್ರೀ. ಕಡಿದಾಳ ಮಂಜಪ್ಪ :

1ನೇ ನವೆಂಬರ್ 1956ರ ನಂತರ, ರೆವೆನ್ಯೂ ಕಮೀಷನರ್‌ರ ಮತ್ತು ಸ್ಥಳೀಯ ಸರಕಾರದ ಕಮೀಷನರ್ ಹುದ್ದೆಗಳು ರದ್ದಾಗುತ್ತವೆ.

ಪ್ರಶ್ನೆ : ಶ್ರೀ ಜಿ. ಶಿವಪ್ಪ :

ಗೆಜೆಟೆಡ್ ಅಧಿಕಾರಿಗಳ ಪದವೃಂದವು ಹೊಸ ರಾಜ್ಯದ ರಚನೆಯ ನಂತರ ನಿಗಧಿಪಡಿಸಲಾಗುತ್ತದೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಐ. ಎ.ಎಸ್. ಅಧಿಕಾರಿಗಳ ದರ್ಜೆಯನ್ನು ಈಗಾಗಲೇ, ಅಖಿಲ ಭಾರತ ಪಟ್ಟಿಯ ಅನುಸಾರ ನಿರ್ಧರಿಲಾಗಿದೆ. ಉಳಿದ ಅಧಿಕಾರಿಗಳ ವಿಷಯದಲ್ಲಿ, ಜೇಷ್ಠತೆಯನ್ನು ಕೇಂದ್ರ ಸರಕಾರವು ನಿಗದಿ ಪಡಿಸಿದ ತತ್ವಗಳ ಅನುಸಾರ, ನಿರ್ಧರಿಸಲಾಗುವುದು. ಅಂದರೆ ಉದಾಹರಣೆಗೆ, ಸುಪರಿಂಟೆಂಡಿಂಗ್ ಇಂಜಿನಿಯರ್ ಶ್ರೇಣಿಯು ಮೈಸೂರು ರಾಜ್ಯದಲ್ಲಿರುವ ಎಕ್ಸಿಕ್ಯೂಟಿವ್ ಇಂಜಿನೀಯರ್ ಶ್ರೇಣಿಗೆ ಸಮನಾಗಿರುತ್ತದೆ.

## 8. ಇತರ ಜಾತಿ ಹಿಂದುಗಳು (ಸರಕಾರದ ಸೇವೆಯಲ್ಲಿ ನೇಮಕಾತಿಗಳು) ಕುರಿತು ಪ್ರಶ್ನೋತ್ತರಗಳು. ಮೈಸೂರು ವಿಧಾನ ಪರಿಷತ್ತು - (ಅಕ್ಟೋಬರ್ 1, 1956.)

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ (ಶಿಕ್ಷಕರ ಕ್ಷೇತ್ರ)

ಅ) ಸರಕಾರಿ ಸೇವೆಗಳಲ್ಲಿ, ನೇಮಕಾತಿಯ ಸಲುವಾಗಿ, " ಇತರ ಜಾತಿ ಹಿಂದುಗಳು" ಎಂಬ ಶೀರ್ಷಿಕೆಯಲ್ಲಿ ಸೇರಿರುವ ಸಣ್ಣ ಸಮುದಾಯಗಳಾವುವು, ಮತ್ತು ಅವುಗಳನ್ನು ಒಂದೇ ಗುಂಪಿನಲ್ಲಿ ಸೇರಿಸಲು ಇರುವ ಆಧಾರದ ಬಗ್ಗೆ,

ಬ) ಆ ಗುಂಪಿನಲ್ಲಿ ಪ್ರತಿ ಸಮುದಾಯದ ಯೋಗ್ಯತೆಯನ್ನು ಗಣನೆಗೆ ತೆಗೆದುಕೊಳ್ಳದೆ, ಮತ್ತು ಸಂಪೂರ್ಣ ಗುಂಪಿನ ಒಟ್ಟು ಪ್ರತಿಶತ ಆಧಾರದ ಮೇಲೆ, " ಇತರ ಜಾತಿ ಹಿಂದುಗಳು" ಎಂಬ ಗುಂಪು ಜನಸಂಖ್ಯೆಯ ಆಧಾರ ಮೇಲೆ, ಖಾಲಿ ಸ್ಥಾನಗಳನ್ನು ಹಂಚಿದರ ಬಗ್ಗೆ,

ಕ) "ಇತರ ಜಾತಿ ಹಿಂದುಗಳು " ನಲ್ಲಿ ಸೇರಿಸಲಾದ ಪ್ರತಿ ಸಮುದಾಯದ ಯೋಗ್ಯತೆಯನ್ನು ಪರಿಗಣಿಸಿ, ಖಾಲಿ ಸ್ಥಾನಗಳನ್ನು ಇತ್ಯರ್ಥ ಗೊಳಿಸುವಿಕೆ, ಯಾವ ಶ್ರೇಣಿಯ ಸೇವೆಯಲ್ಲಿ, ಯಾವ ಸಮುದಾಯಗಳು ಪ್ರಾತಿನಿಧ್ಯ ಪಡೆದಿಲ್ಲವೆಂಬುದರ ಬಗ್ಗೆ ತಿಳಿಸುವಿರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ ( ಮುಖ್ಯ ಮಂತ್ರಿ):

ಆ ಸರಕಾರಿ ಸೇವೆಯಲ್ಲಿ, ನೇಮಕಾತಿಯ ಸಲುವಾಗಿ 'ಇತರ ಜಾತಿ ಹಿಂದುಗಳು' ಎಂಬ ಶೀರ್ಷಿಕೆಯ ಗುಂಪಿನಲ್ಲಿ ಕೆಳಗಿನ ಸಮುದಾಯಗಳನ್ನು ಸೇರಿಸಲಾಗಿದೆ.

1. ದರ್ಜಿ
2. ದೇವಂಗ
3. ಗಣಿಯಾ
4. ಹಳ್ಳೀಕರ
5. ಈಡಿಗಾ
6. ಜೋಗಿ
7. ಕುಂಬಾರ
8. ಮೇಡಾ
9. ಮುದಲಿಯಾರ್ಸ್
10. ನಾಗಾರ್ಥ
11. ನಾಯಿಂದಾ

12. ನೇಯಿೀಗ

13. ಸತಾನಿ

14. ತಿಗಲಾ

15. ವೈಶ್ಯಾ

16. ಪದ್ಮಸಾಲೆ

17. ಸಾದರ್

18. ಇತರ ಹಿಂದುಗಳು

ಸರಕಾರಿ ಅಜ್ಞೆ ನಂ. ಈ -2701 -60-ಆರ್ ಮತ್ತು ಪಿ.ಎಸ್. 23-42-9, ದಿನಾಂಕ 21ನೇ ಡಿಸೆಂಬರ್ 1943, ಎಷ್ಟೋ ಸಮುದಾಯಗಳನ್ನು ಜನಸಂಖ್ಯೆಯ ಆಧಾರದ ಮೇಲೆ 18 ಗುಂಪುಗಳಲ್ಲಿ ವರ್ಗೀಕರಿಸಲಾಗಿದೆ. (ಒಂದು ಲಕ್ಷ ಜನಸಂಖ್ಯೆ ಇರುವ ಒಂದು ಪ್ರತ್ಯೇಕ ಗುಂಪಿನಂತೆ). 1941ರ ಜನಗಣತಿಯ ಪ್ರಕಾರ, ಮೇಲೆ ತಿಳಿಸಿದ ಸಮುದಾಯಗಳನ್ನು " ಇತರ ಜಾತಿ ಹಿಂದುಗಳು" ಎಂಬ ಗುಂಪಿನಲ್ಲಿ ಸೇರಿಸಲಾಗಿದೆ. ಏಕೆಂದರೆ, ಪ್ರತಿ ಸಮುದಾಯವು ಒಂದು ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿತ್ತು.

ಬ) ಸೂಕ್ತ ಅಭ್ಯರ್ಥಿಗಳಿಗನುಸಾರವಾಗಿ, ಗುಂಪಿನಲ್ಲಿ ಬರುವ ಸಮುದಾಯಗಳನ್ನು ಸೂಕ್ತವಾಗಿ ಪ್ರತಿನಿಧಿಸಲು, "ಇತರ ಜಾತಿ ಹಿಂದುಗಳು" ಗುಂಪಿನಿಂದ ಅಭ್ಯರ್ಥಿಗಳ ಆಯ್ಕೆಯನ್ನು, ಈ ತತ್ವಗಳ ಆಧಾರದ ಮೇಲೆ ಮಾಡಲಾಗಿದೆ.

ಕ) ವೈಡ್ ಉತ್ತರ ಬಿ) ಮೇಲಿನ.

ಪ್ರಶ್ನೆ :ಎಂ.ಸಿ. ಮಹಾದೇವಸ್ವಾಮಿ :

ತಾವು 'ಇತರ ಸವರ್ಣ ಹಿಂದುಗಳು' ಎಂಬ ಪಟ್ಟಿಯಲ್ಲಿ 18 ಕೋಮುಗಳನ್ನು ಮಾತ್ರ ಹಾಕಿದ್ದೀರಿ. ಈ ಪಟ್ಟಿಯಲ್ಲಿ 'ಜಟ್ಟಿ' ಕೋಮು ಸೇರದಿರುವುದಕ್ಕೆ ಕಾರಣವೇನು ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನೋಟೀಸ್ ಬೇಕು.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ

ತಾವಿಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ 'ಇತರ ಹಿಂದುಗಳು' ಎಂದು ಕೊನೆಯಲ್ಲಿ ಹೇಳಿದ್ದೀರಿ ಇತರ ಹಿಂದುಗಳೆಂದರೆ, ಯಾರ್‍ಯಾರು ಸೇರುತ್ತಾರೆ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

" ಇತರ ಹಿಂದುಗಳು " ಎಂಬ ಗುಂಪಿನಲ್ಲಿ ನನ್ನ ಉತ್ತರದಲ್ಲಿ ತಿಳಿಸಿರುವಂತೆ, ಕೆಳಗಿನ ಚಿಕ್ಕ ಸಮುದಾಯಗಳನ್ನು ಸೇರಿಸಲಾಗಿದೆ.

ಅಗಸ

ಬೈರಾಗಿ

ಬಣಜಿಗಾ

ಬನಿಯಾ

ಬಾವಜಿ

ಬೇಡ

ಭಟರಾಜು

ಬುಡಬುಡಿಕೆ

ಡೊಂಬರ

ದೋಗಾ

ಗಂಗಕುಲ

ಗಾರಡಿಗ

ಗೊಂಡಲಿಗಾ

ಗೋಣಿಗಾ

ಗೋಸಾಲಿ

ಗೌರ

ಗುಜರಾತಿ

ಜೈನ್

ಜಟ್ಟಿ

ಜೋಗಿ

ಜಾಟ

ಕನಿಯಾರ್

ಕಯಸ್ಥ

ಮಲಯಾಳಿ

ಮಲೇರು

ಮಾರಾವಾನ್

ಮಾರವಾಡಿ

ನಾದುರ್

ಪಾಂಡರನ್

ಸಂನ್ಯಾಸಿ

ಸುಡುಗಾಡ ಸಿದ್ಧ

ಎನಿಮಿವ್ಸ

ದಸರಿ

ಗೋರ್ಖಾ

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ :

1943ನೆಯ ಇಸವಿಯ ಸರಕಾರಿ ಅಜ್ಞೆಯ ಪ್ರಕಾರ, ನೌಕರಿಗಳನ್ನು ಹಂಚುವಾಗ "ಇತರ ಹಿಂದು ಜಾತಿಗಳು" ಎಂಬುದರ ಈ ಎಲ್ಲಾ ಕೋಮುಗಳನ್ನು ಒಟ್ಟು ಸೇರಿಸಿ ದಾಮಾಕ್ಷಾ ಪ್ರಕಾರ ಕೊಡುತ್ತಿದ್ದೀರಾ ಅಥವಾ ಬೇರೆ ಬೇರೆ ಕೋಮುಗಳನ್ನೂ ನೋಡಿ ಕೊಡುತ್ತಿದ್ದೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಜಾತ್ಯಾಧಾರದ ಮೇಲೆ ನೌಕರಿಗಳನ್ನು ಕೊಡುವುದಿಲ್ಲ. ನೂತನ ರಾಜ್ಯಾಂಗ ಬಂದ ಮೇಲೆ ರಾಜ್ಯಾಂಗದ ವಿಧಿಯ ಪ್ರಕಾರ ಯಾವ ಯಾವ ಪಂಗಡಗಳು ಹಿಂದುಳಿದಿರುವರೆಂದು ಪರಿಗಣಿಸಲ್ಪಟ್ಟಿರುವರೋ ಮತ್ತು ಯಾವ್ಯಾವ ಪಂಗಡದವರಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೋ ಅವರಿಗೆ ಕೊಡುತ್ತೇವೆ.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವ ಸ್ವಾಮಿ.

(ಸಿ) ಪ್ರಶ್ನೆಯ ಉತ್ತರವಾಗಿ,

" ಇತರ ಜಾತಿ ಹಿಂದುಗಳು" ಎಂಬ ಗುಂಪಿನಲ್ಲಿ, ಅಭ್ಯರ್ಥಿಗಳ ಅಯ್ಕೆಯನ್ನು ಸೂಕ್ತ ಅಭ್ಯರ್ಥಿಗಳು, ಸಿಗಲು ಅವಕಾಶವಿದ್ದುದರಿಂದ, ಎಲ್ಲ ಸಮುದಾಯಗಳಿಗೆ ಸಮರ್ಪಕ ಪ್ರಾತಿನಿಧ್ಯ ಸಿಗುವಂತೆ, ತತ್ವಗಳ ಆಧಾರದ ಮೇಲೆ, ಮಾಡಲಾಗಿದೆ, ಎಂದು ಹೇಳಿದ್ದೀರಿ. ಈ ರೀತಿ ಮಾಡಿ ಮೈನರ್ ಕಮ್ಯೂನಿಟಿಗಳಾದ ಜಟ್ಟಿ ಮುಂತಾದ ಕಮ್ಯೂನಿಟಿಗಳಿಗೆ ಪ್ರಾತಿನಿಧ್ಯ ದೊರಕದೇ ಇದ್ದರೆ ಅವರಿಗೆ ಅನಾನುಕೂಲ ಮಾಡಿದಂತಾಗುವುದಿಲ್ಲವೇ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಹಿಂದುಳಿದ ಪಂಗಡದವರಿಗೆ, ಸಾಕಷ್ಟು ಪ್ರಾತಿನಿಧ್ಯ ದೊರಕುವುದು ಅಗತ್ಯ. ಆ ದೃಷ್ಟಿಯಿಂದ "ಇತರ ಹಿಂದು ಜಾತಿ"ಗಳಲ್ಲಿ ಹಿಂದುಳಿದ ಪಂಗಡದವರಿದ್ದಾರೆ. ಅವರಿಗೆ ಪ್ರಾತಿನಿಧ್ಯ ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ :

ತಾವು ಕೊಟ್ಟಿರತಕ್ಕ "ಇತರ ಹಿಂದುಗಳ " ಜಾತಿಯ ಪಟ್ಟಿಯಲ್ಲಿ ಅಲ್ಲಿರತಕ್ಕವರಿಗೆಲ್ಲರಿಗೂ ಪ್ರಾತಿನಿಧ್ಯ ದೊರತಿದೆಯೋ ? ಅವು ಹಿಂದುಳಿದ ಸಮುದಾಯಗಳಲ್ಲವೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಇಲ್ಲಿ "ಇತರ ಹಿಂದು ಜಾತಿ" ಗಳಲ್ಲಿಯೂ ಕೆಲವಕ್ಕೆ ಸಮರ್ಪಕ ಪ್ರಾತಿನಿಧ್ಯತೆ" ಇರಬಹುದು, ಕೆಲವಕ್ಕೆ ಇಲ್ಲದಿರಬಹುದು.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ :

ತಾವು ಪಬ್ಲಿಕ್ ಸರ್ವಿಸ್ ಕಮೀಷನ್ ನವರು ಕೊಡುವ ದಾಮಾಷಾ ಪ್ರಕಾರ ಹುದ್ದೆಗಳನ್ನು ಕೊಡುತ್ತಿದ್ದಿರೋ ಅಥವಾ ಪ್ರತಿಯೊಂದು ಕೋಮಿಗೂ ಪ್ರಾತಿನಿಧ್ಯವಿರಬೇಕೆಂದು ಕೊಡುತ್ತಿದ್ದೀರೋ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಒಂದೊಂದು ಸಲವೂ ಅನೇಕ ಜನರನ್ನು ನೇಮಕ ಮಾಡಿಕೊಳ್ಳುವಾಗ ಹಿಂದೆ ಕೊಡದಿರುವ ಪಂಗಡದವರಿಗೆ ಈಗ ಕೊಡಬೇಕೆಂದು ತಿಳಿಸಿದ್ದೇವೆ. ಇನ್ನೊಂದು ಸಾರಿ ತಿಳಿಸುತ್ತೇನೆ.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ :

ಈಗ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಅಸಿಸ್ಟೆಂಟ್ ಇಂಜಿನಿಯರ್‌ಗಳನ್ನು ತೆಗೆದುಕೊಳ್ಳುವಾಗ ಜಟ್ಟಿ ಕೋಮಿಗೆ ಏನಾದರೂ ಪ್ರಾತಿನಿಧ್ಯವಿತ್ತೇ ಎಂಬುದನ್ನು ನೋಡಿದ್ದೀರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಗೊತ್ತಿಲ್ಲಾ.

ಪ್ರಶ್ನೆ : ಶ್ರೀ ಎಂ.ಸಿ.ಮಹಾದೇವಸ್ವಾಮಿ.

ಈ ಕಮ್ಯೂನಿಟಿಯಲ್ಲಿ ನಿಜವಾಗಿಯೂ ಪ್ರಾತಿನಿಧ್ಯವಿಲ್ಲದೆ ಈಗತಾನೆ ಒಬ್ಬನೇ ಪದವಿ ಪಡೆದು ಅರ್ಹತೆ ಹೊಂದಿರುವಾಗ ಆತನಿಗೆ ಕೊಟ್ಟು ಈ ಕೋಮಿಗೆ ಸರಿಯಾದ ಪ್ರಾತಿನಿಧ್ಯ ದೊರಕಿಸಿಕೊಡಲು ಮನಸ್ಸು ಮಾಡುತ್ತೀರಾ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ, ಯಾವ ಸರ್ಕಾರಿ ಹುದ್ದೆಗೆ ಅಗಲಿ ಸೆಲೆಕ್ಷನ್ ಮಾಡುವವರು ಪಬ್ಲಿಕ್ ಸರ್ವಿಸ್ ಕಮೀಷನ್ ಅವರು. ಆಮೇಲೆ ಅಂತಿಮ ಅಪ್ರೋವಲ್ ಮಾಡುವವರು ಸರ್ಕಾರದವರು. ಅವರು ಒಂದು ವೇಳೆ ಸೆಲೆಕ್ಷನ್ ಮಾಡದೇ ಇದ್ದು, ನಮಗೆ ಅವರು ಸೆಲೆಕ್ಷನ್ ಮಾಡಿರುವುದು ಸರಿಯಲ್ಲವೆಂದು ಸ್ಪಷ್ಟವಾದ ಆಧಾರಗಳಿದ್ದರೆ, ಅವರ ಪಟ್ಟಿಯನ್ನು ತಿದ್ದುಪಡಿ ಮಾಡಬಹುದು. ಅಥವಾ ಬೇರೆ ಕಾರ್ಯಕ್ರಮ ತೆಗೆದುಕೊಳ್ಳಬಹುದು.

ಆದರೆ ಒಂದು ಸಾರಿ ತೀರ್ಮಾನಕ್ಕೆ ಬಂದು ಉಮೇದುವಾರರು ಸರಿಯಾಗಿಲ್ಲವೆಂದು ಹೇಳಿದರೆ, ಅಧನ್ನು ಬದಲಾವಣೆ ಮಾಡುವುದು ಸರ್ಕಾರಕ್ಕೆ ಕಷ್ಟ.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವ ಸ್ವಾಮಿ :

ಈ ರೀತಿ ಮಾಡುತ್ತಾಹೋದರೆ, ಬೇರೆ ಕೋಮುಗಳಿಗೆ ಪ್ರಾತಿನಿಧ್ಯ ದೊರಕಿಸಿಕೊಡುತ್ತೇವೆಂದು ಹೇಳುವುದು ತಪ್ಪಾಗುತ್ತದಲ್ಲವೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

ಸರ್ಕಾರದ ಸ್ಪಷ್ಟ ನೀತಿಯನ್ನು ತಿಳಿಸಿದ್ದೇನೆ. ಹಿಂದುಳಿದ ಪಂಗಡದವರಿಗೆ ಮತ್ತು ಪ್ರಾತಿನಿಧ್ಯವಿಲ್ಲದಿರುವವರಿಗೆ ಪ್ರಾತಿನಿಧ್ಯ ಸಿಗುವಂತೆ ಮಾಡಬೇಕೆಂದು ಪದೇ ಪದೇ ತಿಳಿಸಿದ್ದೇನೆ. ಮೊನ್ನೆ ದಿವಸ ಪ್ರೊಬೇಷನ್‌ರುಗಳನ್ನು ತೆಗೆದುಕೊಳ್ಳುವಾಗ ಕೂಡ ಈ ನೀತಿಯನ್ನು ಪಿ.ಎಸ್.ಸಿ.ಯವರ ತಿಳುವಳಿಕೆಗೆ ತಂದಿದ್ದೇವೆ.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ :

ಈ ವಿಚಾರದಲ್ಲಿ ಭಾರತ ಸರ್ಕಾರದಿಂದ ಕಾಗದ ಪತ್ರಗಳೇನಾದರೂ ಬಂದಿವೆಯೇ ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ :

ನನಗೆ ನೋಟೀಸ್ ಬೇಕು.

ಪ್ರಶ್ನೆ : ಶ್ರೀ ಎಂ. ಸಿ. ಮಹಾದೇವಸ್ವಾಮಿ :

1943ನೆಯ ಇಸ್ವಿಯ ಈ ಆ್ಯಕ್ಟ್‌ನ್ನು ಬದಲಾವಣೆ ಮಾಡಿ, ಇತರ ಹಿಂದು ಜಾತಿಗಳು ಎನ್ನುವುದರಲ್ಲಿ ಯೂನಿಟ್ ಅಧಿಕಾರಿಗಳು ಪ್ರತಿಯೊಂದು ಕೋಮಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಷ್ಟಿಷ್ಟಿರಬೇಕೆಂದು ಹೇಳಿಕೊಡುವಂತೆ ಪಬ್ಲಿಕ್ ಸರ್ವಿಸ್ ಕಮೀಷನ್‌ಗೆ ತಿಳಿಸಲು ಹೇಳುತ್ತೀರಾ?

ಉತ್ತರ : ಶ್ರೀ ಕಡಿದಾಳ ಮಂಜಪ್ಪ

1943ನೆಯ ಇಸವಿಯ ಆ್ಯಕ್ಟ್ ಬದಲಾವಣೆ ಮಾಡಬೇಕೆಂದಿತ್ತು. ಅಷ್ಟರಲ್ಲೇ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಬಂದುದರಿಂದ ಅವರ ವರದಿ ಬರುವವರೆಗೂ ಏನು ಮಾಡುವುದೂ ಸರಿಯಾಗುವುದಿಲ್ಲವೆಂದು ಸುಮ್ಮನೆ ಇದ್ದೇವೆ. ಅದು ಬಂದ ಮೇಲೆ ಯಾವ ಪಂಗಡದವರು ನಿಜವಾಗಿ ಹಿಂದುಳಿದಿದ್ದಾರೆಂಬುದನ್ನು ನಿಗದಿಮಾಡಿ ಅವರಿಗೆ ನಿಜವಾಗಿ ಸರಕಾರಿ ಪ್ರಾತಿನಿಧ್ಯ ಸಿಕ್ಕುವಂತೆ ಮಾಡುವುದು ಸರಕಾರದವರ ಕರ್ತವ್ಯ.

## 9. ಹಣಕಾಸು ವಿಚಾರಣಾ ಸಮಿತಿಯ ವರದಿಯ ಮೇಲಿನ ಚರ್ಚೆಯ ಮೇಲೆ ಮುಖ್ಯಮಂತ್ರಿಗಳಾದ ಶ್ರೀ ಕಡಿದಾಳ ಮಂಜಪ್ಪನವರ ಸ್ಪಷ್ಟೀಕರಣ (17ನೇ ಅಕ್ಟೋಬರ್ 1956).

ಶ್ರೀ ಕಡಿದಾಳ ಮಂಜಪ್ಪ (ಮಾನ್ಯ ಮುಖ್ಯ ಮಂತ್ರಿಗಳು) :

" ಅಧ್ಯಕ್ಷರೇ, ತಮ್ಮ ಅನುಮತಿಯ ಮೇರೆಗೆ, ನಾನು ಮೈಸೂರು, ಹಣಕಾಸು ವಿಚಾರಣಾ ಸಮಿತಿಯು (1956), ಸಲ್ಲಿಸಿದ ವರದಿಯ ಮೇಲೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆ. ಈ ಸಮಿತಿಯನ್ನು ಜುಲೈ, 1955 ರಲ್ಲಿ ನೇಮಿಸಲಾಯಿತು. ಸಮಿತಿಯನ್ನು ಮೈಸೂರು ರಾಜ್ಯದಲ್ಲಿನ ಸಾರ್ವಜನಿಕ ವೆಚ್ಚದ ಧೋರಣೆಗಳನ್ನು ಪ್ರಸ್ತುತದಲ್ಲಿದ್ದ ತೆರಿಗೆ ರಚನೆ ಮತ್ತು ರೆವೆನ್ಯೂದ ಮೂಲಗಳನ್ನು ಪರಿಶೀಲಿಸಲು, ಮತ್ತು ಸಾಧ್ಯವಾದರೆ, ಕೆಲವು ಸೂಚನೆಗಳನ್ನು ನೀಡಲು ಮತ್ತು ಮೈಸೂರು ರಾಜ್ಯದ ಸಾರ್ವಜನಿಕ ಸಾಲದ ಸ್ಥಿತಿಯನ್ನು ಪರಿಶೀಲಿಸಲು ನೇಮಿಸಲಾಯಿತು. ಅದರ ಎಲ್ಲ ಸದಸ್ಯರು ಮೈಸೂರು ರಾಜ್ಯಕ್ಕೆ ಸಂಬಂಧಿಸಿದ ಆ ಎಲ್ಲ ವಿಷಯಗಳನ್ನು ಕೂಲಂಕೂಷವಾಗಿ ಅಧ್ಯಯನ ನಡೆಸಿ, ವರದಿಯನ್ನು ರಚಿಸಿದ್ದಾರೆ. ಶ್ರೀ ಎನ್.ಮಾಧವರಾವ್ ಅವರು ಸಮಿತಿಯ ಅಧ್ಯಕ್ಷರಿದ್ದು, ಅವರು ಮೈಸೂರು ರಾಜ್ಯದ ಆಡಳಿತದ ವಿಷಯದಲ್ಲಿ 30 ವರ್ಷಗಳ ಅನುಭವ ಹೊಂದಿದ ವ್ಯಕ್ತಿಗಳು. ಅವರು ಬಹಳ ಜವಾಬ್ದಾರಿಯಿಂದ ಮತ್ತು ನಿಷ್ಪಕ್ಷಪಾತವಾಗಿ ತಮ್ಮ ವರದಿ ತಯಾರಿಸಿದ್ದಾರೆ. ಕಾಲಕ್ಕನುಸಾರವಾಗಿ, ವರದಿಯನ್ನು ಸರಕಾರಕ್ಕೆ ಸಲ್ಲಿಸಿರುವುದರಿಂದ, ಸಮಿತಿಯ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆ ಸಮಿತಿಯ ವರದಿಯ ಪ್ರಕಾರ, ಮೈಸೂರು ರಾಜ್ಯದ ಹಣಕಾಸಿನ ರಚನೆಯಲ್ಲಿ, ಕೆಲವು ನ್ಯೂನತೆಗಳನ್ನು ಕಂಡು ಹಿಡಿಯಲಾಗಿದೆ.

ವರದಿಯ 33ನೇ ಪುಟದಲ್ಲಿ, ತಿಳಿಸಿರುವಂತೆ 'ಇತ್ತೀಚಿನ ದಿನಗಳಲ್ಲಿ ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ ' ಸಮಿತಿಯು, 1946-47 ರಿಂದ ಪ್ರಸ್ತುತ ದಿನಾಂಕದವರೆಗೆ, ತನ್ನ ವಿಚಾರಣೆ ನಡೆಸಿದೆ. ಆ ಕಾಲಾವಧಿಯು ಮೈಸೂರು ರಾಜ್ಯದ ಆಡಳಿತ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾದದ್ದು, ಏಕೆಂದರೆ, 1947ರ ಕಾಲಾವಾಧಿಯಲ್ಲಿ, ಭಾರತದಲ್ಲಿ, ಜವಾಬ್ದಾರಿ ಯುಕ್ತ ಸರಕಾರವು ಅಸ್ತಿತ್ವದಲ್ಲಿ ಬಂತು. ಸಾರ್ವಜನಿಕ ಅಭಿಪ್ರಾಯದ ಧುರೀಣರು. ಶಾಸಕಾಂಗಕ್ಕೆ ಹೊಣೆಗಾರರಾಗಿ, ಮೈಸೂರು ಮಹಾರಾಜರು ಹೊರಡಿಸಿದ ಘೋಷಣೆಯ ಮೂಲಕ ಮಂತ್ರಿಮಂಡಲ ರಚಿಸಿದರು. ಸಮಿತಿಯು, 1947ರ ನಂತರ, ರಾಜ್ಯದ ಸಾರ್ವಜನಿಕ ಹಣಕಾಸಿನ ಧೋರಣೆಗಳ ಬಗ್ಗೆ ಪತ್ತೆ ಹಚ್ಚಿದೆ. ಸರಾಗವಾಗಿ ಯಾವಾಗಲೂ, ಖೋತಾ ಆದಾಯದ ಅಂದಾಜು ಪತ್ರಿಕೆಗಳೇ, ಹೆಚ್ಚಾಗಿ ಕಾಣಿಸಿಕೊಂಡವು. ಎಲ್ಲಾ ಮೀಸಲು ನಿಧಿಗಳು 11 ಕೋಟಿ ರೂ. ಗಳಿಗೆ ಮುಟ್ಟಿತ್ತು. ಅಲ್ಲದೆ, ಸಾರ್ವಜನಿಕ ಸಾಲ ಮತ್ತು ಇತರ ಹಣಕಾಸಿನ ಹೊಣೆಗಳು 9 ವರ್ಷಗಳ ಅವದಿಯಲ್ಲಿ, ಮಿತಿಗಿಂತ ಮಿಗಿಲಾಗಿ ಹೆಚ್ಚಿಗಾದವು. (32 ಕೋಟಿ ರೂ.) ಸಾಲವು 1946-47, ರಲ್ಲಿ 34 ಕೋಟಿ ರೂ. ಇದ್ದದ್ದು 1955-56ರಲ್ಲಿ 65 ಕೋಟಿ ರೂ.ಗೆ ಏರಿತು. ಕಾರಣ, ಸಮಿತಿಯ ವರದಿಯ ಪ್ರಕಾರ, ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿಯು ಅಷ್ಟು ಸಮರ್ಪಕವಾಗಿರಲಿಲ್ಲ. ಆ ಕಾಲಾವಧಿಯಲ್ಲಿಯೇ ಪ್ರಥಮ ಜನಪ್ರೀಯ ಸರಕಾರದ ಅವಧಿ ಅಂತ್ಯಗೊಂಡಿತು. "

ಚರ್ಚೆ ಮುಂದುವರಿದಂತೆ :

ಶ್ರೀ ಶಾಸ್ತ್ರಿಗಳು ವರದಿಯ ಅವಲೋಕನ ಮಾಡಿದ ಬಗ್ಗೆ, ಶ್ರೀ ಕಡಿದಾಳ ಮಂಜಪ್ಪನವರು, ತಮ್ಮ ಸ್ಪಷ್ಟೀಕರಣ, ಮುಂದುವರೆಸುತ್ತ, " ಮಾನ್ಯರೆ, ನನ್ನ ಮಿತ್ತ ಶ್ರೀ ಶಾಸ್ತ್ರಿಗಳು ತಿಳಿಸಿದಂತೆ, ಮೈಸೂರು ಸರಕಾರವು ಸಾಲಗಳ ಬಾಕಿಗಳನ್ನು ಕೊಡಲು ಮತ್ತು ಭೂ- ಕಂದಾಯದ ಬಾಕಿಗಳನ್ನು ವಸೂಲಿ ಮಾಡಲು ಭಯ ಪಡುತ್ತದೆ. ಎಲ್ಲಾ ವಿಭಾಗಗಳಲ್ಲಿ ಬಾಕಿಗಳಿರುವುದು ಸಹಜ. ಆದರೆ, ಈ ಸತ್ಯಾಂಶವನ್ನು, ಆಡಳಿತಕ್ಕೆ ಮಾತ್ರ, ಅದು ಕ್ರಿಯಲಾಶೀಲತೆಯಿಂದ ಕೂಡಿಲ್ಲವೆಂದು, ಕಾರಣ ಕೊಡುವುದು ಸಮಂಜಸವಲ್ಲ ಅದಕ್ಕೆ ಇನ್ನೂ ಇತರ ಕಾರಣಗಳಿವೆ. ಇದು ಎಲ್ಲರಿಗೂ ತಿಳಿದಿರುವದು ಹಾಗೆ, ಪ್ರತಿವರ್ಷ, ರಾಜ್ಯಗಳು ಕೆಲವು ಸಂಕಟ ಸಮಯುಗಳಿಗೆ ಬಲಿಯಾಗುವುದುಂಟು. ಅದಕ್ಕಾಗಿಯೇ, ಪ್ರತಿ ವರ್ಷ, ರೈತರಿಂದ ಬಾಕಿಗಳನ್ನು ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲ. ರೈತರು ಸರಕಾರಕ್ಕೆ ಸಾಲದ ಮರು ಪಾವತಿ ಮಾಡುವುದು ಅಷ್ಟೇ ಸಂಕಟದ ಕೆಲಸ. ಕಾರಣ, ನಾವು ಸಹಾನುಭೂತಿಯಿಂದ ಕಂತುಗಳಲ್ಲಿ, ಬಾಕಿಗಳನ್ನು ಸಂಗ್ರಿಹಿಸುತ್ತಿದ್ದೇವೆ. ಸೇಲ್ ಟ್ಯಾಕ್ಸ್ ವಿಭಾಗದ ಬಾಕಿಗಳು ಕುರಿತಂತೆ, ಕೆಲವು ಸಂದರ್ಭಗಳ ಕಾರಣ, ಆ ಬಾಕಿಗಳನ್ನು ಸಂಗ್ರಹಿಸಲು ಬಹಳ ಕಷ್ಟವಾಯಿತು. ಕೆಲವು ಅಧಿಕಾರಿಗಳಿಗೆ ಒತ್ತಾಯದ ಸಾಧನಗಳನ್ನು ಉಪಯೋಗಿಸಿ ಬಾಕಿಗಳನ್ನು ವಸೂಲಿ ಮಾಡಲು, ನಾವು ಆದೇಶವೂ ನೀಡಿದೆವು. ಕೆಲವು ಸ್ಥಳೀಯ ಸಂಸ್ಥೆಗಳು ಸರಕಾರಕ್ಕೆ ಬಹಳಷ್ಟು ಬಾಕಿ ಕೊಡುವುದಿದೆ. ಮೈಸೂರು ಜಿಲ್ಲೆಯಲ್ಲಿ, ಮುನ್ಸಿಪಾಲಿಟಿಯು 80 ಸಾವಿರ ರೂ. ಬಾಕಿ ಕೊಡಬೇಕಾಗಿದೆ. ಅದರಲ್ಲಿ ಶೇಕಡಾ 50 ರಷ್ಟು ಬಾಕಿ ವಸೂಲಿ ಮಾಡಲಾಗಲಿಲ್ಲ. ಆದರೆ ನಮ್ಮ ಕೆಲವು ಮಾನ್ಯ ಸದಸ್ಯರು, ಮುನ್ಸಿಸಿಪಾಲಿಟಿಗಳ ಜೊತೆ ಬಹಳ ಸಹಾನುಭೂತಿಯಿಂದ ವರ್ತಿಸಿ, ಅವುಗಳಿಗೆ ನೀರು ಸರಬರಾಜಿನ ಕಾರ್ಯ ವಿಧಾನ ಇತರ ಕಾರ್ಯ ವಿಧಾನಗಳನ್ನು ಮಂಜೂರು ಮಾಡಬೇಕೆಂದು ತಿಳಿಸಿದ್ದಾರೆ. ಆದರೆ, ನಾವು ಅವುಗಳ ಬಾಕಿಯನ್ನು ವಸೂಲಿ ಮಾಡಬೇಕಾಗಿದೆ. ಮಂಡ್ಯ ಜಿಲ್ಲೆಯಲ್ಲಿ, 1953ರ ಮೊದಲು, ಬಹಳಷ್ಟು ಬಾಕಿಗಳಿದ್ದವು. ಸಕ್ಕರೆ ಕಾರ್ಖಾನೆಯಿಂದ ಬಾಕಿ ವಸೂಲಿ ಮಾಡಲಾಗುತ್ತಿತ್ತು. ಆದರೆ, ಅಲ್ಲಿ ಸರಿಯಾಗಿ ಲೆಕ್ಕಪತ್ರಗಳನ್ನು ಇಟ್ಟಿರುವ ವ್ಯವಸ್ಥೆ ಇದ್ದೀದ್ದಿಲ್ಲ. 1953ರಲ್ಲಿ ಅದನ್ನೆಲ್ಲ ಸರಿ ಪಡಿಸಲು ಮತ್ತು ಬಾಕಿ ವಸೂಲಿ ಮಾಡಲು ನಾವು ಹೆಚ್ಚಿನ ಸಿಬ್ಬಂದಿಯನ್ನು ಮಂಜೂರು ಮಾಡಿದೆವು. ಅವರು 50 ಲಕ್ಷ ಅಥವಾ 60 ಲಕ್ಷ ರೂ. ವಸೂಲಿ ಮಾಡಿದರು. 2 ಅಥವಾ 3 ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿನ ಸಂಪೂರ್ಣ ಬಾಕಿಯನ್ನು ವಸೂಲು ಮಾಡಲಾಗುವುದು. ನೀರಾವರಿ ಅಣೆಕಟ್ಟುಗಳಲ್ಲಿಯೂ ಸಹ, ಬಾಕಿಗಳನ್ನು ವಸೂಲಿ ಮಾಡಲು ವಿಶೇಷ ಸಿಬ್ಬಂದಿಯನ್ನು ಮಾಡಲಾಗಿದೆ. ಮಾನ್ಯರೇ, ಬಂಡವಾಳ ಖರ್ಚು ಒಮ್ಮಿಂದೊಮ್ಮೆಲೆ ಸಮರ್ಪಕ ಪ್ರತಿಫಲ ಕೊಡುವುದಿಲ್ಲ. ತುಂಗಾ, ನುಗು, ಭದ್ರಾ ನೀರಾವರಿ ಅಣೆಕಟ್ಟುಗಳನ್ನು, ನಾವು ತೆಗೆದುಕೊಂಡಾಗ, ಅವುಗಳು ಕೇವಲ 10 ವರ್ಷಗಳ ನಂತರವೇ ಪ್ರತಿಫಲ ಕೊಡುವವು. ಮಾನ್ಯರೇ, ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ರೈತರು, ಈ ಅಣೆಕಟ್ಟುಗಳಿಂದ ನೀರಾವರಿಯನ್ನು ಅಭಿವೃದ್ಧಿಪಡಿಸಲು, ಬಹಳಷ್ಟು ಕಾಲ ತೆಗೆದುಕೊಳ್ಳುತ್ತಾರೆ. ಉದಾಹರಣೆಗೆ, ವಿಶ್ವೇಶ್ವರಯ್ಯ ಕಾಲುವೆಯ ಅಡಿಯಲ್ಲಿ ನೀರಾವರಿಯ ಅಭಿವೃದ್ಧಿಪಡಿಸುವ ಮುನ್ನ 20 ವರ್ಷಗಳು ಹಿಡಿದವು. ಕಾರಣ, 2 ಅಥವಾ 3 ಅಥವಾ 5 ವರ್ಷಗಳಲ್ಲಿ, ಪ್ರತಿಫಲ ನಿರೀಕ್ಷಿಸುವುದು ಅಸಾಧ್ಯ. ಲೋಕೋಪಯೋಗಿ (ಕಾಮಗಾರಿ), ವಿಭಾಗದಲ್ಲಿ, ಖರ್ಚನ್ನು ಯೋಜನೆಯ ಅಧಾರದ ಮೇಲೆ ವಿನಿಯೋಗಿಸಿರುವುದಿಲ್ಲವೆಂಬ, ಆಪಾದನೆಯು ನಿರಾಧಾರ.

ಶಾಸ್ತ್ರಿಗಳು, "ವರದಿಯು ಹಾಗೆ ತಿಳಿಸುತ್ತದೆ, ಎಂದು ಹೇಳಿದಾಗ " ಮಂಜಪ್ಪನವರು: "ಕೆಲವೇ ಪ್ರಸಂಗಗಳ ಆಧಾರದ ಮೇಲೆ ಈ ನಿರ್ಧಾರಕ್ಕೆ ಬರುವುದು ತಪ್ಪು". "ಕೇಂದ್ರ ಸರಕಾರದ ಅನುಮತಿಯಿಲ್ಲದೆ, ನಾವು ಯಾವ ಆಣೆಕಟ್ಟನ್ನು ಪ್ರಾರಂಭ ಮಾಡಿ, ಹಣ ವಿನಿಯೋಗಿಸುವ ಹಾಗಿಲ್ಲ ". ಯೋಜನೆಯ ಅಡಿಯಲ್ಲಿಯೇ ನಾವು ಖರ್ಚು ಮಾಡಬೇಕಾಗುತ್ತದೆ.

" ಮಂತ್ರಿಗಳ ಪ್ರವಾಸಗಳ ಬಗ್ಗೆ ಹೇಳುವುದಾದರೆ, ಪ್ರವಾಸಗಳು ಅನಿವಾರ್ಯ. ನನ್ನ ಸ್ನೇಹಿತರು, ಹೇಳಿದಂತೆ, ದಿಲ್ಲಿಗೆ ಮಂತ್ರಿಗಳು ಪ್ರಯಾಣ ಮಾಡುವುದು, ಕಡಿಮೆ ಯಾಗಬೇಕು. ಮೇಲಿಂದ ಮೇಲೆ ಪ್ರಯಾಣ ಮಾಡುವುದನ್ನು ತಪ್ಪಿಸಬೇಕು. ಆದರೆ ನಾವು ಕೇಂದ್ರ ಸರಕಾರದ ಮೇಲೆ ಅವಲಂಭಿಸಿರುವುದರಿಂದ, ಸಮ್ಮೇಳನಗಳಲ್ಲಿ ಭಾಗವಹಿಸಿ, ಕೇಂದ್ರ ದೊಡನೆ ಚರ್ಚಿಸಿ, ಅದಕ್ಕೆ ಮನವರಿಕೆ ಮಾಡಿ, ವಿಷಯಗಳನ್ನು ಚರ್ಚಿಸಲು, ಪ್ರಯಾಣಗಳನ್ನು ತಪ್ಪಿಸುವಂತಿಲ್ಲ. ಅವಶ್ಯವಿದ್ದಲ್ಲಿ, ಮಾತ್ರ, ಮಂತ್ರಿಗಳು ದೆಹಲಿಯ ಪ್ರವಾಸ ಕೈಗೊಳ್ಳುವರು, ಎಂಬುದರ ಬಗ್ಗೆ ಆಶ್ವಾಸನೆ ನೀಡಬಹುದು. "

ಕೊರತೆಯ ಮುಂಗಡ ಪತ್ರ, ಕೊರತೆಯ ಅರ್ಥವ್ಯವಸ್ಥೆಯ ಬಗ್ಗೆ ಮಾತನಾಡುತ್ತ (ಶಾಸ್ತ್ರಿಗಳು ಪ್ರಸ್ತಾಪಿಸಿದಾಗ),

" ಕೊರತೆ ಮುಂಗಡ ಪತ್ರ, ರಾಷ್ಟ್ರ ನಿರ್ಮಾಣ ಚಟುವಟಿಕೆಗಳಲ್ಲಿ ಖರ್ಚು ಮಾಡಿದರೆ, ಸಮಂಜಸವಾಗಿರುವುದು; ಆ ಉದ್ದೇಶದ ಹೊರತಾಗಿ, ನಾವು ಖರ್ಚು ಮಾಡಿದರೆ, ಕೊರತೆ ಮುಂಗಡ ಪತ್ರ ನಾವು ಕೈಬಿಡಬೇಕು."

ಸರಾಸರಿ ರಾಷ್ಟ್ರೀಯ ಆದಾಯದ ಬಗ್ಗೆ, ಉತ್ತರ ನೀಡುತ್ತ - " ಅದು ಈಗ ಹೆಚ್ಚಿಗೆ ಆಗಿದೆ. ಅದು ನನ್ನ ಅಭಿಪ್ರಾಯವಲ್ಲ. ಆದರೆ ತಜ್ಞರ ಪ್ರಕಾರ " ರಾಜ್ಯ ಆದಾಯವನ್ನು ತರುವ ತೆರಿಗೆಯನ್ನು ವಿಧಿಸಲಾಗಿದೆಯೆಂಬ ಪ್ರಶ್ನೆಗೆ (ಶಾಸ್ತ್ರಿಗಳ) ಉತ್ತರ ನೀಡುತ್ತ, "ಕೋಟಿಗಳಲ್ಲಿ ಅಲ್ಲ. ಆದರೆ ಲಕ್ಷಗಳಲ್ಲಿ "

"ಶಾಸ್ತ್ರಿಗಳ ಸಾವಿರಗಳಲ್ಲಿಯೂ ಕೂಡ ಅಲ್ಲ" ಎಂಬ ಪ್ರಶ್ನೆಗೆ ಉತ್ತರಿಸುತ್ತ : ನಮ್ಮ ರಾಜ್ಯ ಚಿಕ್ಕದು. ಭೂ-ಕಂದಾಯ, ಸೇಲ್ಸ್ ತೆರಿಗೆ ಮತ್ತು ಸುಂಕ-ಕಂದಾಯಗಳನ್ನು ಬಿಟ್ಟರೆ, ನಾವು ತೆರಿಗೆಯನ್ನು ಕೊಟಿ.ರೂ.ಗಳಲ್ಲಿ ಸಂಗ್ರಹಿಸಲು ಸಾಧ್ಯವಿಲ್ಲ. ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯು ಅಷ್ಟು ಸ್ವಸ್ಥವಾಗಿಲ್ಲ. ನಾವು ಜನರಿಗೆ ಕೆಲವು ಪರೋಕ್ಷ ಹಿತಗಳನ್ನು (ಲಾಭಗಳನ್ನು) ಒದಗಿಸುವುದರ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯಚಟುವಟಿಕೆಗಳಲ್ಲಿ ಹಣ ಖರ್ಚು ಮಾಡಿದ್ದುಂಟು. ನಮ್ಮ ಹಣಕಾಸಿನ ಪರಿಸ್ಥಿತಿಯು ಅಷ್ಟು ಸಮರ್ಪಕವಾಗಿಲ್ಲ. ಆದರೆ, 10 ವರ್ಷಗಳ ನಂತರ ಎರಡನೆ ಅಥವಾ ಮೂರನೇ ಪಂಚವಾರ್ಷಿಕ ಯೋಜನೆಯನ್ನು ಅನುಷ್ಠಾನದಲ್ಲಿ ತರುವಾಗ, ನಾವು ಖರ್ಚುಮಾಡಿದ ಫಲ ಗೊತ್ತಾಗುತ್ತದೆ. ಸಮಿತಿಯು, ನಾವು ಜಾಗರೂಕತೆಯಿಂದ ಹಣ ಖರ್ಚು ಮಾಡಬೇಕೆಂದು, ಎಚ್ಚರಿಕೆ ನೀಡಿದೆ. ಹಣಕಾಸಿನ ಈ ಸ್ಥಿತಿಯನ್ನು ನಾವು ನಮ್ಮ ರಾಜ್ಯವು 1 ನೇ ನವೆಂಬರ್ ಕ್ಕೆ ಅಸ್ತಿತ್ವದಲ್ಲಿ ಬಂದನಂತರ, ಪರಿಶೀಲಿಸೋಣ. ನೂತನ ರಾಜ್ಯವು ಕೊರತೆಯ ಮುಂಗಡಪತ್ರ ದಿಂದಲೇ ತನ್ನ ಕಾರ್ಯಾರಂಭ ಮಾಡುವುದು. ನಾವು ಎಲ್ಲಿ ಶಕ್ಯ ಇದೆಯೋ, ಅಲ್ಲಿ ಖರ್ಚನ್ನು ಕಡಿಮೆ ಮಾಡಬಹುದು.

ಅದರ ಜೊತೆಗೆ, ನಮ್ಮ ಸಂಪನ್ಮೂಲಗಳನ್ನು ಸುಧಾರಿಸಿ (ರೆವೆನ್ಯೂ ಮೂಲಗಳನ್ನು ವಿಧಿಸುವುದರ ಮೂಲಕ), ನಮ್ಮ ಅದಾಯಗಳನ್ನು ಹೆಚ್ಚಿಸಬೇಕು. ಆದರೆ, ಮಾನ್ಯರೇ, ತೆರಿಗೆಯ ಭಾರ ಅನಾವಶ್ಯಕವಾಗಿ, ಕೊಡುವ ಶಕ್ತಿ ಇರದೇ ಇರುವುವರ ಮೇಲೆ, ಹೇರಬಾರದು. ಆ ರೀತಿಯಾಗಿ ನಾವು ಆದಾಯವನ್ನು ಹೆಚ್ಚಿಸಿ, ಆದಷ್ಟು ಖರ್ಚನ್ನು ಕಡಿಮೆ ಮಾಡಬೇಕು. ಶ್ರೀ ಶಾಸ್ತ್ರಿಗಳು ಈ ನನ್ನ ಉತ್ತರದಿಂದ ಸಮಾಧಾನವಾಗಿರಬಹುದ ಈ ಕೆಲವು ನುಡಿಗಳಿಂದ, ನಾನು ನನ್ನ ಉತ್ತರ ಮುಗಿಸುತ್ತೇನೆ.

(ಆಧಾರ:- ವಿಧಾನ ಮಂಡಲದ ನಡುವಳಿಕೆಗಳು.)

ಭಾಗ - 4

# ಶ್ರೀ ಕಡಿದಾಳ್ ಮಂಜಪ್ಪನವರು ತಮ್ಮ ಕ್ಷೇತ್ರದಲ್ಲಿ ಕೈಕೊಂಡ ಅಭಿವೃದ್ಧಿ ಕಾರ್ಯಗಳು.

## ಶ್ರೀ ಕಡಿದಾಳ ಮಂಜಪ್ಪನವರು ತಮ್ಮ ಕ್ಷೇತ್ರದಲ್ಲಿ ಕೈಕೊಂಡ ಅಭಿವೃದ್ಧಿ ಕಾರ್ಯಗಳು.

ಶ್ರೀ ಕಡಿದಾಳ ಮಂಜಪ್ಪನವರು ದಕ್ಷ ಹಾಗೂ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರು. ಸರಳ ಹಾಗೂ ಸೀದಾ ಜೀವನ, ಉಚ್ಚವಿಚಾರ ಅವರದು. ಅವರು ಗಾಂಧೀಜಿಯ ಗ್ರಾಮ ಸ್ವರಾಜ್ಯ ತತ್ವದಿಂದ ಪ್ರಭಾವಗೊಂಡವರು. ಗ್ರಾಮಗಳ ಅಭಿವೃದ್ಧಿಗಾಗಿ ಶ್ರಮಿಸಿದರು. ಅವರನ್ನು ಕರ್ನಾಟಕದ ಗಾಂಧೀಜಿ ಎಂದೇ ಜನ ಕರೆಯುತ್ತಿದ್ದರು. ರಾಜಕಾರಣದಲ್ಲಿ ತತ್ವ, ನೀತಿ ಹಾಗೂ ಪ್ರಾಮಾಣಿಕತೆ ಇರಬೇಕೆಂಬುದು ಅವರ ದೃಢ ನಿಲುವಾಗಿತ್ತು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಹಾರೊಗೂಳಿಗೆ ಎಂಬ ಪುಟ್ಟ ಗ್ರಾಮದ ಬಡ ಗೇಣಿದಾರ ಕುಟುಂಬದಲ್ಲಿ ಜನಿಸಿದವರು. ಬಾಲ್ಯದಲ್ಲಿ ಬಡತನದ ಕಹಿಯನ್ನುಂಡು ಬೆಳೆದವರು. ಹಳ್ಳಿಗಾಡಿನ ಬಡ ಗೇಣಿದಾರರ, ರೈತರ ಸಂಕಷ್ಟಗಳನ್ನು ಅರಿತವರು. ಪ್ರತಿಕೂಲ ಪರಿಸ್ಥಿತಿಯಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಹಾಗೂ ಹೀಗೂ ಪೂರೈಸಿ ವಕೀಲಿ ವೃತ್ತಿಯನ್ನು ಆರಂಭಿಸಿದರು. ವಕೀಲ ವೃತ್ತಿಯನ್ನು ಪ್ರಾಮಾಣಿಕ ರೀತಿಯಿಂದ ನಡೆಸುವಾಗಲೇ ಅವರಿಗೆ ರಾಜಕೀಯ ಕ್ಷೇತ್ರ ಕೈಮಾಡಿ ಕರೆಯಿತು. ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿದರೆ ತಮ್ಮಿಂದ ನಾಲ್ಕಾರು ಬಡಜನರಿಗೆ, ಅನ್ಯಾಯಕ್ಕೊಳಗಾದವರಿಗೆ, ತುಳಿತಕ್ಕೆ ಒಳಗಾದ ಹಿಂದುಳಿದ ಜನತೆಗೆ ಕಲ್ಯಾಣ ವಾದೀತೆಂಬ ಭಾವನೆಯಿಂದ ಇವರು ರಾಜಕೀಯಕ್ಕೆ ಬಂದರು. ಅವರಿಗೆ ಗಾಂಧೀಜಿಯವರು ನಡೆಸಿದ ಅಸಹಕಾರ ಅಂದೋಳನ, ಸ್ವಾತಂತ್ರ್ಯ ಸಂಗ್ರಾಮ ಚಳುವಳಿ ಇವೆಲ್ಲ ಅವರಲ್ಲಿ ಪ್ರೇರಣೆ ನೀಡಿದವು. ದೇಶ ಭಕ್ತಿ ಅವರಲ್ಲಿ ಉದಿಸಿತು. ದೇಶದ ಸ್ವಾತಂತ್ರ್ಯಕ್ಕಾಗಿ ತಾವೂ ತಮ್ಮ ಅಳಿಲು ಸೇವೆ ಸಲ್ಲಿಸಬೇಕೆಂದು ಸಂಕಲ್ಪ ಮಾಡಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. 1942ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಳ್ಳುವುದರೊಂದಿಗೆ ಅವರು ತಮ್ಮನ್ನು ಸಕ್ರಿಯವಾಗಿ ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡರು. 1944ರಲ್ಲಿ ಅವರು ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ತೀರ್ಥಹಳ್ಳಿ ಕ್ಷೇತ್ರದಿಂದ ಆಯ್ಕೆಗೊಂಡರು.

1. 1944ರಲ್ಲಿ ತೀರ್ಥಹಳ್ಳಿ ಕ್ಷೇತ್ರದ ವತಿಯಿಂದ ಆಯ್ಕೆಗೊಂಡ ನಂತರ ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಬಹುವಾಗಿ ಶ್ರಮಿಸಿದರು. ಬದುಕಿನ ಏಳು - ಬೀಳುಗಳನ್ನು ಅನುಭವಿಸಿದ ಇವರು ಬಡವರ, ಗೇಣಿದಾರರ ಕಲ್ಯಾಣಕ್ಕಾಗಿ"ಮಲೆನಾಡಿನ ಗೇಣಿದಾರರ ಸಂಘ" ವನ್ನು ಸ್ಥಾಪಿಸಿದರು. ಗೇಣಿ ಪ್ರಮಾಣ ನಿದಧಿ, ಗೇಣಿ ಪಾವತಿಗೆ ರಸೀದಿ ಪಡೆಯುವುದು, ಗೇಣಿ ತೂಕದಲ್ಲಿ ಅನ್ಯಾಯದ ತಡೆ, ಇತ್ಯಾದಿ ವಿಧಾಯಕವಾದ ಕ್ರಮಗಳನ್ನು ಕಟ್ಟು ನಿಟ್ಟಾಗಿ ಜಾರಿಗೆ ತರುವುದರ ಮೂಲಕ ಗ್ರಾಮೀಣ ಜನತೆಯಲ್ಲಿ ಜಾಗೃತಿಯನ್ನುಂಟು ಮಾಡಿದರು. ಮುಖ್ಯವಾಗಿ ಅವರು ಬಡ ಗೇಣಿದಾರರ ಮೇಲಾಗುವ ಶ್ರೀಮಂತರ, ಜಮೀನ್ದಾರರ ಶೋಷಣೆಯನ್ನು ತಡೆಯಲು ಯತ್ನಿಸಿದರು. ಈ ಕುರಿತಾದ ತಿಳಿವಳಿಕೆಯನ್ನು ಸಾಮಾನ್ಯ ಜನರಲ್ಲಿ ತುಂಬಲು ನಿರಂತರವಾಗಿ ಶ್ರಮಿಸಿದರು.

2. 1952ರಲ್ಲಿ ಅವರು ಮತ್ತೆ ತೀರ್ಥಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ವಿಧಾನಸಭೆಗೆ ಆಯ್ಕೆಗೊಂಡರು. ಆಗ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದರು. ಅವರ

ಸಚಿವ ಸಂಪುಟದಲ್ಲಿ ಇವರು ಕಂದಾಯ, ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದರು.? ತುಂಬ ಬಹಳ ಮಹತ್ವದ ಖಾತೆಗಳನ್ನು ಹೊಂದಿದ ಇವರು ತಮ್ಮ ಕ್ಷೇತ್ರದ ಅಭಿವೃದ್ಧಿಯನ್ನು ಮಾಡುವುದರ ಜೊತೆಗೆ ಇಡೀ ರಾಜ್ಯದ ಅಭಿವೃದ್ಧಾಗಿ ಪ್ರಾಮಾಣಿಕ ಪ್ರಯತ್ನ ನಡೆಸಿದರು. ಅವರು ಈ ಅವಧಿಯಲ್ಲಿ " ಸರಕಾರಿ ಭೂಮಿಯ ಹರಾಜಿನ ಮೂಲಕ ಶ್ರೀಮಂತರ ಪಾಲಾಗುತ್ತಿದ್ದುದನ್ನು ತಪ್ಪಿಸಲು ಹೊಸ ಕಾಮೂನನ್ನು ರಚಿಸಿ ಭೂಹೀನ ಕೃಷಿಕರಿಗೆ ಅನುಕೂಲವಾಗುವಂತೆ ಮಾಡಲು ಪ್ರಯತ್ನಿಸಿದರು".

3. 1954ರಲ್ಲಿ ಇವರು ದೇವಾದಾಯ ಧರ್ಮಾದಾಯ ಇನಾಂ ರದ್ಧತಿಗೆ ವಿಧೇಯಕವನ್ನು ಮಂಡಿಸಿದಾಗ ಕರ್ನಾಟಕದಾದ್ಯಂತ ಪ್ರತಿಭಟನೆ ವ್ಯಕ್ತವಾಯಿತು. ಇವರು ನಾಸ್ತಿಕರು ಎಂಬ ಆರೋಪವನ್ನು ಮಾಡಿದರು. ಆದರೆ ಕಡಿದಾಳ್ ಅವರು ದೇವರು - ಧರ್ಮದ ಹೆಸರಿನಲ್ಲಿ ನಡೆಯುವ ಮೌಢ್ಯವನ್ನು, ಕಂದಾಚಾರವನ್ನು ಶೋಷಣೆಯನ್ನು ತಪ್ಪಿಸಲು ಈ ವಿಧೇಯಕವನ್ನು ಮಂಡಿಸಿದರು. ಈ ವಿಧೇಯಕದ ಹಿಂದೆ ಇರುವ ಅವರ ಜನಪರ ಕಾಳಜಿಯನ್ನು, ಬಡ ಬಗ್ಗರ ಏಳ್ಗೆಗಾಗಿ ಇರುವ ಕಳಕಳಿಯನ್ನು ಅರಿಯುವೆವು. ತಮ್ಮ ಕ್ಷೇತ್ರದ ಬಡ ಜನರ, ಕೂಲಿಕಾರರ, ಹಿಂದುಳಿದವರ, ಶೋಷಿತರ ಏಳ್ಗೆಗಾಗಿ ಇಂಥ ವಿಧಾಯಕವಾದ ವಿಧೇಯಕಗಳನ್ನು ತಂದರು.

4. ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಳದಲ್ಲಿ ಕಂದಾಯ ಮಂತ್ರಿಗಳಾಗಿದ್ದಾಗ ಇವರು ಮೈಸೂರು ಗೇಣಿ ಶಾಸನವನ್ನು ಜಾರಿಗೆ ತಂದು ಮತ್ತು ಮೈಸೂರು ಇನಾಂ ಪದ್ಧತಿ ಮಸೂದೆ (1958) ಹಾಗೂ ಮೈಸೂರು ಇನಾಂ (ರದ್ದತಿ) ಮಸೂದೆ - (1958) ಶಾಸನಗಳನ್ನು ರಚಿಸುವಲ್ಲಿ ಯಶಸ್ವಿಯಾದರು. ಈ ಎರಡೂ ಮಸೂದೆಗಳು ಅಂದಿನ ಕಾಲದಲ್ಲಿ ಕ್ರಾಂತಿಕಾರಿ ಶಾಸನಗಳೆನ್ನಿಸಿದುವು. ಇವು ಸಮಾಜವಾದಕ್ಕೆ ಪೂರಕವಾದವುಗಳೆಂದು ಪರಿಗಣಿತವಾದಂಥವು. ಕರ್ನಾಟಕದಲ್ಲಿ ಅದರಲ್ಲೂ ಶಿವಮೊಗ್ಗಾ - ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಸಮಾಜವಾದವನ್ನು ಅನುಷ್ಠಾನಕ್ಕೆ ತರುವಲ್ಲಿ ಇವರು ಪಟ್ಟ ಶ್ರಮ ತುಂಬ ಸಾರ್ಥಕವಾದುದಾಗಿದೆ. ಇವರು ತಮ್ಮ ಜಿಲ್ಲೆಯ ಜನತೆಯಲ್ಲಿ ರಾಜಕೀಯ ಹಾಗೂ ವೈಚಾರಿಕ ಜಾಗೃತಿಯನ್ನು ಉಂಟುಮಾಡಿದರು. ಇದರ ಫಲವಾಗಿಯೇ ಶ್ರೀ ಜೆ. ಹೆಚ್. ಪಟೇಲರು, ಗೋಪಾಲಗೌಡ, ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ ಹಿಂದುಳಿದ ಜನಾಂಗದಿಂದ ಬಂದವರು. ಭೂ ಮಾಲೀಕರಿಗೆ ಕೂಲಿ ಆಳಾಗಿದ್ದ ಇಂಥ ಜನಾಂಗ ರಾಜಕೀಯದಲ್ಲಿ ಮುಂದೆ ಬರಬೇಕಾದರೆ ತುಂಬ ಪರಿಶ್ರಮ ಪಡಬೇಕಾಗುವುದು. ಇದಕ್ಕೆ ಯಾರಾದರೂ ಮುಖಂಡರ ಸಹಾಯಬೇಕು. ಕಡಿದಾಳ ಮಂಜಪ್ಪನವರು ಇಂಥವರಲ್ಲಿ ಧೈರ್ಯ, ಶಕ್ತಿ ತುಂಬಿ ಮುನ್ನಡೆಸುವಲ್ಲಿ ಯಶಸ್ವಿಯಾದರು. ತಮ್ಮ ಕ್ಷೇತ್ರದಲ್ಲಿ ಗೇಣಿದಾರರನ್ನು ಸಂಘಟಿಸಿ ಒಂದು ಸಂಘವನ್ನೇ ಮಾಡಿದರು. ಭೂ ಮಾಲೀಕರು ಮತ್ತು ಶ್ರೀಮಂತರು ಕೂಲಿಕಾರರನ್ನು, ಬಡರೈತರನ್ನು ಶೋಷಿಸುತ್ತಿದ್ದುದನ್ನು ಪ್ರತಿಭಟಿಸುವಂತೆ ಬಡಜನರಿಗೆ, ರೈತರಿಗೆ ತಿಳಿ ಹೇಳಿದರು. ಅವರಲ್ಲಿ ಅಂಥ ಪ್ರತಿಭಟನಾ ಶಕ್ತಿಯನ್ನು ತುಂಬಿದರು. ಒಟ್ಟಿನಲ್ಲಿ ಮಂಜಪ್ಪನವರು ತಮ್ಮ ಕ್ಷೇತ್ರದ ಜನ ಸಾಮಾನ್ಯರಲ್ಲಿ ವೈಚಾರಿಕತೆಯನ್ನು, ಧೈರ್ಯವನ್ನು ತುಂಬಿ ಅವರು ಒಳ್ಳೆಯ ಪ್ರಜೆಗಳಾಗಿ ಬದುಕುವಂತೆ ಶ್ರಮಿಸಿದರು. ಕರ್ನಾಟಕದಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಸಮಾಜವಾದವನ್ನು ತರಲು ಪ್ರಯತ್ನಿಸಿ ಸಫಲರಾದವರಲ್ಲಿ ಇವರು ಮೊಟ್ಟ ಮೊದಲಿಗರು. ಅವರು ಈ ಕಾರ್ಯವನ್ನು ತಮ್ಮ ಕ್ಷೇತ್ರದಿಂದಲೇ ಪ್ರಾರಂಭಿಸಿದರು.

5. ಕಡಿದಾಳ ಮಂಜಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಕಂದಾಯ ಅಫೀಲುಗಳನ್ನು ಪರಿಶೀಲಿಸಿ ಅರ್ಹರಿಗೆ ನ್ಯಾಯವನ್ನು ದೊರಕಿಸಿ ಕೊಡಲು ಪ್ರಾಮಾಣಿಕವಾಗಿ ಯತ್ನಿಸಿದರು. ಆ ಸಂದರ್ಭದಲ್ಲಿ ಅವರ ವಕೀಲ ಜ್ಞಾನ, ಅನುಭವಗಳು ತುಂಬ ನೆರವಾದುವು. ನ್ಯಾಯ ವಿತವಣೆಯ ಕಾರ್ಯವು ನಿಷ್ಪಕ್ಷವಾಗಿ ನಡೆಯಬೇಕಾದರೆ ಬೇರೊಬ್ಬರಿಗೆ ನ್ಯಾಯ ವಿತರಣೆಯ ಅಧಿಕಾರ ಒದಗಿಸುವುದು ಸೂಕ್ತವೆಂದು ಭಾವಿಸಿ ಸರಕಾರಕ್ಕೆ ಮನವಿ ಸಲ್ಲಿಸಿದರು. ಅವರ ಸೂಚನೆಯ ಮೇರೆಗೆ "ರೆವಿನ್ಯೂ ಬೋರ್ಡ್" ಎಂಬ ಪ್ರತ್ಯೇಕ ಇಲಾಖೆಯು ಅಸ್ತಿತ್ವಕ್ಕೆ ಬಂದಿತು. ಈ ರೆವಿನ್ಯೂ ಬೋರ್ಡ್ ರೈತರಿಗೆ, ಬಡಜನರಿಗೆ ನ್ಯಾಯ ಒದಗಿಸುವಲ್ಲಿ ಅವರ ಕ್ಷೇತ್ರಕ್ಕಷ್ಟೇ ಅಲ್ಲದೆ ಇಡೀ ರಾಜ್ಯಕ್ಕೆ ಇದು ತುಂಬ ಅನುಕೂಲವಾಯಿತು.

6. ಮಲೆನಾಡಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಆರಂಭವಾದುದು ಕಡಿದಾಳರು ಲೋಕೋಪಯೋಗಿ ಸಚಿವರಾಗಿ ಯೋಜನೆಗಳನ್ನು ವ್ಯವಸ್ಥಿತವಾಗಿ ಕಾರ್ಯರೂಪಕ್ಕೆ ತಂದುದರಿಂದಲೇ, ತೀರ್ಥಹಳ್ಳಿ ಕ್ಷೇತ್ರದಲ್ಲಿ ರೈತರ ಬೇಡಿಕೆಗಳಿಗೆ ಸ್ಪಂದಿಸುವುದರೊಂದಿಗೆ ಅವರಲ್ಲಿ ವೈಚಾರಿಕ ಮನೋಭಾವನೆಯನ್ನು ಬಿತ್ತಿ ಬೆಳೆಯುವಲ್ಲಿ ಇವರು ಯಶಸ್ವಿಯಾದರು.

7. 1956ರಲ್ಲಿ 74 ದಿನ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸುವ ಅವಕಾಶ ಇವರಿಗೆ ಲಭ್ಯವಾಗಿತ್ತು. ಈ ಸಮಯದಲ್ಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿ ಪಟ್ಟಿ ತಯಾರಿಸುವ ಜವಾಬ್ದಾರಿ ಇವರಿಗಿತ್ತು. ಆಗ ಇವರ ಸ್ನೇಹಿತರು, ಬಂಧುಗಳು ಇವರ ಬಳಿ ಬಂದು ಒಕ್ಕಲಿಗ ಕೋಮಿಗೆ ಸೇರಿದವರನ್ನು ನೇಮಕ ಮಾಡಬೇಕೆಂದು ಇವರ ಮೇಲೆ ಒತ್ತಡ ತಂದರು. ಈ ಒತ್ತಡಕ್ಕೆ ಅವರು ಮಣಿಯಲಿಲ್ಲ. ಇಂಥ ಒತ್ತಡಗಳನ್ನು ಅವರು ಪ್ರತಿಭಟಿಸಿ, ತಳ್ಳಿ ಹಾಕಿ ಅರ್ಹತೆ ಹಾಗೂ ಸೇವೆಯ ಆಧಾರದ ಮೇಲೆ ಅಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸಿದರು. ಇದರಿಂದ ಅವರು ಎಷ್ಟು ಪ್ರಾಮಾಣಿಕರಿದ್ದರು ಎಂಬುದು ನಮಗೆ ವಿದಿತವಾಗುವುದು. ಅವರ ಪ್ರಾಮಾಣಿಕತೆಯನ್ನು ದಕ್ಷತೆಯನ್ನು ಪ್ರಶ್ನಿಸುವಂತೆ ಇರಲಿಲ್ಲ. ಅವರು ಎಷ್ಟೋ ಭ್ರಷ್ಟ ಹಾಗೂ ಅಪ್ರಾಮಾಣಿಕ ಅಧಿಕಾರಿಗಳನ್ನು ಅಮಾನತುಗೊಳಿಸಿ ಶಿಕ್ಷೆಗೆ ಗುರಿ ಪಡಿಸಿದುದನ್ನಿಲ್ಲಿ ಸ್ಮರಿಸಬಹುದು. ಇಂಥ ದಕ್ಷ ಹಾಗೂ ಪ್ರಾಮಾಣಿಕ ಆಡಳಿತ ಅವರ ಕ್ಷೇತ್ರಕ್ಕೂ ಅನ್ವಯವಾಗುವಂತೆ ಪ್ರಯತ್ನಿಸಿದರು.

8. 1960ರಲ್ಲಿ ಕಡಿದಾಳರು ಕರ್ನಾಟಕ ಭೂ ಸುಧಾರಣಾ ಮಸೂದೆಯನ್ನು ಜಾರಿಗೆ ತಂದರು. ಈ ಭೂ ಸುದಾರಣಾ ವಿಧೇಯಕವನ್ನು ಮಂಡಿಸಿದಾಗ ಹಲವಾರು ಶ್ರೀಮಂತ ರಾಜಕಾರಣಿಗಳು ಟೀಕೆ ಮಾಡಿದರು, ಖಂಡಿಸಿದರು. ಇವರ ಮಸೂದೆಯನ್ನು ವಿರೋಧಿಸಿದರು. ಆದರೂ ಇವರು ಧೃತಿಗೆಡದೆ, ಹಿಮ್ಮೆಟ್ಟದೆ ತಮ್ಮ ಕಾರ್ಯವನ್ನು ಸಮರ್ಥಿಸಿಕೊಂಡರು.

ಸಮಾಜ ಸುಧಾರಣೆ, ಬಡವರ ಉದ್ಧಾರ ಕೇವಲ ರಾಜಕಾರಣಿಗಳಿಂದಾಗಲಿ, ಸಮಾಜ ಸುಧಾರಕರಿಂದಾಗಲೀ ಆಗದು. ಇದಕ್ಕೆ ಜನತೆಯ ಸಹಕಾರವೂ ಬೇಕು. ಸರಕಾರ ಮಾಡಿದ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಬೇಕಾದರೆ ಜನತೆಯ ಪ್ರಾಮಾಣಿಕವಾದ ಸಹಕಾರ ಬೇಕು. ದೇಶದ, ಜನತೆಯ ಏಳ್ಗೆಗಾಗಿ ದುಡಿಯುವ ರಾಜಕಾರಣಿಗಳು ಹುಟ್ಟಿಬರಬೇಕೆಂದು ಕಡಿದಾಳರು ತಮ್ಮ ಜೀವಿತದ ಕೊನೆಯ ಗಳಿಗೆಯಲ್ಲಿ ಹೇಳುತ್ತಿದ್ದರು. ರಾಜಕಾರಣಿಗಳು

ಪ್ರಾಮಾಣಿಕರಾಗಿರಬೇಕು, ನೀತಿವಂತರಾಗಿರಬೇಕು. ಅಂದಾಗ ಜನ ಅವರನ್ನು ಮುಖಂಡರೆಂದು ಭಾವಿಸುವರು. ಅಂಥ ಮುಖಂಡರಿಂದ ಸಮಾಜದ ಏಳ್ಗೆ ಆಗುವುದು; ಎನ್ನುತ್ತಿದ್ದರು. ಆದರೆ ಅವರು ತಮ್ಮ ಜೀವಿತಾವದಿಯಲ್ಲಿ ಅಂಥ ದಿನಗಳನ್ನು ಕಾಣಲೇ ಇಲ್ಲ, "ಎಲ್ಲಿಯವರೆಗೆ ರಾಜಕಾರಣದಲ್ಲಿ ಬ್ರಷ್ಟರ ಕೈವಾಡ ಹೆಚ್ಚಾಗಿರುತ್ತದೆಯೋ ಅಲ್ಲಿಯವರೆಗೆ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಸುಧಾರಣೆ ಮತ್ತು ಪ್ರಗತಿ ಸಾಧ್ಯವಿಲ್ಲ" ಎಂದು ಸೂಚಿಸಿದರು. ಸಮಾಜ ಸುಧಾರಣೆ ಆಗಬೇಕಾದರೆ, ಜನ ನೆಮ್ಮದಿಯಿಂದ ಬದುಕಬೇಕಾದರೆ ಮೇಲಿನಿಂದ ಸುಧಾರಣೆ ಆಗಬೇಕು ಇಲ್ಲವೆ ಕೆಳಗಡೆಯಿಂದ ಕ್ರಾಂತಿ ಆಗಬೇಕು. ಈ ದೇಶದಲ್ಲಿ ಇವೆರಡೂ ಆಗುವ ಸಂಭವವಿಲ್ಲವೆಂದು ಅವರು ಬಹುವಾಗಿ ನೊಂದರು. ಅವರ ಜೀವಿತದ ಕೊನೆಯ ದಿನಗಳು ಸುಖಕರವಾಗಿರಲಿಲ್ಲ. ಅವರು ತಮ್ಮ ಶಕ್ತ್ಯಾನುಸಾರ ತಮ್ಮ ಕ್ಷೇತ್ರಕ್ಕೆ, ಕ್ಷೇತ್ರದ ಜನತೆಗೆ ಹಿತಕಾರಿಯಾದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡರು. ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದರ ಜೊತೆಗೆ ಅವರು ತಮ್ಮ ಕ್ಷೇತ್ರದ ಜನತೆಯಲ್ಲಿ ಅದೂ ಕೆಳವರ್ಗದ ಜನತೆಯಲ್ಲಿ ಆತ್ಮಾಭಿಮಾನವನ್ನು ತುಂಬಿ ಅವರನ್ನು ರಾಜಕೀಯವಾಗಿ ಜಾಗೃತಗೊಳಿಸಿದರು. ಇದುವೇ ಮಂಜಪ್ಪನವರು ತಮ್ಮ ಕ್ಷೇತ್ರಕ್ಕೆ ಮತ್ತು ಇಡೀ ರಾಜ್ಯಕ್ಕೆ ನೀಡಿದ ಕೊಡುಗೆಯಾಗಿದೆ.

ಈ ಮೇಲಿ ಸೂಚಿಸಿದ ಅಭಿವೃದ್ಧಿ ಕಾರ್ಯಗಳು ಕೇವಲ ರಾಜ್ಯಕ್ಕೆ ಸೀಮಿತವಾಗಿರದೆ ತಮ್ಮ ಕ್ಷೇತ್ರಕ್ಕೂ ಅನ್ವಯವಾಗುವಂತೆ ಆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡರು.

* * * * *

ಕಾಸೂ. 01, ಸಶಾಮು. ತುಮಕೂರು, 1,000 ಪ್ರತಿಗಳು ದಿ: 04-08-2001.